# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜೂನ್ 6, 2021

ಸಂಪುಟ : 48 ಸಂಚಿಕೆ : 23 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ವೃತ್ತಿ ಶಿಕ್ಷಣಕ್ಕೆ ಸಿಇಟಿ ಅಂಕಗಳ ಮಾನದಂಡ

ಬೆಂಗಳೂರು, ಜೂ.5 - ಮೆಡಿಕಲ್, ಇಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಶಿಕ್ಷಣ ಪ್ರವೇಶ ಪಡೆಯಲು ಸಿಇಟಿಯ ಅಂಕಗಳನ್ನೇ ಪರಿಗಣಿಸಲಾಗುವುದು ಎಂದು ಉನ್ನತ ಶಿಕ್ಷಣ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥ ನಾರಾಯಣ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯದೇ ಎಲ್ಲ ವಿದ್ಯಾರ್ಥಿಗಳಿಗೂ ಬಡ್ತಿ ನೀಡಲಾಗಿದೆ. ಈ ಫಲಿತಾಂಶವನ್ನು ಆಧಾರವಾಗಿಟ್ಟು ಕೊಂಡು ಉನ್ನತ ಪ್ರವೇಶ ಶಿಕ್ಷಣ ಅಸಾಧ್ಯ. ಈ ಹಿನ್ನೆಲೆಯಲ್ಲಿ ಸಿಇಟಿ ಪ್ರವೇಶ ಪರೀಕ್ಷೆಯ ಫಲಿತಾಂಶವನ್ನೇ ಮಾನದಂಡ ವಾಗಿಟ್ಟು ಕೊಂಡು ವೃತ್ತಿಪರ ಶಿಕ್ಷಣ ಸೀಟು ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಈ ಸಂಬಂಧ ಅಧಿಕಾರಿಗಳೊಟ್ಟಿಗೆ ಸಮಾಲೋಚನೆ ನಡೆಸಿ, ಅಗತ್ಯ ಕಾನೂನು ತಿದ್ದುಪಡಿ ತಂದು ವಿದ್ಯಾರ್ಥಿ ಗಳಿಗೆ ಪ್ರವೇಶಾವಕಾಶ ಮಾಡಿಕೊಡಲಾಗುವುದು ಎಂದವರು ಹೇಳಿದ್ದಾರೆ.

ಈ ಕ್ರಮಕ್ಕಾಗಿ ಮುಖ್ಯಮಂತ್ರಿ ಜೊತೆಗೆ ಚರ್ಚೆ ಮಾಡುತ್ತೇವೆ. ಇದಕ್ಕೆ ಕೆಲವು ತಿದ್ದುಪಡಿ ತರಬೇಕಾಗುತ್ತದೆ. ಆ ನಿಟ್ಟಿನಲ್ಲಿ ಏನು ಮಾಡಬೇಕೋ ಅದನ್ನು (4ನೇ ಪುಟಕ್ಕೆ)

## ಜಿಲ್ಲೆಯಲ್ಲಿ 14 ರವರೆಗೆ ಲಾಕ್‌ಡೌನ್ ವಿಸ್ತರಣೆ

ದಾವಣಗೆರೆ, ಜೂ.5 - ಜಿಲ್ಲೆಯಾ ದ್ಯಂತ ಜೂನ್ 14 ರವರೆಗೆ ಸಂಪೂರ್ಣ ಲಾಕ್‌ಡೌನ್ ಮುಂದುವರೆಸಿ ಆದೇಶಿಸಿ ರುವ ಜಿಲ್ಲಾಧಿಕಾರಿ ಗಳು, ಸಾರ್ವಜನಿ ಕರಿಗೆ ಅಗತ್ಯ ವಸ್ತು ಗಳನ್ನು ಖರೀದಿಸಲು ಜೂ. 7, 9 ಹಾಗೂ 11 ರಂದು ಬೆಳಿಗ್ಗೆ 6 ರಿಂದ ಮಧ್ಯಾಹ್ನ 12 ಗಂಟೆವರೆಗೆ ಅನುಮತಿ ನೀಡಿದ್ದಾರೆ.

**ಅಗತ್ಯ ವಸ್ತುಗಳ ಖರೀದಿಗೆ ಜೂ. 7, 9, 11 ರಂದು ಅವಕಾಶ : ಜಿಲ್ಲಾಧಿಕಾರಿ**

ಈ ಅವಧಿ ಯಲ್ಲಿ ಕಿರಾಣಿ ಅಂಗಡಿಗಳು, ದಿನಸಿ, ಹಣ್ಣು, ತರಕಾರಿ, ಮಾಂಸ ಮತ್ತು ಮೀನು ಹಾಗೂ ಮದ್ಯದ ಅಂಗಡಿ ತೆರೆಯಲು ಮಾತ್ರ ಅವಕಾಶ ನೀಡಲಾಗಿದೆ.

ಸರಕು ಸಾಗಣೆ ವಾಹನಗಳಿಗೆ ಸಂಚಾರಕ್ಕೆ ಅವಕಾಶವಿರುವ ಹಿನ್ನೆಲೆಯಲ್ಲಿ (4ನೇ ಪುಟಕ್ಕೆ)


## 2 ತಿಂಗಳಲ್ಲೇ ಅತಿ ಕಡಿಮೆ ಕೊರೊನಾ

ನವದೆಹಲಿ, ಜೂ. 5 – ದೇಶದಲ್ಲಿ ಶನಿವಾರ 1.20 ಲಕ್ಷ ಕೊರೊನಾ ಪ್ರಕರಣಗಳು ಕಂಡು ಬಂದಿವೆ. ಇದು ಎರಡು ತಿಂಗಳಲ್ಲಿಯೇ ಅತಿ ಕಡಿಮೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಇದೇ ದಿನ 3,380 ಸೋಂಕಿತರು ಸಾವನ್ನಪ್ಪಿದ್ದಾರೆ ಸಕ್ರಿಯ ಸೋಂಕಿತರ ಸಂಖ್ಯೆ 15.55 ಲಕ್ಷದಷ್ಟಿದೆ. ಇದು ಒಟ್ಟು ಸೋಂಕಿತರ ಶೇ.5.73ರಷ್ಟಾಗಿದೆ.

## ರಾಜ್ಯದಲ್ಲಿ 13,800 ಸೋಂಕಿತರು ಪತ್ತೆ

ಬೆಂಗಳೂರು, ಜೂ. 5 – ರಾಜ್ಯದಲ್ಲಿ ಶನಿವಾರ 13,800 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ 365 ಜನ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. (4ನೇ ಪುಟಕ್ಕೆ)

## ಲಸಿಕೆ ಜಾಗೃತಿ : ಪುನೀತ್ ರಾಯಭಾರಿ



ಬೆಂಗಳೂರು, ಜೂ.5 - ಕೊರೊನಾ ಬಗ್ಗೆ ಜಾಗೃತಿ ಮೂಡಿ ಸಲು ಎಫ್‌ಐಸಿಸಿಐ, ಐಬಿಎಫ್, ಐಎಂಎ ವತಿಯಿಂದ ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಜಾಗೃತಿ ವಿಡಿಯೋ ಮಾಡಿದ್ದು ಕನ್ನಡ ಅವತರಣಿಕೆಯಲ್ಲಿ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಲಸಿಕೆ ಬಗ್ಗೆ ಜಾಗೃತಿ ಮೂಡಿಸಿದ್ದಾರೆ. ಕೊರೊನಾ ವಿರುದ್ಧ ದೇಶಾದ್ಯಂತ ಲಸಿಕೆ (4ನೇ ಪುಟಕ್ಕೆ)

## ಜಿಲ್ಲೆಯಲ್ಲಿ 529 ಪಾಸಿಟಿವ್

ದಾವಣಗೆರೆ, ಜು.5- ಜಿಲ್ಲೆಯಲ್ಲಿ ಶನಿವಾರ 529 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 511 ಜನರು ಗುಣಮುಖರಾಗಿದ್ದಾರೆ. ನಾಲ್ವರು ಮೃತಪಟ್ಟಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 225, ಹರಿಹರ 92, ಜಗಳೂರು 19, ಚನ್ನಗಿರಿ 97, ಹೊನ್ನಾಳಿ 75 ಹಾಗೂ ಹೊರ ಜಿಲ್ಲೆಯ 21 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಹರಿಹರ ವಿದ್ಯಾನಗರದ 60 ವರ್ಷದ ಪುರುಷ, ಹೊನ್ನಾಳಿ ತಾಲ್ಲೂಕಿನ 33 ವರ್ಷದ ಮಹಿಳೆ, ಕಮಲಾಪುರದ (4ನೇ ಪುಟಕ್ಕೆ)


### ವೈಕುಂಠ ಸಮಾರಾಧನೆ



**ಶ್ರೀ ಯಲ್ಲಪ್ಪ ಸಿದ್ದಾಪುರ್**


ಅವರು ಜೀವನದ ಅದ್ಭುತ ಪಯಣ ಮುಗಿಸಿ ನಮ್ಮೆಲ್ಲರಿಂದ ದೂರವಾಗಿದ್ದಾರೆ. ವೈಕುಂಠ ಸಮಾರಾಧನೆಯು ದಿನಾಂಕ:06.06.2021 ಭಾನುವಾರ ಬೆಳಿಗ್ಗೆ 11:30 ಗಂಟೆಗೆ ಕೃಪಾಶಂಕರ್ ಬಿಲ್ಡಿಂಗ್, 1ನೇ ಮೇನ್, 1ನೇ ಕ್ರಾಸ್, ಹಲಗೇರಿ ಮುಖ್ಯ ರಸ್ತೆ, ಬೀರೇಶ್ವರ ನಗರ, ಬೀರೇಶ್ವರ ದೇವಸ್ಥಾನದ ಹತ್ತಿರ, ರಾಣೇಬೆನ್ನೂರು-581115 ಸ್ವಗೃಹದಲ್ಲಿ ನೆರವೇರಲಿದೆ.

ಸದಾ ನಿಮ್ಮ ಸ್ಮರಣೆಯಲ್ಲಿ
ಪತ್ನಿ : ಶ್ರೀಮತಿ ವೈ.ಎಸ್. ಗೌರಮ್ಮ
ಮಕ್ಕಳು, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು

ಮೊ: 8884044912



### ಸಾರ್ಥಕ ದಾಂಪತ್ಯದ ಸುವರ್ಣ ಸಂಭ್ರಮದ ಹಾರ್ದಿಕ ಶುಭಾಶಯಗಳು



**ಶ್ರೀಮತಿ ಗಿರಿಜಾ ಕಾಡಯ್ಯನಮಠ ಮತ್ತು ಶ್ರೀ ಎನ್.ಎಂ. ಕಾಡಯ್ಯನಮಠ**

ದಿನಾಂಕ : 06.06.1971 - 06.06.2021

ಸುಮಧುರ ದಾಂಪತ್ಯ ಜೀವನದ
50 ವಸಂತಗಳನ್ನು ಪೂರೈಸಿದ ನಿಮಗೆ ಶಿವ-ಸಾಯಿ ಆರೋಗ್ಯ-ಆಯಸ್ಸು, ಸಕಲ ಸಂಪತ್ತುಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ

ಪುತ್ರಿಯರಾದ : ಶ್ರೀಮತಿ ಸುಪ್ರಿಯಾ ಮತ್ತು ಚಂದ್ರಶೇಖರ್
ಶ್ರೀಮತಿ ಸೌಜನ್ಯ ಮತ್ತು ಚಿದಾನಂದ
ಪುತ್ರ : ಶ್ರೀ ಸುಶಾಂತ್ ಮತ್ತು ಶ್ರೀಮತಿ ಶ್ರುತಿ
ಮೊಮ್ಮಕ್ಕಳು : ಚಿ|| ಅನ್ವಿತ, ಚಿ|| ಅಥರ್ವ, ಚಿ|| ಅರ್ಣವ
ಆತ್ಮೀಯ ಬಂಧುಗಳು ಹಾಗೂ ಸ್ನೇಹ ಬಳಗ



ADVERTORIAL




### ಮಧ್ಯಕರ್ನಾಟಕದ ಅತ್ಯಾಧುನಿಕ ಮಕ್ಕಳ ಹೃದಯರೋಗ ಆಸ್ಪತ್ರೆ

ನೀವು ದಾವಣಗೆರೆಯಲ್ಲಿ ವಾಸಿಸುತ್ತಿದ್ದು, ನಿಮ್ಮ ಮಕ್ಕಳು ಹೃದಯ ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿದ್ದರೆ, ನೀವು ಉತ್ತಮ ಮಕ್ಕಳ ಹೃದಯರೋಗ ತಜ್ಞರನ್ನು ಹುಡುಕುವುದು ಅಗತ್ಯವಾಗುತ್ತದೆ. ದಾವಣಗೆರೆ ಎಸ್.ಎಸ್.ನಾರಾಯಣ ಹಾರ್ಟ್ ಸೆಂಟರ್‌ನ ಮಕ್ಕಳ ಹೃದಯ ತಜ್ಞರು, ನವಜಾತ ಶಿಶುಗಳು ಮತ್ತು ಮಕ್ಕಳ ಎಲ್ಲ ಬಗೆಯ ಹೃದಯ ಸಮಸ್ಯೆಗಳನ್ನು ಪತ್ತೆ ಮಾಡಿ ಸೂಕ್ತ ಚಿಕಿತ್ಸೆ ನೀಡಲು ಶಕ್ತರಿದ್ದಾರೆ. ಮಕ್ಕಳು ವಿವಿಧ ಬಗೆಯ ಹೃದಯ ಸಮಸ್ಯೆಗಳನ್ನು ಎದುರಿಸಬಹುದು ಹಾಗೂ ಶಿಶುಗಳಲ್ಲಿ ಜನ್ಮಜಾತವಾದ ಹೃದಯ ಸಂಬಂಧಿ ದೋಷಗಳು ಇರಬಹುದು. ಇದಕ್ಕೆ ಮುಖ್ಯವಾಗಿ ಅನಾರೋಗ್ಯಕರ ಜೀವನಶೈಲಿ, ಗರ್ಭಿಣಿಯರಾಗಿದ್ದಾಗ ಮದ್ಯಪಾನ ಅಥವಾ ಧೂಮಪಾನದಂತಹ ಹವ್ಯಾಸ, ತಾಯಂದಿರ ಮೊದಲ ತ್ರೈಮಾಸಿಕದಲ್ಲಿ ವೈರಸ್ ಸೋಂಕು ಹಾಗೂ ವಂಶ ಪಾರಂಪರ್ಯ ಕಾರಣಗಳು ಇರಬಹುದು. ದಾವಣಗೆರೆಯಲ್ಲಿ ಅತ್ಯುತ್ತಮ ಹೃದಯ ರೋಗ ತಜ್ಞರನ್ನು ಆಯ್ಕೆ ಮಾಡಿಕೊಳ್ಳಲು ನೀವು ನಾರಾಯಣ ಹೆಲ್ತ್ ಗ್ರೂಪ್‌ನ ವೈದ್ಯರನ್ನು ಆಯ್ಕೆ ಮಾಡಿಕೊಳ್ಳಬಹುದು. ಮಕ್ಕಳಲ್ಲಿ ಇಂಥಹ ಸಮಸ್ಯೆಗಳನ್ನು ತಡೆಯಲು ಮತ್ತು ಸೂಕ್ತ ಚಿಕಿತ್ಸೆಯನ್ನು ನೀಡಲು ಇವರಿಗೆ ವಿಶೇಷ ತರಬೇತಿ ನೀಡಲಾಗಿರುತ್ತದೆ. ಈ ತಜ್ಞ ವೈದ್ಯರು ಸಾಮಾನ್ಯವಾಗಿ ತಾವು ವಿಶೇಷ ಪರಿಣತಿ ಪಡೆದಿರುವ ಕ್ಷೇತ್ರಗಳಲ್ಲಿ ಹೆಚ್ಚುವರಿ ವ್ಯಾಸಂಗ ಮತ್ತು ವಿಶೇಷ ತರಬೇತಿಯನ್ನು ಪಡೆದಿರುತ್ತಾರೆ.

ದಾವಣಗೆರೆಯಲ್ಲಿರುವ ಎಸ್‌ಎಸ್ ನಾರಾಯಣ ಹಾರ್ಟ್ ಸೆಂಟರ್‌ನ ಮಕ್ಕಳ ಹೃದಯ ತಜ್ಞರು, ನವಜಾತ ಶಿಶುಗಳು ಮತ್ತು ಮಕ್ಕಳಲ್ಲಿ ಕಂಡುಬರುವ ಹೃದಯ ಸಮಸ್ಯೆಗಳನ್ನು ಸೂಕ್ತವಾಗಿ ಪತ್ತೆ ಮಾಡಿ ಚಿಕಿತ್ಸೆ ನೀಡಬಲ್ಲರು. ಈ ಕೆಳಗಿನ ಹೃದಯ ಸಮಸ್ಯೆಗಳನ್ನು ಪತ್ತೆ ಮಾಡಿ ಚಿಕಿತ್ಸೆ ನೀಡುವಲ್ಲಿ ನಮ್ಮ ಮಕ್ಕಳ ಹೃದ್ರೋಗ ತಜ್ಞರು ನೈಪುಣ್ಯ ಹೊಂದಿದ್ದಾರೆ

.ಮಕ್ಕಳ ಹೃದಯರೋಗ ಚಿಕಿತ್ಸಾ ವಿಧಾನಗಳು
- ಡಿವೈಸ್ ಕ್ಲೋಸರ್ : ASD/ VSD/ PDA
- ಬಲೂನ್ ಆಂಜಿಯೋಪ್ಲಾಸ್ಟಿ : ಪಲ್ಮನರಿ ಸ್ಟಿನೋಸಿಸ್/ ಅಯೋರ್ಟಿಕ್ ಸ್ಟಿನೋಸಿಸ್/ ಕೊಯಾರ್ಕ್‌ಟೇಶನ್ ಆಫ್ ಅಯೋಟಾ / ಬ್ರ್ಯಾಂಚ್ ಪಿಎ ಸ್ಟೆನೋಸಿಸ್
- ಟೆಂಪರರಿ / ಪರ್ಮನೆಂಟ್ ಪೇಸ್‌ಮೇಕರ್ ಇಂಪ್ಲಾಂಟೇಶನ್
- ಡಯಾಗ್ನೋಸ್ಟಿಕ್ ಕ್ಯಾಥಟರೈಸೇಶನ್

ಮಕ್ಕಳ ಹೃದಯ ಶಸ್ತ್ರ ಚಿಕಿತ್ಸಾ ವಿಧಾನಗಳು
- ಅಸಿನೋಟಿಕ್ CHD's : ASD / VSD / PDA ಕೊಯಾರ್ಕ್‌ಟೇಶನ್
- ಸೈನೋಟಿಕ್ CHD's : TOF / TAPVC / TGA
- ಹೈಬ್ರಿಡ್ ಕಾಂಪ್ಲೆಕ್ಸ್ ಶಸ್ತ್ರಚಿಕಿತ್ಸೆಗಳಾದ ವೆಂಟ್ರಿಕ್ಯುಲರ್ VSD ಡಿವೈಸ್ ಕ್ಲೋಸರ್‌ಗಳು, RVOT ಸ್ಟೆಂಟಿಂಗ್, PDA ಸ್ಟೆಂಟಿಂಗ್ ಇತ್ಯಾದಿ
- ಮಿನಿಮಲ್ ಇನ್‌ವ್ಯಾಸಿವ್ ಹೃದಯ ಶಸ್ತ್ರಚಿಕಿತ್ಸೆಗಳಾದ ASD ಕ್ಲೋಸರ್‌ಗಳು, PAPVC ರಿರೊಟಿಂಗ್ ಇತ್ಯಾದಿ
- ಮಕ್ಕಳ ಹೃದಯ ವ್ಯಾಲ್ವ್ ರಿಪೇರ್‌ಗಳು

ಹಲವು ಬಗೆಯ ಜನ್ಮಜಾತ ಹೃದಯ ದೋಷಗಳಾದ ಹುಟ್ಟುವಾಗ ಅತಿ ಕಡಿಮೆ ತೂಕದ ಸಮಸ್ಯೆ, ಎದೆ ನೋವು, ನೀಲಿ ತುಟಿಗಳು, ವಿಳಂಬಿತ ಬೆಳವಣಿಗೆ, ಹಾಲುಣಿಸುವಲ್ಲಿ ತೊಂದರೆ ಇತ್ಯಾದಿ ಹೃದಯ ರೋಗ ಲಕ್ಷಣಗಳು ಕಂಡುಬಂದಲ್ಲಿ ಸೂಕ್ತ ಚಿಕಿತ್ಸೆ ಒದಗಿಸಲಾಗುವುದು.

ನಮ್ಮ ಸೌಲಭ್ಯವನ್ನು ಮಕ್ಕಳ ಚಿಕಿತ್ಸೆಗಾಗಿ ನೀವು ಆಯ್ಕೆ ಮಾಡಿಕೊಂಡಾಗ ಅತ್ಯುತ್ತಮ ಮಕ್ಕಳ ಹೃದಯರೋಗ ಶಾಸ್ತ್ರಜ್ಞರು ಮತ್ತು ವಿಶೇಷ ಪರಿಣತಿಯ ತಜ್ಞರನ್ನೊಳಗೊಂಡ ಸಮರ್ಥ ವೈದ್ಯರ ತಂಡವನ್ನು ನೀವು ನಿರೀಕ್ಷಿಸಬಹುದಾಗಿದೆ.

ಇಂತಿ ತಮ್ಮ ವಿಶ್ವಾಸಿ
ಶ್ರೀ ಶಶಿಕುಮಾರ್ ಪಟ್ಟಣಶೆಟ್ಟಿ – ವ್ಯವಸ್ಥಾಪಕ ನಿರ್ದೇಶಕರು
ಎಸ್‌ಎಸ್ ನಾರಾಯಣ ಹಾರ್ಟ್ ಸೆಂಟರ್, ದಾವಣಗೆರೆ

95385 89633 180 0309 0309

ಎಸ್ ಎಸ್ ನಾರಾಯಣ ಹಾರ್ಟ್ ಸೆಂಟರ್, ಎನ್‌ಹೆಚ್-4 ಬೈಪಾಸ್ ರೋಡ್, ದಾವಣಗೆರೆ





### ಕೈಲಾಸ ಸಮಾರಾಧನೆ

|| ಶ್ರೀ ಓಬಳೇಶ್ವರ ಪ್ರಸನ್ನ ||

ದಾವಣಗೆರೆ ಶಿವಕುಮಾರಸ್ವಾಮಿ ಬಡಾವಣೆ ವಾಸಿ
**ಶ್ರೀಮತಿ ಸುಮಿತ್ರ ಕೆ.ಹೆಚ್. ಓಬಳಪ್ಪ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 19.05.2021ರ ಬುಧವಾರ ಬೆಳಿಗ್ಗೆ 10.30ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಕೆ.ಹೆಚ್. ಓಬಳಪ್ಪ**

ದಾವಣಗೆರೆ ಜಿಲ್ಲಾ ಪಂಚಾಯ್ತಿ ಸದಸ್ಯರು, ಲೋಕಿಕೆರೆ ಕೇತ್ರ, ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಎಸ್ಟಿ ಘಟಕ
ನಿವೃತ್ತ ಜಂಟಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು.

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಸಮಾರಾಧನೆ'ಯನ್ನು
ದಿನಾಂಕ 06.06.2021ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಹೂವಿನಮಡು ಗ್ರಾಮದ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಪತ್ನಿ : ಶ್ರೀಮತಿ ಸುಮಿತ್ರ ಕೆ.ಹೆಚ್. ಓಬಳಪ್ಪ
ಮಕ್ಕಳಾದ : ಕೆ.ಓ. ಚೇತನಕುಮಾರ್, ಕೆ.ಓ. ಸಚಿನ್
ಬಂಧುಗಳಾದ :
ಶ್ರೀ ಟಿ. ಓಬಳಪ್ಪ, ಆಡಳಿತಾಧಿಕಾರಿ, ಶ್ರೀ ಮಹರ್ಷಿ ವಾಲ್ಮೀಕಿ ಮಹಾಸಂಸ್ಥಾನ ರಾಜನಹಳ್ಳಿ.
ಶ್ರೀ ಕೆ.ಹೆಚ್. ವಿಜಯಕುಮಾರ್, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದಾವಣಗೆರೆ.
ಶ್ರೀ ಎ.ಹೆಚ್. ಕುಬೇರಪ್ಪ, ಮಾಜಿ ಉಪಾಧ್ಯಕ್ಷರು, ಜಿಲ್ಲಾ ಪಂಚಾಯ್ತಿ, ದಾವಣಗೆರೆ.
ಶ್ರೀಮತಿ ಗೀತಾ ಶ್ರೀ ಟಿ. ಲಿಂಗೇಶ, ನಿವೃತ್ತ ಮುಖ್ಯ ಇಂಜಿನಿಯರ್, ಕೆಪಿಸಿ
ಶ್ರೀ ಎ.ಹೆಚ್. ರುದ್ರಪ್ಪ, ಸಹಾಯಕ ಇಂಜಿನಿಯರ್, ನೀರಾವರಿ ಇಲಾಖೆ, ಬ್ಯಾಡಗಿ.
ಶ್ರೀ ಎನ್.ಓ. ಮುರುಗೇಂದ್ರಪ್ಪ, ತಾಲ್ಲೂಕು ಪಂಚಾಯ್ತಿ ಸದಸ್ಯರು, ಲೋಕಿಕೆರೆ ಕ್ಷೇತ್ರ
ಹಾಗೂ ಹೂವಿನಮಡು ಗ್ರಾಮಸ್ಥರು.

# ಪರಿಸರ ಸಂರಕ್ಷಣೆ, ಮರ-ಗಿಡಗಳನ್ನು ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ

## ಪರಿಸರ ದಿನಾಚರಣೆಯಲ್ಲಿ ಜಗಳೂರಿನ ನ್ಯಾಯಮೂರ್ತಿ ಜಿ. ತಿಮ್ಮಯ್ಯ



ಜಗಳೂರು, ಜೂ.5- ಸಾಂಕ್ರಾಮಿಕ ರೋಗಗಳು ಉಲ್ಬಣವಾಗುತ್ತಿರುವ ಈ ಸಂದರ್ಭದಲ್ಲಿ ನಮ್ಮ ಸುತ್ತಮುತ್ತಲಿನ ಪರಿಸರ ರಕ್ಷಣೆ ಮತ್ತು ಗಿಡ ಮರಗಳನ್ನು ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು ಎಂದು ನ್ಯಾಯಾಧೀಶರು ಹಾಗೂ ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಜಿ. ತಿಮ್ಮಯ್ಯ ತಿಳಿಸಿದರು.

ತಾಲ್ಲೂಕು ಕಾನೂನು ಸೇವಾ ಸಮಿತಿ, ಹಾಗೂ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಪರಿಸರ ದಿನಾಚರಣೆಯ ಪ್ರಯುಕ್ತ ನ್ಯಾಯಾಲಯದ ಆವರಣದಲ್ಲಿ ಸಾಂಕೇತಿಕವಾಗಿ ಗಿಡ ನೆಟ್ಟು ಅವರು ಮಾತನಾಡಿದರು.

ಇಂದಿನ ಪರಿಸ್ಥಿಯಲ್ಲಿ ಗಿಡ ಮರಗಳನ್ನು ಕಾಪಾಡುವುದು ಅನಿವಾರ್ಯವೂ ಸಹ ಆಗಿರುತ್ತದೆ. ಆದ್ದರಿಂದ ಪರಿಸರ ದಿನಾಚರಣೆಯ ಅಂಗವಾಗಿ ಪ್ರತಿಯೊಬ್ಬರು ಒಂದು ಗಿಡ ನೆಡಬೇಕೆಂದು ಸಾರ್ವಜನಿಕರಿಗೆ ಕರೆ ನೀಡಿದರು.

ಹಿಂದಿನ ವರ್ಷದ ವಿಶ್ವ ಪರಿಸರ ದಿನದಂದು ತಾಲ್ಲೂಕಿನ ವಿವಿಧ ಶಾಲಾ ಕಾಲೇಜು, ಸರ್ಕಾರಿ ಕಛೇರಿ ಹಾಗೂ ಇತರೆ ಸ್ಥಳಗಳಲ್ಲಿ, ಮಾನ್ಯ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ ಹರ್ಬಲ್ ಹಾಗೂ ಔಷಧ ಸಸ್ಯಗಳನ್ನು ನೆಡಲಾಗಿತ್ತು. ಸದರಿ ಸಸ್ಯಗಳ ಬೆಳವಣಿಗೆ ಹಾಗೂ ಸ್ಥಿತಿಗತಿಗಳ ಬಗ್ಗೆ ವರದಿ ನೀಡಲು ಸದರಿ ಸ್ಥಳಗಳ ಸಂಬಂಧಪಟ್ಟ ಮುಖ್ಯಸ್ಥರಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ನ್ಯಾಯಾಲಯದ ಆವರಣದಲ್ಲಿ ಹಿಂದಿನ ವರ್ಷದ ಪರಿಸರ ದಿನಾಚರಣೆಯಲ್ಲಿ ನೆಟ್ಟ ಎಲ್ಲಾ ಗಿಡಗಳು ಚೆನ್ನಾಗಿ ಬೆಳವಣಿಗೆಯಾಗಿರುವುದು ಸಂತಸವಾಗಿದೆ ಎಂದು ನ್ಯಾಯಾಧೀಶರು ಹೇಳಿದರು.

# ಘನತ್ಯಾಜ್ಯ ಘಟಕ ನಿರ್ಮಾಣ ಸಮಸ್ಯೆ ಇತ್ಯರ್ಥ

ಮಲೇಬೆನ್ನೂರು, ಜೂ.5- ವಡೆಯರ ಬಸಾಪುರ ಗ್ರಾಮದ ಹೊಸ ಬಡಾವಣೆಯಲ್ಲಿ ಜಿಗಳಿ ಗ್ರಾ.ಪಂ. ವತಿಯಿಂದ ಸುಮಾರು 17.82 ಲಕ್ಷ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಶನಿವಾರ ಗ್ರಾಮಕ್ಕೆ ಭೇಟಿ ನೀಡಿದ ಶಾಸಕ ಎಸ್. ರಾಮಪ್ಪ , ಘನತ್ಯಾಜ್ಯ ಘಟಕ ನಿರ್ಮಿಸಲು ನಿಗದಿ ಮಾಡಿದ್ದ ಪಂಚಾಯ್ತಿ ಜಾಗವನ್ನು ಪರಿಶೀಲಿಸಿದಾಗ ಗ್ರಾಮಸ್ಥರು ಒಟ್ಟಾಗಿ ವಿರೋಧಿಸಿ, ಇಲ್ಲಿ ಯಾವ ಕಾರಣಕ್ಕೂ ಕಸ ವಿಲೇವಾರಿ ಘಟಕಕ್ಕೆ ಅವಕಾಶ ನೀಡುವುದಿಲ್ಲ. ಜಿಗಳಿ, ಬೇವಿನಹಳ್ಳಿ, ಬಸಾಪುರ ಗ್ರಾಮಗಳ ಕಸವನ್ನು ಇಲ್ಲಿ ಹಾಕುವುದರಿಂದ ಇಲ್ಲಿಯ ವಾತಾವರಣ ಕೆಟ್ಟು ಹೋಗುತ್ತಿದೆ. ಆದ್ದರಿಂದ ನಮ್ಮ ಗ್ರಾಮಕ್ಕೆ ನೀಡಿರುವ ರುದ್ರಭೂಮಿ ಜಾಗ ಖಾಲಿ ಇದ್ದು, ಬೇಕಾದರೆ ಅಲ್ಲಿ ಘಟಕ ನಿರ್ಮಿಸಿ, ಅದಕ್ಕೆ ನಮ್ಮ ವಿರೋಧ ಇಲ್ಲ ಎಂದು ಗ್ರಾಮಸ್ಥರು ಹೇಳಿದರು.



ಮಲೇಬೆನ್ನೂರು

ಆಗ ಶಾಸಕ ರಾಮಪ್ಪ ಅವರು ಗ್ರಾಮಸ್ಥರು ಹಾಗೂ ಅಧಿಕಾರಿಗಳೊಂದಿಗೆ ಸಾರ್ವಜನಿಕ ರುದ್ರಭೂಮಿ ಜಾಗವನ್ನು ವೀಕ್ಷಿಸಿ, ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣಕ್ಕೆ ಈ ಜಾಗ ಸೂಕ್ತವಾಗಿದ್ದು, ನಾಳೆಯೇ ಜಾಗವನ್ನು ಹದ್ದುಬಸ್ತು ಮಾಡಿಸಿ ಕೆಲಸ ಪ್ರಾರಂಭಿಸುವಂತೆ ಪಿಡಿಒ ದಾಸರ ರವಿ , ತಾ.ಪಂ. ಇಒ ಗಂಗಾಧರಪ್ಪ, ಜಿ.ಪಂ. ಎಇಇ ಗಿರೀಶ್ ಅವರಿಗೆ ಸೂಚಿಸಿದರು.

ಮುಖಂಡರಾದ ಬಿ. ವೀರಯ್ಯ, ಹೆಚ್. ಎಸ್. ವೀರಭದ್ರಯ್ಯ, ಸಿ. ಎಂ. ಗದಿಗೆಯ್ಯ, ಎಂ.ಎಸ್. ಕರಿಬಸಯ್ಯ, ಹೆಚ್.ಡಿ. ಆನಂದಯ್ಯ, ಎಂ. ಲೋಕಯ್ಯ, ಕಿರಿಗೇರಿ ವೀರಭದ್ರಯ್ಯ, ಹೆಚ್.ಕೆ. ಜಗದೀಶಯ್ಯ, ಕುಬೇರಸ್ವಾಮಿ ಮತ್ತಿತ ರರು, ಬಸಾಪುರ ಸರ್ವೆ ನಂಬರ್‌ನಲ್ಲಿರುವ ಖರಾಬು ಜಮೀನಿನಲ್ಲಿ ರುದ್ರಭೂಮಿಗೆ ಜಾಗ ಒದಗಿಸುವಂತೆ ಶಾಸಕ ರಾಮಪ್ಪನವರಿಗೆ ಕೇಳಿಕೊಂಡಾಗ ಆ ಜಾಗವನ್ನು ನೋಡಿ, ಈ ಬಗ್ಗೆ ಕ್ರಮಕೈಗೊಳ್ಳುವಂತೆ ಸ್ಥಳದಲ್ಲಿಯೇ ಹೇಳಿದರು.

ಜಿಗಳಿ ಗ್ರಾ.ಪಂ. ಅಧ್ಯಕ್ಷೆ ಕರಿಯಮ್ಮ, ಉಪಾಧ್ಯಕ್ಷ ಆನಂದಗೌಡ, ಸದಸ್ಯರಾದ ಎ.ಕೆ. ಹನುಮಂತಪ್ಪ, ಎನ್.ಎಂ. ಪಾಟೀಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಮಾಳಿಗೇರ ಕರಿಬಸಯ್ಯ ಇನ್ನಿತರರು ಹಾಜರಿದ್ದರು.

## ದಾವಿವಿಯಿಂದ ವಿವಿಧ ಸಂಶೋಧನಾ ಸ್ಥಾನಗಳಿಗೆ ಅರ್ಜಿ

ದಾವಣಗೆರೆ, ಜೂ.5- ದಾವಣಗೆರೆ ವಿಶ್ವವಿದ್ಯಾನಿಲಯ ವತಿಯಿಂದ ಪಿ.ಹೆಚ್.ಡಿ, ಪಿ.ಡಿ.ಎಫ್, ಡಿ.ಎಸ್‌ಸಿ, ಡಿ.ಲಿಟ್, ಸಂಶೋಧನಾ ಸ್ಥಾನಗಳಿಗೆ ಅರ್ಜಿ ಸಲ್ಲಿಕೆ ಅವಧಿಯನ್ನು ಜೂನ್ 7 ರವರೆಗೆ ವಿಸ್ತರಿಸಲಾಗಿದೆ. ಪಿ.ಹೆಚ್.ಡಿ, ಪಿ.ಡಿ.ಎಫ್, ಡಿ.ಎಸ್‌ಸಿ, ಡಿ.ಲಿಟ್, ಸಂಶೋಧನಾ ಸ್ಥಾನ ಗಳಿಗೆ ಅರ್ಜಿ ಸಲ್ಲಿಕೆ ಅವಧಿಯನ್ನು ಇದೇ ದಿನಾಂಕ 30 ರವರೆಗೆ ವಿಸ್ತರಿಸಲಾಗಿದೆ. ಪಿ.ಹೆಚ್.ಡಿ, ಪಿ.ಡಿ.ಎಫ್, ಡಿ.ಎಸ್‌ಸಿ,ಡಿ.ಲಿಟ್, ಸಂಶೋಧನಾ ಸ್ಥಾನಗಳಿಗೆ ಅರ್ಜಿಗಳನ್ನು ಡೌನ್‌ಲೌಡ್ ಮಾಡಿಕೊಳ್ಳಲು ವಿಶ್ವವಿದ್ಯಾನಿಲ ಯದ ವೆಬ್‌ಸೈಟ್ www.davangereuniversity.ac.in ಸಂಪರ್ಕಿಸಬಹುದು ಎಂದು ವಿವಿ ಕುಲಸಚಿವರು ತಿಳಿಸಿದ್ದಾರೆ.

## ಬಿ.ಜಿ.ಎನ್ ನಿಧನಕ್ಕೆ ಹೆಚ್.ಬಿ.ಎಂ ಶೋಕ

ದಾವಣಗೆರೆ, ಜೂ.5- ಅತ್ಯುತ್ತಮ ಪ್ರಾಧ್ಯಾಪಕರಾಗಿದ್ದ ಪ್ರೊ. ಬಿ.ಜಿ. ನಾಗರಾಜ್ ಅವರು ಪಾಠ - ಪ್ರವಚನಗಳಲ್ಲದೇ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತಾ ಪ್ರೋತ್ಸಾಹಿಸುತ್ತಿದ್ದರು. ಮಾರ್ಗದರ್ಶಿಸುತ್ತಿದ್ದರು ಎಂದು ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ್ ಅವರು ಪ್ರೊ. ಬಿ.ಜಿ.ಎನ್ ರವರ ನಿಧನಕ್ಕೆ ಶೋಕ ವ್ಯಕ್ತಪಡಿಸಿದ್ದಾರೆ.

# ಮನುಷ್ಯನ ಜೀವನದಲ್ಲಿ ಪರಿಸರದ ಪಾತ್ರ ಪ್ರಮುಖ

ಹರಿಹರ, ಜೂ.5- ಮನುಷ್ಯನ ಜೀವನದಲ್ಲಿ ಪರಿಸರದ ಪಾತ್ರ ಬಹುಮುಖ್ಯವಾಗಿದೆ. ಹಾಗಾಗಿ ಪರಿಸರವನ್ನು ಸಂರಕ್ಷಿಸಲು ಸಾರ್ವಜನಿಕರು ಮುಂದಾಗಬೇಕಾಗಿದೆ ಎಂದು ಮಾಜಿ ಶಾಸಕ. ಬಿ. ಪಿ. ಹರೀಶ್ ಹೇಳಿದರು.

ನಗರದ ಲಯನ್ಸ್ ಕ್ಲಬ್ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಇಂದು ಹರಿಹರ, ದಾವಣಗೆರೆ ನೂತನ ರಸ್ತೆಯಲ್ಲಿ ಸಸಿಗಳನ್ನು ನೆಟ್ಟು ಅವರು ಮಾತನಾಡಿದರು.

ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಗಿಡಗಳು ಇದ್ದರೆ ಅವುಗಳಿಂದ ಬರುವ ಗಾಳಿಯಿಂದಾಗಿ ನಮ್ಮ ಆರೋಗ್ಯದಲ್ಲಿ ಯಾವುದೇ ರೀತಿಯ ತೊಂದರೆಗಳು ಬರುವುದಿಲ್ಲ ಹಾಗೂ ದೇಹದಲ್ಲಿ ಒತ್ತಡ ಕಡಿಮೆಯಾಗಿ ಹೆಚ್ಚು ದಿನಗಳ ಕಾಲ ಬದುಕಲು ದಾರಿಯಾಗುತ್ತದೆ ಎಂದು ಹೇಳಿದರು.

ಸಾರ್ವಜನಿಕರು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಸಿಗಳನ್ನು ಹೆಚ್ಚಾಗಿ ಬೆಳಸುವ ಮೂಲಕ ಉತ್ತಮವಾದ ವಾತಾವರಣದಲ್ಲಿ ಬದುಕುವಂತೆ ಸಲಹೆ ನೀಡಿದರು.



ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಮಾತನಾಡಿ, ನಮ್ಮ ನೆಲ, ಜಲ, ಮಣ್ಣು, ಬೆಳೆ, ಹಣ್ಣು ಹಂಪಲು ಎಲ್ಲವೂ ಉಳಿಯುವಂತಾಗಲು ಈ ದಿನವನ್ನು ಪರಿಸರ ಜಾಗೃತಿ ದಿನವೆಂದು ಆಚರಿಸಲಾಗುತ್ತದೆ. ಈ ದಿನದಂದು ಸಸಿಗಳನ್ನು ನೆಟ್ಟರೆ ಸಾಲದು ನೀರು, ಗೊಬ್ಬರದ ವ್ಯವಸ್ಥೆಗಳನ್ನು ಸರಿಯಾದ ರೀತಿಯಲ್ಲಿ ಮಾಡಿದಾಗ ಸಸಿಗಳು ಮರಗಳಾಗಿ ಬೆಳೆಯುವುದಕ್ಕೆ ದಾರಿಯಾಗುತ್ತದೆ ಎಂದು ಹೇಳಿದರು.

ನಂದಿಗಾವಿ ಎನ್.ಹೆಚ್. ಶ್ರೀನಿವಾಸ್ ಮಾತನಾಡಿ, ಪರಿಸರದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವ ಕಾರ್ಯವನ್ನು ಶಿಕ್ಷಕರು ಮಾಡಬೇಕು. ವಾರದಲ್ಲಿ ಒಂದು ದಿನ ಪರಿಸರ ಉಳಿಸುವ ಬೆಳೆಸುವುದರ ಬಗ್ಗೆ ಮಾಹಿತಿಯನ್ನು ಮಕ್ಕಳಿಗೆ ನೀಡಬೇಕು ಹಾಗೂ ಪರಿಸರ ಹಾನಿಗೀಡು ಮಾಡುವವರ ವಿರುದ್ಧ ಕ್ರಮಗಳನ್ನು ಸರ್ಕಾರ ಕೈಗೊಳ್ಳುವ ಮೂಲಕ ಪರಿಸರ ರಕ್ಷಿಸಬೇಕು ಎಂದರು.

ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಹರಿಹರದ ಮಾಜಿ ಶಾಸಕ ಬಿ.ಪಿ. ಹರೀಶ್

ಈ ಸಂದರ್ಭದಲ್ಲಿ ಸರ್ವೋದಯ ಸಂಸ್ಥಾನ ಮಠದ ಶಿವಕುಮಾರ ಸ್ವಾಮೀಜಿ, ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್, ಪೌರಾಯುಕ್ತೆ ಎಸ್. ಲಕ್ಷ್ಮಿ, ಅಧ್ಯಕ್ಷರಾದ ಬಸವರಾಜ್ ಎಚ್.ಪಿ. ಸದಸ್ಯರುಗಳಾದ ರವಿಸಿಂಗ್, ಕಿರಣ್ ಬಂಗಾಳಿ, ಕಾರ್ತಿಕ್ ಸುರ್ವೆ, ರಾಘವೇಂದ್ರ ರಾಜೊಳ್ಳಿ, ಜಿಎಸ್. ಬಸವನಗೌಡ, ಜಿ.ಆರ್. ಗಣೇಶ್, ರಾಘವೇಂದ್ರ ಭಟ್, ನಿರಂಜನ್ ಪತಂಜಲಿ, ಕಾರ್ತಿಕ್ ಕುಮಾರ್, ವಿಕಾಸ್, ಸಚಿನ್ ಕೊಂಡಜ್ಜಿ, ಲೋಕೇಶ್ ಕುಮಾರ್, ಆನಂದ, ಶಂಕರ್, ರೇಖಾ ರವಿಕುಮಾರ್, ಸಿಂಧು, ಪಿ.ಬಿ. ಶಂಕರ್ , ಶಾಹಿಸ್ತಾ ಅಂಜುಮ್, ಮುಬ್ಬಶೀರ್, ಜಾಕೀರ್, ಕೆ. ಜೈಮುನಿ ಇನ್ನಿತರರು ಹಾಜರಿದ್ದರು.

# ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಯುವ ಕಾಂಗ್ರೆಸ್ ಪ್ರತಿಭಟನೆ



ಹರಪನಹಳ್ಳಿ

ಹರಪನಹಳ್ಳಿ, ಜೂ.5- ಕೇಂದ್ರ ಸರ್ಕಾರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ, ಯುವ ಕಾಂಗ್ರೆಸ್ ವತಿಯಿಂದ ಉಪವಿಭಾಗಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ್ ಮಾತನಾಡಿ ಕೇಂದ್ರ ಸರ್ಕಾರ ಕಾರ್ಪೊರೇಟ್ ಲಾಬಿಗೆ ಮಣಿದು, ಬಡವರನ್ನು ಇನ್ನೂ ಬಡವರನ್ನಾಗಿ ಮಾಡಲು ಹೊರಟಿದೆ. ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆಯನ್ನು ನಿರಂತರವಾಗಿ ಹೆಚ್ಚಳ ಮಾಡುತ್ತಾ ಬರುತ್ತಿದ್ದು, ಮೇ ತಿಂಗಳಿನಿಂದ ಇಲ್ಲಿಯವರೆಗೆ 18 ಬಾರಿ ದರ ಏರಿಕೆ ಮಾಡಿದೆ.

ಲಾಕ್‌ಡೌನ್‌ನಿಂದ ಆರ್ಥಿಕ ಸ್ಥಿತಿ ಸಂಪೂರ್ಣ ನೆಲ ಕಚ್ಚಿರುವ ಹೊತ್ತಿನಲ್ಲಿ ಬೆಲೆ ಏರಿಕೆಗಳು ದೇಶದ ಆರ್ಥಿಕ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರಿ ವಿನಾಶಕಾರಿಯಾಗುವುದರಲ್ಲಿ ಅನುಮಾನವಿಲ್ಲ. ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ಶೋಚನೀಯ ಸಂಗತಿಯಾಗಿದೆ ಎಂದು ಕಿಡಿ ಕಾರಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಿಯಾಜ್, ಜೀಷನ್, ಉಪಾಧ್ಯಕ್ಷ ದಾದಾಪೀರ್ ಮಕರಬ್ಬಿ, ಪ್ರಧಾನ ಕಾರ್ಯದರ್ಶಿ ಸಾಧಿಕ್ ಜಬೀವುಲ್ಲಾ, ಜಾವೀದ್, ವಿದ್ಯಾರ್ಥಿ ಸಂಘಟನೆ ಅಧ್ಯಕ್ಷ ಶ್ರೀಕಾಂತ್, ಲಿಂಗರಾಜ್ ಇನ್ನಿತರರಿದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ದಿ. ಮುತ್ತಾರೆಡ್ಡಿ ಶ್ರೀ ರಾಮ್‌ರಾವ್ ಚೌಧರಿ ಇವರ ಜ್ಞಾಪಕಾರ್ಥವಾಗಿ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

ಅನ್ನವೇ ದೇವರು
**ಕರುಣಾ ಜೀವ ಕಲ್ಯಾಣ ಟ್ರಸ್ಟ್**
ಇಂದಿನ ಅನ್ನದಾಸೋಹ ದಾಸೋಹಿಗಳು
ಶ್ರೀಮತಿ ಲತಾ ಆರ್.ಜಿ. ಧನೇಶ್
ವರ್ತಕರು, ದಾವಣಗೆರೆ
ಧನ ಸಹಾಯ ಮಾಡುವವರು ಸಂಪರ್ಕಿಸಿ
91104 55199

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮನೆಗಳು ಮಾರಾಟಕ್ಕಿವೆ**
40x60 North, 40x60 East, 30x50 North, 30x40 North ಮನೆ, 30x50 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬಾಡಿಗೆ ಮನೆಗಳು ದೊರೆಯುತ್ತವೆ ವಿಚಾರಿಸಿ**
ಸಿಂಗಲ್ ಬೆಡ್ ರೂಂ ಮನೆ ಒಂದು ಇದೆ, 3 ಬೆಡ್ ರೂಂ ಮನೆ ಎರಡು ಇದೆ. ವಿನಾಯಕ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಹೊಸ ಬನಶಂಕರಿ ಲೇಔಟ್‌ನಲ್ಲಿ ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x70, 80x70 West 60 ಅಡಿ ರೋಡಿಗಿದೆ, 30x48 East, 30x50 North, 30x40 West, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ 30×50 ಪಶ್ಚಿಮ, 30×40 ಪಶ್ಚಿಮ, ಶಿವಪಾರ್ವತಿ ಬಡಾವಣೆಯಲ್ಲಿ 30×50 ಪೂರ್ವ, 30×50 ಪಶ್ಚಿಮ, ಬಾಟಲಿ ಬಿಲ್ಡಿಂಗ್ ಹಿಂಭಾಗ, 40×60 ಪಶ್ಚಿಮ-ಉತ್ತರ ಕಾರ್ನರ್
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆಗಳು ಬಾಡಿಗೆಗಿವೆ**
'SS' ಎ ಬ್ಲಾಕ್, 2ನೇ ಕ್ರಾಸ್, ವಿ.ವಿ. ರೆಸಿಡೆನ್ಸ್, 1ನೇ ಮಹಡಿ, ವಾಸ್ತು ಪ್ರಕಾರ ಇರುವ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಕಾರ್ಪೊರೇಷನ್/ಬೋರ್ ನೀರಿನ ಸೌಲಭ್ಯ, ಕಾರ್ ಪಾರ್ಕಿಂಗ್ ಇದೆ.
94487 27266, 94481 34340

**ಮನೆಯ ನೀರಿನ ತೊಟ್ಟಿ, ಟ್ಯಾಂಕುಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.**
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
9986361250
9113285992

**ಮನೆ ಬಾಡಿಗೆಗೆ ಇದೆ**
ಮಹಾಲಸ ನಿಲಯ 4ನೇ ಮೇನ್, 4ನೇ ಕ್ರಾಸ್, ವಿನೋಬನಗರ
Contact: 94488 73541
ಸುಬ್ಬರಾವ್ ವೆರ್ಣೇಕರ್
72598 76703

**ಮನೆ ಲೀಸ್‌ಗಿದೆ**
#5626/7 "ಜ್ಯೋತಿ ನಿಲಯ" ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ ಡಬಲ್ ಬೆಡ್‌ರೂಂ, ವಾಸ್ತು ಪ್ರಕಾರ ಇದ್ದು, ಗ್ರೌಂಡ್ ಫ್ಲೋರ್ ಮನೆ, ಅಳತೆ 50x30 ಶುದ್ಧ ಸಸ್ಯಹಾರಿಗಳಿಗೆ ಮಾತ್ರ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಶ್ರೀ ರಾಘವೇಂದ್ರ ನರ್ಸಿಂಗ್ ಕಾಲೇಜ್ ಹತ್ತಿರ ಇಂಜಿನಿಯರ್ ಅಸೋಸಿಯೇಷನ್ ಬಿಲ್ಡಿಂಗ್
93410 04279 ಸುರೇಶ್ ಕುಮಾರ್ ಎ.ಎಸ್
97417 40929 ರಾಮಕೃಷ್ಣ ಎ.ಎಸ್

**ರೂಂ ಬಾಡಿಗೆಗೆ ಇದೆ**
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ (ಹೊಸ ಕೋರ್ಟ್ ಹಿಂಭಾಗ) 5ನೇ ಕ್ರಾಸ್‌ನಲ್ಲಿ ಎಲ್ಲ ಸೌಕರ್ಯವುಳ್ಳ ರೂಂ ಬಾಡಿಗೆಗೆ ಇದೆ. ಸಂಪರ್ಕಿಸಿ
97310 63330

**ಮನೆ ಬಾಡಿಗೆಗಿದೆ**
3 BHK/2BHK, ಕಾರ್ಪೊರೇಷನ್ ನೀರು, ಬೋರ್, ಕಾರ್ ಪಾರ್ಕಿಂಗ್ ವ್ಯವಸ್ಥೆಗಳಿರುವ ವಾಸ್ತು ಪ್ರಕಾರ ಪೂರ್ವ ಮುಖದ, ಸ್ವತಂತ್ರವಾದ ಮನೆ, ಮೆಡಿಕಲ್ ಹಾಸ್ಟೆಲ್ ಪಕ್ಕದಲ್ಲಿ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
63015 58346

**ಮನೆ ಮಾರಾಟಕ್ಕಿದೆ**
89717 21755

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಹಿಂಭಾಗದಲ್ಲಿ ನೂತನವಾಗಿ ಕಟ್ಟಿಸಿರುವ 30x33 ಅಳತೆಯ 2 ಬೆಡ್ ರೂಂ ಮನೆ ಮಾರಾಟಕ್ಕಿದೆ. ಮಹಡಿ ಮೇಲೆ ಬಾಡಿಗೆಗೆ ಬರುವಂತಹ ಎರಡು ಪ್ರತ್ಯೇಕ ಕೊಠಡಿಗಳಿವೆ.
94820 94979

**Wanted Teachers**
Qualification :
1) B.A. B.Ed - English - 02
2) B.Sc., B.Ed - PCM - 02 CBZ - 03
3) B.A., B.Ed - Hindi - 02
4) B.A. B.Ed - Social - 02
SJM English Medium Public School
80734 81049, 90197 38735

**ಮನೆ ಬಾಡಿಗೆಗೆ/ಲೀಸ್ ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್ ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
99726-75759

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. 'ಬಿ' ಬ್ಲಾಕ್ ದಕ್ಷಿಣ 30x40 ಮನೆ ಹಾಗೂ 30x40 ಕೆಳಗೆ ಮನೆ ಮೇಲೆ ಒಂದು ರೂಂ. ಬಸವೇಶ್ವರ ಲೇ ಔಟ್, ಪೂರ್ವ, 30x40 ಕೆಳಗೆ ಮತ್ತು ಮೇಲೆ ಮನೆ ಮತ್ತು ಮೇಲೆ ಒಂದು ರೂಂ. 30x45 ಪಶ್ಚಿಮ, ಎಸ್. ಎಸ್. ಹೈಟೆಕ್ ಉತ್ತರ 30x50 ಸಂಪರ್ಕಿಸಿ
ಸುಹಾಸ್: 9538769260

**ಹೊಂಬಾಳ್ ಇ-ಮಾರ್ಟ್**
ದಾವಣಗೆರೆಯ ಎಲ್ಲಾ ಭಾಗಗಳಲ್ಲಿ ಮಿನಿ ಇ- ಮಾರ್ಟನ್ನು ಪ್ರಾರಂಭಿಸಲು ಸಮಾನ ಮನಸ್ಕ ಹೂಡಿಕೆದಾರರು ಬೇಕಾಗಿದ್ದಾರೆ. ನಿರ್ದಿಷ್ಟ ಆದಾಯದ ಜೊತೆಗೆ ಭದ್ರತೆಯನ್ನು ಒದಗಿಸಲಾಗುವುದು.
ಫೋ. : 90089 85112

**Wanted Senior Civil Engineer**
with Experience of 15-20 Years. Worked Under Govt. Contractor.
Contact : ANAND
98806 20002

**ಮರದ ಗಾಣದ ಶೇಂಗಾ ಎಣ್ಣೆ, ಕೊಬ್ಬರಿ ಎಣ್ಣೆ ತಯಾರಿಕಾ ಘಟಕ**
ನಮ್ಮಲ್ಲಿ ಶೇಂಗಾ ಎಣ್ಣೆ ಮತ್ತು ಕೊಬ್ಬರಿ ಎಣ್ಣೆ ಹಾಗೂ ಸಿರಿಧಾನ್ಯಗಳು ದೊರೆಯುತ್ತವೆ.
ಸಂಪರ್ಕಿಸಿ : ಮೈಸೂರು ನ್ಯಾಚುರಲ್ಸ್
ಶಾಮನೂರು. ಮೊ. 99717-95156

**ಹೋಟೆಲ್ ಮಯೂರ**
ಮರಾಠ ಮಿಲ್ಟ್ರಿ ಹೋಟೆಲ್
**ಪಾರ್ಸೆಲ್ ಮಾತ್ರ**
ಕ್ಯಾಟರಿಂಗ್ ಸೌಲಭ್ಯವಿದೆ.
ವಿದ್ಯಾರ್ಥಿ ಭವನದ ಹತ್ತಿರ, ವಾಲಿ ಮೆಡಿಕಲ್ ಶಾಪ್ ಹಿಂಭಾಗ, ಸಿ.ಜಿ. ಆಸ್ಪತ್ರೆ ರಸ್ತೆ, ದಾವಣಗೆರೆ.
94807 12363, 63605 78256

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೇರಿ ಹೋಬಳಿ, ಸರ್ವೆ ನಂ. 335/A-4-08 ಸೆಂಟ್ಸ್, ಸರ್ವೆ ನಂ. 335/B-2-43 ಸೆಂಟ್ಸ್, ಸರ್ವೆ ನಂ. 335/1 - 1.62 ಸೆಂಟ್ಸ್ ಒಟ್ಟು 8.13 ಸೆಂಟ್ಸ್, 2 ಪಂಪ್‌ಸೆಟ್ ಇರುವ ಜಮೀನು ಮಾರಾಟಕ್ಕಿದೆ.
9972602950

**Wanted Site Engineer**
MALE / FEMALE
with 2-3 Years Experience
Contact : ANAND
98806 20002

**11 ಅಸಂಘಟಿತ ವರ್ಗಗಳ ಕಾರ್ಮಿಕರು ಒಂದು ಬಾರಿ ಪರಿಹಾರವಾಗಿ ರೂ. 2000/-ನೆರವು ಪಡೆಯಲು ಅರ್ಜಿ ಹಾಕಲಾಗುವುದು.**
ಸಂಪರ್ಕಿಸಿ : 98449 69738

**ವೀರಶೈವರ ಮನೆ ಅಡುಗೆ**
ಮನೆ ಕಟ್ಟುವ ಕೆಲಸಗಾರರಿಗೆ ಮತ್ತು ಫಂಕ್ಷನ್‌ಗಳಿಗೆ ಊಟ, ತಿಂಡಿ ಮಾಡಿ ಕೊಡಲಾಗುತ್ತದೆ.
96864 06484
74111 12649

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪೂಜಿ ಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**WORK FROM HOME**
URGENT HIRING ON ROLL
Executive Managers
Associate Manager
Branch Manager
CTC : 5 Lac - 12 Lac
90357 12217

**CHOCOCANDY**
Mama's joint Road Davangere-4
All kind of Party decorations items & Chocolate Available, Online delivery throughout Davangere is available. Within 3hrs delivery.
For more details mail or contact us
mail@chococandy.in
+ 91-7892553220


# ಪೌರ ಕಾರ್ಮಿಕರಿಗೆ ಉಪಹಾರ, ಕಿಟ್ ವಿತರಣೆ

ಮಲೇಬೆನ್ನೂರು, ಜೂ.5- ಇಲ್ಲಿನ ಪುರಸಭೆಯ ಪೌರ ಕಾರ್ಮಿಕರಿಗೆ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಹರಿಹರದ ದಿ ಹೆಲ್ಪಿಂಗ್ ಗ್ರೂಪ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಬೆಳಗಿನ ಉಪಹಾರ, ಹ್ಯಾಂಡ್ ಗ್ಲೌಜ್, ಸ್ಯಾನಿಟೈಸ್, ಫೇಸ್‌ಶೀಲ್ಡ್, ಮಾಸ್ಕ್‌ಗಳನ್ನು ನೀಡಿದರಲ್ಲದೇ, ಪುರಸಭೆ ಆವರಣದಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿ ಗಮನ ಸೆಳೆದರು.



ಹೆಲ್ಪಿಂಗ್ ಗ್ರೂಪ್ ಚಾರಿಟೇಬಲ್ ಟ್ರಸ್ಟ್ ಕಾರ್ಯದರ್ಶಿ ಮಂಜುನಾಥ ಗೌಡ ಮಾತನಾಡಿ, 2008ರಲ್ಲಿ ಆರಂಭಗೊಂಡ ನಮ್ಮ ಟ್ರಸ್ಟ್‌ನಲ್ಲಿ 260 ಕ್ಕೂ ಹೆಚ್ಚು ಉದ್ಯೋಗಸ್ಥ ಸದಸ್ಯರಿದ್ದಾರೆ. ರಾಜ್ಯದ ಅನೇಕ ಬುದ್ದಿಮಾಂದ್ಯ, ಅಂಧ ಮತ್ತು ಅಂಗವಿಕಲ ಮಕ್ಕಳ ಶಾಲೆಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ಕೊಟ್ಟಿದ್ದೇವೆ. ಬಾಗಲಕೋಟೆ ಜಿಲ್ಲೆಗೆ ಉಚಿತ ಆಂಬ್ಯುಲೆನ್ಸ್ ನೀಡಿದ್ದೇವೆ. ರಾಜ್ಯದ 5 ಸರ್ಕಾರಿ ಶಾಲೆಗಳಲ್ಲಿ ನಲಿ-ಕಲಿ ಕೊಠಡಿಗಳನ್ನು ನಿರ್ಮಿಸಿಕೊಟ್ಟಿದ್ದೇವೆ ಎಂದು ಮಂಜುನಾಥ ಗೌಡ ತಿಳಿಸಿದರು.

ಮಲೇಬೆನ್ನೂರು

ಪುರಸಭೆ ಮುಖ್ಯಾಧಿಕಾರಿ ದಿನಕರ್ ಮಾತನಾಡಿ, ನೌಕರರು ಸೇರಿ ಸ್ಥಾಪಿಸಿರುವ ಹೆಲ್ಪಿಂಗ್ ಗ್ರೂಪ್ ಚಾರಿಟೇಬಲ್ ಟ್ರಸ್ಟ್‌ನವರ ಸಮಾಜ ಮುಖಿ ಸೇವಾ ಕಾರ್ಯಕ್ರಮಗಳು ಇತರರಿಗೆ ಮಾದರಿ ಯಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಟ್ರಸ್ಟ್‌ನ ಸದಸ್ಯರಾದ ನಾಗರಾಜ್, ಸಿ.ಎಂ.ಹನುಮಂತಪ್ಪ, ವೀರೇಶ್, ಕೃಷ್ಣ, ಮಾಲತೇಶ್, ಬಾಬಾಜಿ ವೆಂಕಟೇಶ್, ವೀರಣ್ಣ, ಶಿಕ್ಷಕ ಶರಣ್‌ಕುಮಾರ್ ಹೆಗಡೆ, ಪುರಸಭೆ ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ಪತ್ರಕರ್ತರಾದ ಜಿಗಳಿ ಪ್ರಕಾಶ್, ಸದಾನಂದ ಈ ವೇಳೆ ಹಾಜರಿದ್ದರು.

# ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಪರಿಸರ ದಿನಾಚರಣೆ

ಹೊನ್ನಾಳಿ, ಜೂ 5- ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚನ್ನಗಿರಿ ಡಿವೈಎಸ್‌ಪಿ ಡಾ. ಸಂತೋಷ್‌ಕುಮಾರ್ ಹಾಗೂ ಸಿಪಿಐ ಟಿ.ವಿ. ದೇವರಾಜ್ ಅವರು ಶನಿವಾರ ಸಸಿಗಳನ್ನು ನೆಡುವ ಮೂಲಕ ಪರಿಸರ ದಿನ ಆಚರಿಸಿದರು.

ಇದರ ಜೊತೆಗೆ ಹೊನ್ನಾಳಿ ನಗರ ಹಾಗೂ ತಾಲ್ಲೂಕು ಸೇರಿದಂತೆ ಸುಮಾರು 15 ವರ್ಷಗಳಿಂದಲೂ ರಸ್ತೆ ಬದಿ ಹಾಗೂ ರಸ್ತೆ ವಿಭಜಕಗಳ ಮಧ್ಯ ಸಸಿ ನೆಟ್ಟು (ಅರಣ್ಯ ಇಲಾಖೆಯ ವಾಚರ್) ಪೋಷಣೆ ಮಾಡುವ ಮೂಲಕ ಹಸಿರುಮಯ ವಾತಾವರಣಕ್ಕೆ ಕಾರಣವಾದ ಸುಂಕದಕಟ್ಟೆಯ ಎಚ್.ಎಸ್. ಶಾಂತರಾಜ್ ಹಾಗೂ ಶಾಂತಮ್ಮ ದಂಪತಿಯನ್ನು ಸನ್ಮಾನಿಸಿ ಅವರಿಗೆ ಫುಡ್ ಕಿಟ್‌ಗಳನ್ನು ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿವೈಎಸ್‌ಪಿ ಡಾ. ಕೆ.ಎಂ. ಸಂತೋಷ್‌ಕುಮಾರ್, ಕೊರೊನಾ ಚಿಕಿತ್ಸೆಗೂ ಮೀರಿದ ಮಹಾಮಾರಿಯಾಗಿದೆ. ಇದಕ್ಕೆ ಪರಿಹಾರ ಎಂದರೆ ಎಲ್ಲರೂ ವ್ಯಾಕ್ಸಿನೇಷನ್‌ಗೆ ಒಳಗಾಗಬೇಕು. ಮಾಸ್ಕ್ ಧರಿಸಬೇಕು, ಸ್ಯಾನಿಟೈಸ್ ಮಾಡಬೇಕು ಮತ್ತು ವೈಯಕ್ತಿಕ ಅಂತರ ಕಾಪಾಡಿಕೊಳ್ಳಬೇಕು ಎಂದು ಹೇಳಿದರು.



ರಸ್ತೆಬದಿ ಗಿಡ ನೆಟ್ಟು ಪೋಷಿಸಿದ ದಂಪತಿಗೆ ಸನ್ಮಾನ


ಸಿಪಿಐ ಟಿ.ವಿ. ದೇವರಾಜ್ ಮಾತನಾಡಿದರು. ಈ ಸಂದರ್ಭದಲ್ಲಿ ಪಿಎಸ್‌ಐ ಬಸವನಗೌಡ ಬಿರಾದಾರ್, ನ್ಯಾಮತಿ ಪಿಎಸ್‌ಐ ರಮೇಶ್, ಪೊಲೀಸ್ ಸಿಬ್ಬಂದಿಗಳಾದ ವೆಂಕಟೇಶ್, ನಾಗರಾಜ್, ಹರೀಶ್ ಸೇರಿದಂತೆ ಹಲವರು ಹಾಜರಿದ್ದರು.

## ದೈತ್ಯ ಟೆಕ್ ಕಂಪನಿಗಳ ಮೇಲೆ ತೆರಿಗೆಗೆ ಜಿ-7 ದೇಶಗಳ ಒಪ್ಪಂದ

ಲಂಡನ್, ಜೂ. 5 – ಕಾರ್ಪೊರೇಟ್ ತೆರಿಗೆ ತಪ್ಪಿಸುವುದನ್ನು ಎದುರಿಸಲು ಹಾಗೂ ದೈತ್ಯ ಟೆಕ್ ಕಂಪನಿಗಳು ಸೂಕ್ತ ತೆರಿಗೆ ಪಾವತಿಸಲು ವಿಶ್ವದ ಶ್ರೀಮಂತ ದೇಶಗಳು ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿವೆ. ಜಿ-7 ದೇಶಗಳು ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿರುವುದನ್ನು ಬ್ರಿಟನ್ ಹಣಕಾಸು ಸಚಿವ ರಿಶಿ ಸುನಕ್ ತಿಳಿಸಿದ್ದಾರೆ.

ಲಂಡನ್‌ನಲ್ಲಿ ನಡೆದ ಜಿ-7 ದೇಶಗಳ ಹಣಕಾಸು ಸಚಿವರ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ತಾವು ಕಾರ್ಯ ನಿರ್ವಹಿಸುವ ಪ್ರತಿಯೊಂದು ದೇಶದಲ್ಲಿ ಕನಿಷ್ಠ ಶೇ.15ರಷ್ಟು ತೆರಿಗೆ ಪಾವತಿಸಬೇಕು ಎಂಬ ನಿರ್ಧಾರಕ್ಕೆ ಬರಲಾಗಿದೆ.

## ಹರಪನಹಳ್ಳಿ : ಪತ್ನಿಯ ಸಹೋದರನ ಕೊಲೆ ಆರೋಪಿಯ ಬಂಧನ



ಹರಪನಹಳ್ಳಿ, ಜೂ.5- ಕಳೆದ ಮಾರ್ಚ್‌ನಲ್ಲಿ ಕೌಟುಂಬಿಕ ಕಾರಣದಿಂದ ಪತ್ನಿಯ ಸಹೋದರನನ್ನು ಕೊಲೆ ಮಾಡಿ ತಲೆ ಮರೆಸಿಕೊಂಡಿದ್ದ ಆರೋಪಿಯನ್ನು ಇಲ್ಲಿನ ಪೊಲೀಸರು ಶಿರಾಳಕೊಪ್ಪದಲ್ಲಿ ಬಂಧಿಸಿದ್ದಾರೆ.

ರಾಣೇಬೆನ್ನೂರು ತಾಲ್ಲೂಕಿನ ಚಳಗೇರಿ ಗ್ರಾಮದ ಓಲೇಕಾರ ಕುಮಾರ ಬಂಧಿತ ಆರೋಪಿಯಾಗಿದ್ದಾನೆ. ಈತ ತನ್ನ ಪತ್ನಿ ಗೀತಾಳ ಅಣ್ಣ ಹಾಲೇಶನನ್ನು ಹರಪನಹಳ್ಳಿ ತಾಲ್ಲೂಕು ಅರೆಮಜ್ಜಿಗೇರಿ ಗ್ರಾಮದಲ್ಲಿ ಕೊಲೆ ಮಾಡಿ ತಲೆ ಮರೆಸಿಕೊಂಡಿದ್ದನು.

ದೂರುದಾರ ದುರುಗಪ್ಪ ನೀಡಿದ ದೂರಿನ ಮೇಲೆ ತನಿಖೆ ನಡೆಸಿದ ಸಿಪಿಐ ನಾಗರಾಜ ಎಂ. ಕಮ್ಮಾರ ನೇತೃತ್ವದ ತಂಡವು ಆರೋಪಿಯನ್ನು ಪತ್ತೆ ಹಚ್ಚಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

## ಎಲೆಬೇತೂರಿನಲ್ಲಿ ಪರಿಸರ ದಿನಾಚರಣೆ



ದಾವಣಗೆರೆ, ಜೂ. 5 - ಎಲೆಬೇತೂರು ಗ್ರಾಮದ ಗ್ರಾಮ ಪಂಚಾಯಿತಿ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಗ್ರಾಮ ಪಂಚಾಯ್ತಿ ಆವರಣ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸಸಿ ನೆಡುವುದರ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾ ಪಂ ಮಾಜಿ ಅಧ್ಯಕ್ಷ ವಿರುಪಾಕ್ಷಪ್ಪ, ನೂತನ ಗ್ರಾ ಪಂ ಸದಸ್ಯ ಎಚ್.ಎಸ್. ಚೇತನ್ ಕುಮಾರ್ , ತಾಲ್ಲೂಕು ಕ.ಸಾ.ಪ. ನಿರ್ದೇಶಕ ಎಂ.ಷಡಕ್ಷರಪ್ಪ ಗ್ರಾ.ಪಂ ಕಾರ್ಯದರ್ಶಿ ರಾಘವೇಂದ್ರ ಗೋಪಾಲಕೃಷ್ಣ ಹಾಗೂ ಮತ್ತಿತರರಿದ್ದರು.

## ಇಂದು ಆಮ್ಲಜನಕ ಸಾಂದ್ರಕ ಉದ್ಘಾಟನೆ

ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆಯ ಹಿರಿಯ ವಿದ್ಯಾರ್ಥಿಗಳು ಸುಮಾರು 5 ಲಕ್ಷ ರೂ.ಗಳ ವೆಚ್ಚದಲ್ಲಿ ಆಮ್ಲಜನಕ ಸಾಂದ್ರಕ (ಆಕ್ಸಿಜನ್ ಕಾನ್ಸಂಟ್ರೇಟರ್) ಗಳನ್ನು ಇಂದು ಮಧ್ಯಾಹ್ನ 12 ಗಂಟೆಗೆ ವಿದ್ಯಾ ಸಂಸ್ಥೆಯ ಆವರಣದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಮಹಾನಗರ ಪಾಲಿಕೆಯ ಮೇಯರ್ ವೀರೇಶ್ ಉದ್ಘಾಟಿಸಲಿದ್ದಾರೆ. ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್. ಹೇಮಂತ್, ಮುಖ್ಯೋಪಾಧ್ಯಾಯಿನಿ ಶ್ರೀಮತಿ ಜಸ್ಟಿನ್ ಡಿಸೋಜಾ ಅವರು ಉಪಸ್ಥಿತರಿರುವರು.

# ಬಿಜೆಪಿ ಲಸಿಕೆ ಎಂದ ಕಾಂಗ್ರೆಸ್‌ನವರೇ ಲಸಿಕೆ ಹಾಕಿಸಿಕೊಳ್ಳುತ್ತಿದ್ದಾರೆ

**ಹರಪನಹಳ್ಳಿ : ಜಿ. ಮಲ್ಲಿಕಾರ್ಜುನಪ್ಪ, ಶ್ರೀಮತಿ ಹಾಲಮ್ಮ ಚಾರಿಟಬಲ್ ಟ್ರಸ್ಟ್‌ನ ಆಕ್ಸಿಜನ್ ಉತ್ಪಾದನಾ ಘಟಕ ಸ್ಥಾಪನೆಯ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಸಂಸದ ಸಿದ್ದೇಶ್ವರ**



ಹರಪನಹಳ್ಳಿ, ಜೂ.5- ನರೇಂದ್ರ ಮೋದಿ ಲಸಿಕೆ, ಬಿಜೆಪಿ ಲಸಿಕೆ ಎಂದು ಜನರನ್ನು ದಾರಿ ತಪ್ಪಿಸುತ್ತಿದ್ದ ಕೆಲ ಕಾಂಗ್ರೆಸ್ ಮುಖಂಡರೇ ಈಗ ಲಸಿಕೆ ಹಾಕಿಸಿಕೊಳ್ಳುತ್ತಿದ್ದಾರೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹಿಂಭಾಗದಲ್ಲಿ ಜಿ. ಮಲ್ಲಿಕಾರ್ಜನಪ್ಪ, ಶ್ರೀಮತಿ ಹಾಲಮ್ಮ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಕ್ಸಿಜನ್ ಉತ್ಪಾದನಾ ಘಟಕ ಸ್ಥಾಪನೆಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಹರಪನಹಳ್ಳಿ ತಾಲ್ಲೂಕಿನಲ್ಲಿ ಆಕ್ಸಿಜನ್ ಕೊರತೆಯಾಗ ಬಾರದು ಎಂದು ಉತ್ಪಾದನಾ ಘಟಕಕ್ಕೆ ಮುಂದಾಗಿದ್ದು, ತಂದೆ ದಿ. ಜಿ. ಮಲ್ಲಿಕಾರ್ಜನಪ್ಪ, ತಾಯಿ ದಿ. ಹಾಲಮ್ಮ ಚಾರಿಟಬಲ್ ಟ್ರಸ್ಟ್‌ನಿಂದ 60 ಲಕ್ಷ ರೂ.ಗಳ ವೆಚ್ಚದಲ್ಲಿ ಆಕ್ಸಿಜನ್ ಜನರೇಟರ್ ಪ್ಲಾಂಟ್ ಸ್ಥಾಪನೆಯಾಗಲಿದ್ದು, 15 ದಿನದೊಳಗೆ ಆಕ್ಸಿಜನ್ ಜನರೇಟರ್ ಸ್ಥಾಪಿಸಲಾಗುವುದು. ಕೆಲಸ ಪೂರ್ಣಗೊಂಡ ಬಳಿಕ ಪ್ರತಿ ದಿನ 50-60 ರೋಗಿಗಳಿಗೆ ಆಕ್ಸಿಜನ್ ಪೂರೈಕೆ ಮಾಡಬಹುದಾಗಿದೆ ಎಂದರು. ಲಘು ಕೋವಿಡ್ ಸೋಂಕಿತರೂ ಸಹ ಹೋಂ ಐಸೋಲೇಷನ್‌ನಲ್ಲಿ ಇರದೆ, ಕೋವಿಡ್ ಕೇರ್ ಸೆಂಟರ್‌ಗೆ ದಾಖಲಾಗಿ ಚಿಕಿತ್ಸೆ ಪಡೆಯಿರಿ. ಪ್ರತಿಯೊಬ್ಬರೂ ಲಸಿಕೆ ಹಾಕಿಸಿಕೊಳ್ಳಿ ಎಂದು ಅವರು ಮನವಿ ಮಾಡಿದರು.

ಶಾಸಕ ಜಿ. ಕರುಣಾಕರ ರೆಡ್ಡಿ ಮಾತನಾಡಿ, ಸರ್ಕಾರದ ನಿಯಮ ಮತ್ತು ಆದೇಶಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಪಾಲಿಸಬೇಕು. ಸಾಂಕ್ರಾಮಿಕ ರೋಗಗಳು ಅತಿವೇಗವಾಗಿ ಹರಡುವ ಸಾಧ್ಯತೆ ಇದ್ದು, ಸರ್ಕಾರ ಗಂಭೀರವಾಗಿ ಪರಿಗಣಿಸಿ ತುರ್ತು ತಪಾಸಣೆ ಮತ್ತು ಚಿಕಿತ್ಸೆಗೆ ವಿಶೇಷ ಆದ್ಯತೆ ನೀಡಲಾಗಿದೆ ಎಂದರು.

ಜಿಲ್ಲಾಧಿಕಾರಿ ಪವನ್ ಕುಮಾರ್ ಮಲಪಾಟಿ ಮಾತನಾಡಿ, ಕೋವಿಡ್ ಮೂರನೇ ಅಲೆ ಮಕ್ಕಳಿಗೆ ಬರುತ್ತದೆ ಎಂಬ ವರದಿ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ವಾರದೊಳಗೆ 136 ಅಪೌಷ್ಠಿಕತೆ ಇರುವ ಮಕ್ಕಳನ್ನು ಹಾಸ್ಟೆಲ್‌ಗಳಿಗೆ ಶೀಘ್ರ ಸ್ಥಳಾಂತರ ಮಾಡಲಾಗುವುದು. ಅಲ್ಲಿ ಅವರಿಗೆ ಪೌಷ್ಟಿಕ ಆಹಾರ ನೀಡಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿ ಮನೆಗೆ ಕಳುಹಿಸಲಾಗುವುದು. ಹರಪನಹಳ್ಳಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ 10 ಬೆಡ್, ಐಸಿಯು ಜೊತೆ ಲಿಕ್ವಿಡ್ ಆಕ್ಸಿಜನ್ ಘಟಕವನ್ನು ಸಹ ಸ್ಥಾಪನೆ ಮಾಡಲಾಗುವುದು ಎಂದರು.

ಪುರಸಭಾ ಅಧ್ಯಕ್ಷ ಮಂಜುನಾಥ ಇಜಂತಕರ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ತಾಲ್ಲೂಕು ಪಂಚಾಯಿತಿ ಸದಸ್ಯ ಟಿ. ನಾಗರಾಜಪ್ಪ, ಮುಖಂಡರಾದ ಜಿ. ನಂಜನಗೌಡ, ಎಂ.ಪಿ. ನಾಯ್ಕ, ಆರುಂಡಿ ನಾಗರಾಜ, ರಾಘವೇಂದ್ರ ಶೆಟ್ಟಿ, ಎಂ. ಸಂತೋಷ, ಜೆ. ಓಂಕಾರಗೌಡ, ಉಪವಿಭಾಗಾಧಿಕಾರಿ ಚಂದ್ರಶೇಖರಯ್ಯ, ಡಿವೈಎಸ್ಪಿ ಹಾಲಮೂರ್ತಿರಾವ್, ತಹಶೀಲ್ದಾರ್ ನಂದೀಶ, ವೈದ್ಯಾಧಿಕಾರಿ ಪಿ.ಕೆ. ವೆಂಕಟೇಶ್, ಆಸ್ಪತ್ರೆ ಮುಖ್ಯ ವೈದ್ಯ ಡಾ. ಶಿವಕುಮಾರ, ಸಿಪಿಐ ನಾಗರಾಜ ಎಂ. ಕಮ್ಮಾರ, ಪುರಸಭಾ ಮುಖ್ಯಾಧಿಕಾರಿ ನಾಗರಾಜ ನಾಯ್ಕ್, ಯು.ಪಿ. ನಾಗರಾಜ, ಎಂ. ಸಂತೋಷ್ ಇನ್ನಿತರರು.

# ಗ್ರಾಮಗಳಲ್ಲಿ ಸೋಂಕು ತಡೆಗೆ ಸಹಕರಿಸಿ : ಡಿಸಿ ಮನವಿ



ದಾವಣಗೆರೆ, ಜೂ.5- ಗ್ರಾಮೀಣ ಪ್ರದೇಶದಲ್ಲಿ ಜನತೆ ಟೆಸ್ಟ್ ಮಾಡಿಸಿಕೊಳ್ಳಲು ಮುಂದೆ ಬಾರದಿರುವುದು ಹಾಗೂ ಕೋವಿಡ್ ಪಾಸಿಟಿವ್ ಬಂದವರು ಕೋವಿಡ್ ಕೇರ್ ಸೆಂಟರ್‌ಗೆ ಬಾರದಿರುವುದರಿಂದ ಶೇ. 60 ರಷ್ಟು ಪ್ರಕರಣಗಳು ಹಳ್ಳಿಗಳಿಂದಲೇ ವರದಿಯಾಗುತ್ತಿವೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದ್ದಾರೆ.

ಜಿಲ್ಲೆಯಲ್ಲಿ ಲಾಕ್‌ಡೌನ್ ಆರಂಭಿಸಿ 2-3 ವಾರ ಕಠಿಣ ನಿರ್ಬಂಧ ವಿಧಿಸಿದ್ದರೂ ಪ್ರಕರಣಗಳು ಹೆಚ್ಚಾಗುತ್ತಿರುವುದಕ್ಕೆ ಆಶ್ಚರ್ಯ ಪಡಬೇಕಿಲ್ಲ. ಪ್ರತಿ ದಿನ 500-700 ಕೊರೊನಾ ಪ್ರಕರಣಗಳು ಕಂಡು ಬರುತ್ತಿವೆ. ಜನರು ಎಷ್ಟೇ ಮನವೊಲಿಸಿದರೂ ಹೋಂ ಐಸೋಲೇಷನ್ ನಲ್ಲಿ ಉಳಿಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯ 44 ಗ್ರಾಮಗಳಲ್ಲಿ ಹತ್ತಕ್ಕಿಂತ ಹೆಚ್ಚು ಪ್ರಕರಣಗಳು ಕಂಡು ಬಂದಿವೆ. ಶೇ.60ರಷ್ಟು ಪ್ರಕರಣಗಳು ಹಳ್ಳಿಗಳಿಂದಲೇ ಬರುತ್ತಿವೆ. ಗ್ರಾಮಗಳಲ್ಲಿ ಇನ್ನೂ ಪರಿಸ್ಥಿತಿ ನಿಯಂತ್ರಣಕ್ಕೆ ಬರುತ್ತಿಲ್ಲ. ಏಕೆಂದರೆ ಮನೆಯಲ್ಲಿ ಒಬ್ಬರಿಗೆ ಸೋಂಕು ಬಂದರೆ ಉಳಿದವರು ಟೆಸ್ಟ್ ಮಾಡಿಸಿಕೊಳ್ಳಲು ವಿರೋಧ ವ್ಯಕ್ತಪಡಿಸುತ್ತಿರುವುದು ಕಾರಣ ಎಂದ ಜಿಲ್ಲಾಧಿಕಾರಿ, ಮನೆಯಲ್ಲಿ ಒಬ್ಬರಲ್ಲಿ ಸೋಂಕು ಕಂಡು ಬಂದರೆ ದಯಮಾಡಿ ಕೋವಿಡ್ ಸೆಂಟರ್‌ಗೆ ಬನ್ನಿ ಎಂದವರು ಮನವಿ ಮಾಡಿದ್ದಾರೆ.

ಗ್ರಾಮ ಪಂಚಾಯ್ತಿ ಸದಸ್ಯರು, ಪಿಡಿಒಗಳು ಹಾಗೂ ಊರಿನ ಮುಖಂಡರು ಜವಾಬ್ದಾರಿ ತೆಗೆದುಕೊಂಡ 246 ಗ್ರಾಮಗಳಲ್ಲಿ ಶೂನ್ಯ ಕೊರೊನಾ ಪ್ರಕರಣಗಳು ವರದಿಯಾಗಿವೆ. ಆದ್ದರಿಂದ ಹಳ್ಳಿಯ ಜನತೆ ಕೊರೊನಾ ತಡೆಯಲು ಮುಂದಾಗಬೇಕು ಎಂದರು.

ಮನೆಯಲ್ಲಿ ಯಾರಿಗಾದರೂ ಪಾಸಿಟಿವ್ ಬಂದರೆ ಉಳಿದೆಲ್ಲರನ್ನೂ ಶೀಘ್ರವಾಗಿ ಟೆಸ್ಟ್ ಮಾಡಿಸಬೇಕು. ಪಾಸಿಟಿವ್ ಬಂದರೆ ಕೋವಿಡ್ ಕೇರ್ ಸೆಂಟರ್‌ಗೆ ಕಳುಹಿಸುವ ವ್ಯವಸ್ಥೆಯನ್ನು ಊರಿನ ಜನತೆ ಮಾಡುವ ಮೂಲಕ ಗ್ರಾಮದ ರಕ್ಷಣೆಗೆ ನಿಲ್ಲಬೇಕು ಎಂದರು.

ಇತ್ತೀಚೆಗೆ ಕಮ್ಮಾರಘಟ್ಟೆ ಗ್ರಾಮದಲ್ಲಿ 23 ಪ್ರಕರಣಗಳು ಬಂದಿದ್ದವು. ಆ ನಂತರದ ಹತ್ತು ದಿನಗಳಲ್ಲಿ ಒಂದೂ ಪ್ರಕರಣ ವರದಿಯಾಗಿಲ್ಲ. ಆ ಊರಿನ ಜನತೆ ತಾವೇ ನಿರ್ಬಂಧ ಹಾಕಿಕೊಂಡು ಎಲ್ಲರೂ ಟೆಸ್ಟ್ ಮಾಡಿಸುತ್ತಿರುವುದು ಇದಕ್ಕೆ ಕಾರಣ ಎಂದರು.

ಇದೇ ರೀತಿಯ ಪ್ರಯತ್ನ ಎಲ್ಲಾ ಗ್ರಾಮಗಳಲ್ಲೂ ನಡೆಯಬೇಕು. ಟೆಸ್ಟ್‌ಗೆ ಸಹಕರಿಸುವ ಮೂಲಕ ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕು. ಆ ಮೂಲಕ ಕೋವಿಡ್ ಮುಕ್ತ ಜಿಲ್ಲೆ ಮಾಡಲೂ ಸಹಕರಿಸಬೇಕು ಎಂದರು.

### ಸ್ವಯಂ ನಿಯಂತ್ರಣದ ಹೊರತು ವ್ಯವಸ್ಥೆ ಬದಲಾಗದು

ಜನರು ಸ್ವಯಂ ನಿಯಂತ್ರಣ ಹೇರಿಕೊಳ್ಳದ ಹೊರತು ಸದ್ಯದ ವ್ಯವಸ್ಥೆ ಬದಲಾಗದು. ಆದ್ದರಿಂದ ಜನರು ಅನಾವಶ್ಯಕವಾಗಿ ಹೊರ ಬರುವುದನ್ನು ನಿಲ್ಲಿಸುವಂತೆ ಡಿಸಿ ಮಹಾಂತೇಶ ಬೀಳಗಿ ಮನವಿ ಮಾಡಿದ್ದಾರೆ.

ಎಲ್ಲಿಯವರೆಗೆ ನಾವು ಬದಲಾಗುವುದಿಲ್ಲವೋ ಅಲ್ಲಿಯವರೆಗೆ ವ್ಯವಸ್ಥೆಯನ್ನು ನಿಯಂತ್ರಣಕ್ಕೆ ತರಲು ಸಾಧ್ಯವಿಲ್ಲ. ಅನೇಕ ಜನರು ತರಕಾರಿ, ಹಣ್ಣು ಮಾರಿ ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ಮಾರಾಟಕ್ಕೆ ನಾವು ಅವಕಾಶ ಕಲ್ಪಿಸಿದ್ದೇವೆ. ಆದರೆ ಅವಕಾಶ ನೀಡಿದ ಮೂರೂ ದಿನವೂ ಖರೀದಿಗಾಗಿ ಹೊರಬರಬಾರದು ಎಂದರು.

ಪೊಲೀಸರು, ವೈದ್ಯರು, ಆಶಾ ಕಾರ್ಯಕರ್ತೆಯರು ಕಳೆದ ಒಂದೂವರೆ ವರ್ಷದಿಂದ ತಮ್ಮ ಕೌಟುಂಬಿಕ ಜೀವನ ಮರೆತು ಹಗಲು-ರಾತ್ರಿ ಸೇವೆ ಸಲ್ಲಿಸುತ್ತಿದ್ದಾರೆ. ಕಾರಣ ನಿಮ್ಮ ಜವಾಬ್ದಾರಿ ಅರಿತು ಮನೆಯಲ್ಲಿಯೇ ಇದ್ದು ಸೋಂಕಿನ ಕೊಂಡಿ ಕತ್ತರಿಸಲು ಸಹಕರಿಸಿ ಎಂದು ಜಿಲ್ಲಾಧಿಕಾರಿ ಕೋರಿಕೊಂಡಿದ್ದಾರೆ.

# ಆಮದು ನಿಯಮ ಸರಳೀಕರಣದಿಂದ ಲಸಿಕೆಯ ಲಭ್ಯತೆ ಹೆಚ್ಚಾಗಲಿದೆ

**ಡಾ.ಎ.ಹೆಚ್. ಶಿವಯೋಗಿ ಸ್ವಾಮಿ**



ದಾವಣಗೆರೆ, ಜೂ. 5 - ನಗರದ ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ಎರಡನೇ ಡೋಸ್ ಕೋವಾಕ್ಸಿನ್ ಲಸಿಕಾ ಅಭಿಯಾನವು ಇಂದು ನಡೆಯಿತು.

ಶ್ರೀ ಸೋಮೇಶ್ವರ ವಿದ್ಯಾಲಯದ ಕಾರ್ಯದರ್ಶಿ ಕೆ.ಎಮ್.ಸುರೇಶ್ ಹಾಗೂ ಮಹಾನಗರ ಪಾಲಿಕೆ ಸದಸ್ಯರಾದ ಕೆ.ಎಮ್.ವೀರೇಶ್, ಎಸ್.ಮಂಜುನಾಥ ನಾಯ್ಕ್, ಪಾಲಿಕೆ ನಾಮನಿರ್ದೇಶನ ಸದಸ್ಯ ಪಿ.ಎಸ್. ಬಸವರಾಜ್ ಅವರುಗಳು ಈ ಕಾರ್ಯಕ್ರಮವನ್ನು ನಿಟುವಳ್ಳಿ ಹಾಗೂ ಸುತ್ತಮುತ್ತಲಿನ ಭಾಗದ ನಿವಾಸಿಗಳಿಗೆ ವಿಶೇಷ ಮುತುವರ್ಜಿಯಿಂದ ಜಿಲ್ಲಾ ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಆಯೋಜಿಸಿದ್ದರು.

ಲಸಿಕೆ ವಿತರಣಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ವಿಧಾನ ಪರಿಷತ್ ಮಾಜಿ ಸಚೇತಕ ಡಾ.ಎ.ಹೆಚ್.ಶಿವಯೋಗಿ ಸ್ವಾಮಿ, ಕೇಂದ್ರ ಸರ್ಕಾರವು ವಿದೇಶಿ ಲಸಿಕೆಯ ಆಮದು ನಿಯಮಗಳನ್ನು ಸರಳೀಕರಣಗೊಳಿಸಿದೆ. ಈ ಕ್ರಮದಿಂದ ಭಾರತದಲ್ಲಿ ಲಸಿಕೆ ಇನ್ನಷ್ಟು ಸುಲಭವಾಗಿ ಜನರ ಕೈಸೇರಲಿದೆ. ಮುಂದಿನ ದಿನಗಳಲ್ಲಿ ಅಮೇರಿಕಾ, ಬ್ರಿಟನ್, ಜಪಾನ್ ಹಾಗೂ ಇತರೆ ದೇಶಗಳಲ್ಲಿ ಅಭಿವೃದ್ಧಿಪಡಿಸಿದ ಲಸಿಕೆಗಳು ಭಾರತದ ಮಾರುಕಟ್ಟೆಯಲ್ಲಿ ಲಭ್ಯವಾಗಲಿದ್ದು, ಲಸಿಕೆಗಳ ಅಭಾವ ನೀಗಲಿದೆ. ನಿರೀಕ್ಷಿತ ಕೊರೊನಾ ಮೂರನೇ ಅಲೆಯನ್ನು ಸಮರ್ಥವಾಗಿ ನಿಭಾಯಿಸುವ ನಿಟ್ಟಿನಲ್ಲಿ ಸರ್ಕಾರವು ಇನ್ನಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಿದೆ. ಸಾರ್ವಜನಿಕರು ಯಾವುದೇ ಆತಂಕ ಪಡದೇ ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕೊರೊನಾ ವಿರುದ್ಧ ಹೋರಾಡಬೇಕೆಂದು ಮನವಿ ಮಾಡಿದರು.

ಇಂದಿನ ಲಸಿಕಾ ಅಭಿಯಾನದಲ್ಲಿ ಸುಮಾರು 200 ಜನರಿಗೆ ಎರಡನೇ ಡೋಸ್ ಕೋವಾಕ್ಸಿನ್ ಹಾಕಲಾಯಿತು. ಮುಂದಿನ ದಿನಗಳಲ್ಲಿ ಸರಕಾರದ ಸಹಕಾರದೊಂದಿಗೆ 18 ರಿಂದ 44 ರ ವಯೋಮಾನದವರಿಗೂ ಲಸಿಕೆ ಕ್ಯಾಂಪ್ ಮಾಡುವ ಉದ್ದೇಶವಿದೆ ಎಂದು ಶ್ರೀ ಸೋಮೇಶ್ವರ ವಿದ್ಯಾಲಯದ ಕಾರ್ಯದರ್ಶಿ ಕೆ.ಎಮ್.ಸುರೇಶ್ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ ಎಲ್.ಎನ್. ಕಲ್ಲೇಶ್, ನಿಟುವಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ. ವಿದ್ಯಾ, ಹರೀಶ್ ಬಾಬು ಎನ್.ಆರ್., ಸೋಮಶೇಖರ್, ವಿ.ಸಿದ್ದೇಶ್, ಸಿ.ರಮೇಶ್, ಬಿ.ಎಸ್.ರವೀಶಾಚಾರ್ ಮತ್ತಿತರರು ಉಪಸ್ಥಿತರಿದ್ದರು.

## ಕೋವಿಡ್ ಸಂತ್ರಸ್ತರಿಗೆ ಉಪಹಾರ



ದಾವಣಗೆರೆ, ಜೂ.5- ಡೀಲಕ್ಸ್ ಸ್ಪೋರ್ಟ್ಸ್ ಕ್ಲಬ್, ಲೈಫ್‌ಲೈನ್ ಸ್ವಯಂ ಪ್ರೇರಿತ ರಕ್ತದಾನಿಗಳ ಸಮೂಹ, ಗಜಾನನ ಯುವಕರ ಸಂಘದ ವತಿಯಿಂದ ಕೆಟಿಜೆ ನಗರ 2ನೇ ಮುಖ್ಯರಸ್ತೆಯ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಕೋವಿಡ್ ಸಂತ್ರಸ್ತರಿಗೆ ಉಪಹಾರ ವಿತರಿಸುವ ಕಾರ್ಯಕ್ರಮಕ್ಕೆ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಸದಸ್ಯ ಅಬ್ದುಲ್ ಲತೀಫ್ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಎಂ.ಎನ್. ಚಂದ್ರಶೇಖರ್, ಲಿಂಗೇಶ್, ಪಂಪಣ್ಣ, ಸಂಗಮೇಶ್, ರಾಜು, ಚಂದ್ರು, ಅನಿಲ್ ಬಾರೆಂಗಳ್, ಪೃಥ್ವಿ ಬಾದಾಮಿ, ಗೋಪಾಲಕೃಷ್ಣ, ಮಾಧವ ಪದಕಿ, ಎಂ.ಜಿ. ಶ್ರೀಕಾಂತ್, ರಜತ್, ವಿನಯ್ ಪದಕಿ, ಶಂಕರಮೂರ್ತಿ, ಶ್ರೀಕಾಂತ್, ಕೆ.ಎಂ. ಸುನೀಲ್, ವಿಜಯಕುಮಾರ್, ವಸಂತರಾಜು, ಚನ್ನಬಸವ ಶೀಲವಂತ, ಮಾಧವಿ ಪುರುಷೋತ್ತಮ ಇದ್ದರು.

## ಡಿಎಸ್‌ಎಸ್‌ನಿಂದ ಆಹಾರ ವಿತರಣೆ



ದಾವಣಗೆರೆ, ಜೂ. 5 - ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಧ್ವನಿ) ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ರವಿ ನೇತೃತ್ವದಲ್ಲಿ ನಿರ್ಗತಿಕರಿಗೆ, ಬಡವರಿಗೆ ಪೊಲೀಸ್ ಸಿಬ್ಬಂದಿಗೆ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ರೋಗಿಗಳಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಕಾರ್ಯಕರ್ತರುಗಳಾದ ಇಬ್ರಾಹಿಂ, ಶಫಿವುಲ್ಲಾ, ದಾದಾಪೀರ್, ಸುಹೇಲ್, ಚಮನ್ ಸಾಬ್, ಎಸ್ ಬಸಪ್ಪ, ಕಾಂಗ್ರೆಸ್ ಮುಖಂಡ ಆನಂದಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಜಿಲ್ಲಾ ಅಧಿವಕ್ತ ಪರಿಷತ್‌ನಿಂದ ಪರಿಸರ ದಿನಾಚರಣೆ



ದಾವಣಗೆರೆ, ಜೂ. 5 - ಜಿಲ್ಲಾ ಅಧಿವಕ್ತ ಪರಿಷತ್ ವತಿಯಿಂದ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ನಗರದ ಬಾಲಕರ ಸರ್ಕಾರಿ ಪ್ರೌಢ ಶಾಲಾ ಮೈದಾನದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು. ಅಧಿವಕ್ತ ಜಿಲ್ಲಾ ಅಧ್ಯಕ್ಷ ಎಲ್. ದಯಾನಂದ, ಜಿಲ್ಲಾ ಸರ್ಕಾರಿ ವಕೀಲ ಕಾಕನೂರು ವೈ. ಮಂಜಪ್ಪ, ಅಧಿವಕ್ತ ಜಿಲ್ಲಾ ಉಪಾಧ್ಯಕ್ಷ ಬಿ.ಎಸ್. ಲಿಂಗ ರಾಜ್ ಡಿ ಹೆಚ್. ರಾಜು. ರೇಖಾ ಕೋಟೇಗಾರ್. ಅಧಿವಕ್ತ ರಾಜ್ಯ ಸಂಚಾ ಲಕರಾದ ಸಿ.ಪಿ. ಅನಿತಾ ಮನೋಜ್ ಕುಮಾರ್ ಮತ್ತು ಅಧಿವಕ್ತ ಪರಿ ಷತ್‌ನ ಖಜಾಂಚಿ ಯೋಗೇಶ್ವರಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಐಸಿಎಆರ್‌ನಿಂದ ಕೈತೋಟದ ತರಬೇತಿ

ದಾವಣಗೆರೆ, ಜೂ.5- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ವತಿಯಿಂದ ಅಂತರ್ಜಾಲದಲ್ಲಿ ಸಾವಯವ ಪೌಷ್ಟಿಕ ಕೈತೋಟದ ಬಗ್ಗೆ ತರಬೇತಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕೇಂದ್ರದ ಮುಖ್ಯಸ್ಥ ಡಾ. ದೇವರಾಜ ಅವರು, ಕಳೆದ 7 ವರ್ಷಗಳಲ್ಲಿ ಕೇಂದ್ರದಿಂದ 3800 ಕ್ಕೂ ಅಧಿಕ ಮಹಿಳೆಯರಿಗೆ ತರಬೇತಿ ನೀಡಲಾಗಿದ್ದು, ಇದರಲ್ಲಿ ಶೇ.30 ಕ್ಕೂ ಅಧಿಕ ಮಹಿಳೆಯರು ಕೈತೋಟ ಮತ್ತು ತಾರಸಿ ತೋಟ ಅಳ ವಡಿಸಿಕೊಂಡಿರುವುದು ಆಶಾದಾಯಕವಾಗಿದೆ ಎಂದರು. ಕೈತೋಟಕ್ಕೆ ಬೇಕಾಗುವ ಬೀಜದ ಕಿಟ್ಟನ್ನು ಕೇಂದ್ರದಿಂದ ನೂರು ರೂ.ಗೆ ವಿತರಿಸಲಾಗುತ್ತಿದೆ ಎಂದು ತಿಳಿಸಿದರು.

ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದ ತೋಟಗಾರಿಕಾ ತಜ್ಞ ಬಸವನಗೌಡ, ಕೈತೋಟದ ರೂಪು - ರೇಷೆಗಳನ್ನು ತಿಳಿಸಿಕೊಟ್ಟರು. ಕೈ ತೋಟದಿಂದ ನಾಗರಿಕರು ಸಾವಯವ ರೀತಿಯಲ್ಲಿ ತರಕಾರಿಗಳನ್ನು ಬೆಳೆದು ಉಪಯೋಗಿಸಿ, ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಡಾ.ದೇವರಾಜ್ ರವರು ಮಾತನಾಡುತ್ತಾ 'ಮನೆಗೊಂದು ತರಕಾರಿ' ಎಂಬ ಸಂಪ್ರದಾಯವನ್ನು ನಮ್ಮ ದಾವಣಗೆರೆ ನಗರದಲ್ಲಿ ಅವಕಾಶವಿದ್ದ ಎಲ್ಲಾ ಕುಟುಂಬಗಳು ಆರಂಭಿಸಿದರೆ ಒಳ್ಳೆಯದು ಎಂದರು.

ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ನಾಗರಿಕರು ಭಾಗವಹಿಸಿದ್ದರು. ಕೇಂದ್ರದ ವಿಸ್ತರಣಾ ತಜ್ಞ ಜೆ.ರಘುರಾಜ ಅವರು ಕಾರ್ಯಕ್ರಮ ನಡೆಸಿಕೊಟ್ಟರು.

## ಕೃಷಿ ಪಂಡಿತ, ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಜೂ.5- ಕೃಷಿ ಇಲಾಖೆಯು ಕೃಷಿ ಪಂಡಿತ ಪ್ರಶಸ್ತಿ, ಆತ್ಮ ಯೋಜನೆಯ ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿ ಹಾಗೂ ಜಿಲ್ಲಾ ಮಟ್ಟದ ಆಸಕ್ತ ಗುಂಪು ಪ್ರಶಸ್ತಿಗೆ ಆಸಕ್ತ ರೈತರಿಂದ ಅರ್ಜಿ ಆಹ್ವಾನಿಸಿದೆ. ಅರ್ಜಿಗಳನ್ನು ಸಂಬಂಧಪಟ್ಟ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಜುಲೈ 20 ರ ಒಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದಾವಣಗೆರೆ ಜಿಲ್ಲೆಯ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದೆಂದು ಉಪ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಲಸಿಕೆ ಡೋಸ್‌ಗಳಲ್ಲಿ ಭಾರತ, ಅಮೆರಿಕ, ಚೀನಾ ಪಾಲು ಶೇ.60

ವಿಶ್ವಸಂಸ್ಥೆ, ಜೂ. 5 – ಜಾಗತಿಕವಾಗಿ 200 ಕೋಟಿ ಡೋಸ್ ಲಸಿಕೆ ನೀಡಲಾಗಿದ್ದು, ಇದರಲ್ಲಿ ಶೇ.60ರಷ್ಟನ್ನು ಭಾರತ, ಅಮೆರಿಕ ಹಾಗೂ ಚೀನಾ ಪಡೆದಿವೆ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಸಂಘಟನೆಯ ಪ್ರಧಾನ ನಿರ್ದೇಶಕ ಟೆಡ್ರೋಸ್ ಅಥೋನ್ ಘೆಬ್ರೆಯೆಸಸ್, 212 ದೇಶಗಳಲ್ಲಿ 200 ಕೋಟಿಗೂ ಹೆಚ್ಚು ಡೋಸ್ ಲಸಿಕೆ ನೀಡಲಾಗಿದೆ ಎಂದಿದ್ದಾರೆ.

ಈ ಪೈಕಿ ಶೇ.75ರಷ್ಟು ಲಸಿಕೆಗಳು ಕೇವಲ 10 ದೇಶಗಳಿಗೆ ತಲುಪಿವೆ. ಚೀನಾ, ಅಮೆರಿಕ ಹಾಗೂ ಭಾರತಗಳು ಶೇ.60ರಷ್ಟು ಲಸಿಕೆ ಪಡೆದಿವೆ ಎಂದವರು ತಿಳಿಸಿದ್ದಾರೆ. ವಿಶ್ವ ಆರೋಗ್ಯ ಸಂಘಟನೆಯ ಕೊವ್ಯಾಕ್ಸ್ ಸಂಸ್ಥೆಯು 127 ದೇಶಗಳಿಗೆ ಲಸಿಕೆ ಪೂರೈಕೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಲಸಿಕೆ ಪಡೆಯುವುದು ಸವಾಲಾಗಿದೆ ಎಂದವರು ಹೇಳಿದ್ದಾರೆ.

ವಿಶ್ವದ ಶೇ.10ರಷ್ಟು ಜನಸಂಖ್ಯೆ ಹೊಂದಿರುವ ಅತಿ ಕಡಿಮೆ ಆದಾಯದ ದೇಶಗಳಿಗೆ ಶೇ.0.5ರಷ್ಟು ಮಾತ್ರ ಲಸಿಕೆ ತಲುಪಿದೆ ಎಂದೂ ಅವರು ತಿಳಿಸಿದ್ದಾರೆ.

# ವಿವಿಧೆಡೆಯಲ್ಲಿ ಎಸ್ಸೆಸ್ ಕೊಡುಗೆಯ ಲಸಿಕೆ ಅಭಿಯಾನ



ದಾವಣಗೆರೆ, ಜೂ. 5 - ಹಿರಿಯ ಶಾಸಕ ಡಾ|| ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ಕೊಡುಗೆ ನೀಡಿರುವ ಉಚಿತ ಲಸಿಕಾ ಶಿಬಿರವು ನಗರದ ವಿವಿಧೆಡೆಯಲ್ಲಿ ಇಂದು ನಡೆದಿದ್ದು, ಸುಮಾರು 300ಕ್ಕೂ ಹೆಚ್ಚು ನಾಗರಿಕರು ಉಚಿತ ಲಸಿಕೆ ಪಡೆದರು.


ನಗರ ಪಾಲಿಕೆಯ 5, 7, 8, 10, 18 ಮತ್ತು 45ನೇ ವಾರ್ಡುಗಳ ವ್ಯಾಪ್ತಿಯ ಡಾ|| ಬಾಬು ಜಗಜೀವನ ರಾಂ ಸಮುದಾಯ ಭವನ, ಶ್ರೀದುರ್ಗಾಂಬಿಕಾ ಶಾಲೆ, ಶ್ರೀ ದುರ್ಗಾಂಬಿಕಾ ದೇವಿ ಭೋಜನಾಲಯದಲ್ಲಿ ಲಸಿಕೆ ಅಭಿಯಾನ ಏರ್ಪಾಡಾಗಿತ್ತು.

ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಸಿಬ್ಬಂದಿ ವರ್ಗದವರು ಲಸಿಕಾ ಶಿಬಿರವನ್ನು ನಡೆಸಿಕೊಟ್ಟರು.

ಮೂರು ಲಸಿಕಾ ಕೇಂದ್ರಗಳಲ್ಲಿ ಲಸಿಕೆ ಪಡೆದ ನಾಗರಿಕರಿಗೆ ನೀರು ಮತ್ತು ಬಿಸ್ಕತ್ ಗಳನ್ನು ವಿತರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ನಗರ ಪಾಲಿಕೆ ಸದಸ್ಯರುಗಳಾದ ನಾಗರಾಜ್, ಸುಧಾ ಇಟ್ಟಿಗುಡಿ ಮಂಜುನಾಥ್, ಉದಯ್ ಕುಮಾರ್, ವಿನಾಯಕ ಪೈಲ್ವಾನ್, ಮುಖಂಡರುಗಳಾದ ಮಾಲತೇಶ್ ರಾವ್ ಜಾಧವ್, ಬಸಪ್ಪ, ಉಮೇಶ್ ಸಾಳಂಕಿ, ಬಾಬುರಾವ್ ಸಾಳಂಕಿ, ಪಿ.ಎನ್. ಚಂದ್ರಶೇಖರ್, ಆನಂದ ಇಟ್ಟಿಗುಡಿ ಮತ್ತಿತರರು ಅಭಿಯಾನದಲ್ಲಿ ಭಾಗವಹಿಸಿದ್ದರು.

# ಕೃಷ್ಣರಾಜ ಒಡೆಯರ್ ಜನ್ಮ ದಿನಾಚರಣೆಗೆ ನಿರಾಣಿ ಮನವಿ



ಬೆಂಗಳೂರು, ಜೂ. 5 - ಕರ್ನಾಟಕದ ಇತಿಹಾಸದಲ್ಲಿ ಅಭಿವೃದ್ಧಿಗೆ ಹೊಸ ವ್ಯಾಖ್ಯಾನ ಬರೆದ ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿನಲ್ಲಿ ಕೆಲವು ಪ್ರಮುಖ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಗಣಿ ಮತ್ತು ಭೂವಿಜ್ಞಾನ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಮುರುಗೇಶ್ ನಿರಾಣಿ ಅವರು ಸರಕಾರಕ್ಕೆ ಮನವಿ ಮಾಡಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ನಿರಾಣಿ ಅವರು, ಮುಂದಿನ ಯುವ ಜನಾಂಗಕ್ಕೆ ಇದು ಅತ್ಯಂತ ಅಗತ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ.

ಪ್ರಾಥಮಿಕ, ಪ್ರೌಢ ಶಾಲೆ, ಪದವಿ ಪೂರ್ವ ಹಾಗೂ ಪದವಿ ಕಾಲೇಜುಗಳ ಪಠ್ಯ ಪುಸ್ತಕದಲ್ಲಿ ಅವರ ಚರಿತ್ರೆಯನ್ನು ಅಳವಡಿಸಲು ಕ್ರಮಕೈಗೊಳ್ಳಬೇಕು.

ಸರ್ ಎಂ ವಿಶ್ವೇಶ್ವರಯ್ಯ ಅವರ ಜನ್ಮ ದಿನಾಚರಣೆಯನ್ನು ಎಂಜಿನಿಯರ್ ದಿನಾಚರಣೆ ಮಾಡಿದಂತೆ ಇನ್ನು ಮುಂದೆ ಜೂನ್ 4 ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮ ದಿನವನ್ನು ಸರಕಾರದ ವತಿಯಿಂದ ಆಚರಿಸಬೇಕು ಎಂದವರು ಆಗ್ರಹಿಸಿದ್ದಾರೆ.

ಅನೇಕ ಕೈಗಾರಿಕೆಗಳ ಸ್ಥಾಪನೆಗೆ ಕಾರಣೀಭೂತರಾದ ಅವರ ದಿನಾಚರಣೆಯನ್ನು 'ಕೈಗಾರಿಕಾ ದಿನಾಚರಣೆ' ಎಂತಲೂ ಆಚರಿಸಲು ಸೂಕ್ತವಾದ ನಿರ್ಧಾರ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದಾರೆ.


## ಸಾರ್ವಜನಿಕ (ಪ್ರಕಟಣೆ) ತಿಳುವಳಿಕೆ

ಈ ಮೂಲಕ ಸಾರ್ವಜನಿಕರಿಗೆ ನನ್ನ ಕಕ್ಷಿದಾರರಾದ ಬಿ.ಎಸ್. ರಾಜಪ್ಪ ತಂದೆ ಲೇಟ್ ಬಡಿಗೇರ ಸಿದ್ದಪ್ಪ ದೊಡ್ಡಬಾತಿ ಗ್ರಾಮ, ದಾವಣಗೆರೆ ತಾಲ್ಲೂಕು ಇವರ ಇಚ್ಛೆಯಂತೆ ತಿಳಿಸುವುದೇನೆಂದರೆ. 1) ಷೆಡ್ಯೂಲ್ ಸ್ವತ್ತು ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ಲೇಟ್ ಬಡಿಗೇರ ಸಿದ್ದಪ್ಪ ಇವರ ಕುಟುಂಬಕ್ಕೆ ಸೇರಿದ್ದು, ಈ ಸ್ವತ್ತು ಹಾಗೂ ಕುಟುಂಬದ ಇತರೆ ಸ್ವತ್ತುಗಳ ಸಂಬಂಧ ಅವರ ಮಕ್ಕಳಲ್ಲಿ ಒಬ್ಬರಾದ ನನ್ನ ಕಕ್ಷಿದಾರರು ಹಿಂದೂ ವಾರಸುದಾರಿಕೆ ನಿಯಮದಂತೆ ಪಾಲು ಪಡೆಯಲು ದಾವಣಗೆರೆ ಘನ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಒ.ಎಸ್. ಸಂಖ್ಯೆ 307/2018ನ್ನು ದಾಖಲಿಸಿದ್ದು ಅದು ವಿಚಾರಣಾ ಹಂತದಲ್ಲಿರುತ್ತದೆ. 2) ಈಗ ಷೆಡ್ಯೂಲ್ ಸ್ವತ್ತಿನಲ್ಲಿ ಮೇಲ್ಕಂಡ ದಾವೆಯಲ್ಲಿ ಪ್ರತಿವಾದಿ 2 ಅಂದರೆ ಬಿ.ಎಸ್. ಮಂಜುನಾಥ್ ತಂದೆ ಲೇಟ್ ಬಡಿಗೇರ ಸಿದ್ದಪ್ಪ, ಇವರು ಉಳಿದ ಪಕ್ಷಗಾರರಿಗೆ ಗೊತ್ತಿಲ್ಲದಂತೆ 3ನೇ ವ್ಯಕ್ತಿಯ ಹೆಸರಿನಲ್ಲಿ ಒಂದು ಪೆಟ್ರೋಲ್ ಬಂಕ್ ಸ್ಥಾಪಿಸಲು ತರಾತುರಿಯಲ್ಲಿ ಸಿದ್ಧತೆ ನಡೆಸಿದ್ದಾರೆಂದು ನನ್ನ ಕಕ್ಷಿದಾರರಿಗೆ ತಿಳಿದಿರುತ್ತದೆ. ಕಾರಣ ಸದರಿ ಸ್ವತ್ತನ್ನು ಕೊಂಡಾಗ ಅವರ ತಂದೆ ಲೇಟ್ ಬಡಿಗೇರ ಸಿದ್ದಪ್ಪನವರು ಸದರಿ ಮಂಜುನಾಥ್ ಇವರು ಕುಟುಂಬದ ಹಿರಿಯ ಮಗನಾದ್ದರಿಂದ ಅವರ ಹೆಸರಿಗೆ ಮಾಡಿಸಿದ್ದನ್ನು ದುರುಪಯೋಗ ಮಾಡಿಕೊಂಡು ಸದರಿ ಮಂಜುನಾಥ್ ಇವರ ಖಾಸಾ ತಮ್ಮನಾದ ನನ್ನ ಕಕ್ಷಿದಾರರಿಗೆ ಮತ್ತು ಇತರೆ ಪಕ್ಷಗಾರರಿಗೆ ವಂಚಿಸುವ ದೃಷ್ಟಿಯಿಂದ ಸಂಬಂಧಿಸಿದ ಪ್ರಾಧಿಕಾರಗಳಿಂದ, ಸುಳ್ಳು ಮಾಹಿತಿ ನೀಡಿ, "ನಿರಾಕ್ಷೇಪಣಾ ಪತ್ರ" (ಎನ್.ಒ.ಸಿ.) ಪಡೆದು 3ನೇ ವ್ಯಕ್ತಿಯ ಹೆಸರಿನಲ್ಲಿ ಷೆಡ್ಯೂಲ್ ಸ್ವತ್ತಿನಲ್ಲಿ ಒಂದು ಪೆಟ್ರೋಲ್ ಬಂಕನ್ನು ಸ್ಥಾಪಿಸಲು ಹುನ್ನಾರ ನಡೆಸಿರುತ್ತಾರೆ. 3) ಈಗ ಷೆಡ್ಯೂಲ್ ಸ್ವತ್ತಿನ ಸಂಬಂಧ ನ್ಯಾಯಾಲಯದಲ್ಲಿ ವಿವಾದವಿರುವುದರಿಂದ ಯಾವುದೇ ಬದಲಾವಣೆ ಅಂದರೆ ಕೃಷಿಯೇತರ ಚಟುವಟಿಕೆಗಳು ಸಂಬಂಧಿಸಿದಂತೆ ಬದಲಾವಣೆ ಹಾಗೂ ಯಾವುದೇ ರೀತಿಯ ವರ್ಗಾವಣೆ ಕಾನೂನಿನಲ್ಲಿ ನಿಷಿದ್ಧವಿರುವುದರಿಂದ ಷೆಡ್ಯೂಲ್ ಸ್ವತ್ತಿನಲ್ಲಿ ಪೆಟ್ರೋಲ್ ಬಂಕ್ ಹಾಕಲು ಅಥವಾ ಯಾವುದೇ ಕೃಷಿಯೇತರ ಯಂತ್ರಗಳನ್ನು ಸ್ಥಾಪಿಸಲು ಯಾವುದೇ ರೀತಿಯ ವರ್ಗಾವಣೆ ಮಾಡಿಕೊಳ್ಳಬಾರದೆಂದು ಈ ಮೂಲಕ ಸಾರ್ವಜನಿಕರಲ್ಲಿ ತಿಳಿಸಲಾಗಿದೆ. 4) ಹಾಗೊಂದು ವೇಳೆ ವ್ಯವಹಾರ ಮಾಡಿದಲ್ಲಿ ಅಂತಹ ವ್ಯವಹಾರವೂ ಸಂಪೂರ್ಣವಾಗಿ ಅಕ್ರಮವೂ, ಕಾನೂನು ಬಾಹಿರವೂ, ಅಸಿಂಧುವೂ ಆಗುತ್ತದೆ ಮತ್ತು ಅಂತಹ ವ್ಯವಹಾರವು ಸ್ವತ್ತಿನ ಮೇಲಿನ ನನ್ನ ಕಕ್ಷಿದಾರರ ಹಕ್ಕುಗಳಿಗೆ ಯಾವುದೇ ರೀತಿಯ ಬಾಧಕವನ್ನು ಉಂಟು ಮಾಡುವುದಿಲ್ಲ. ಬದಲಿಗೆ ಅಂತಹ ವ್ಯವಹಾರ ಮಾಡಿದವರು ನಷ್ಟಕ್ಕೆ ಗುರಿಯಾಗುತ್ತಾರೆ.

**ಷೆಡ್ಯೂಲ್ : ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಹಳೇ ಬಾತಿ ಗ್ರಾಮದ ಸ.ನಂ. 24/1ಪಿ2 ಯಲ್ಲಿಯ 2 ಎಕರೆ 15 ಗುಂಟೆ ಮತ್ತು ಸ.ನಂ. 24/1ಪಿ3 ಯಲ್ಲಿಯ 25 ಗುಂಟೆ ಒಟ್ಟಾರೆ 3 ಎಕರೆ ಜಮೀನಿಗೆ ಚೆಕ್ಕುಬಂದಿ : ಪೂರ್ವ : ಎ. ಬಸವರಾಜಪ್ಪ ಇವರು 10 ಅಡಿ ಅಗಲದ ಉಳಿಸಿಕೊಂಡ ದಾರಿ ನಂತರ ಶಾಂತಪ್ಪನ ಜಮೀನು. ಪಶ್ಚಿಮ : ಕರಿಯಪ್ಪರ ಹನುಮಂತಪ್ಪನವರ ಜಮೀನು, ಉತ್ತರ : ಕುಂದುವಾಡಕ್ಕೆ ಹೋಗುವ ರಸ್ತೆ, ದಕ್ಷಿಣ : ಇದೇ ಸ.ನಂ. ಪೈಕಿ ಎ. ಬಸವರಾಜಪ್ಪನವರ ಜಮೀನು.**

**ಸ್ಥಳ : ದಾವಣಗೆರೆ.** **ಸಹಿ/- ಎಂ. ಸಿದ್ದಯ್ಯ, ಬಿ.ಎ.ಎಲ್.ಎಲ್.ಬಿ.,**
**ದಿನಾಂಕ : 05.06.2021** **ವಕೀಲರು (99803 76127)**

## ರಾಶಿ ಭವಿಷ್ಯ

**ದಿನಾಂಕ : 06.06.2021 ರಿಂದ 12.06.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಲು.ಲೇ.ಲೊ.ಅ.)**

ಧನಾದಾಯ ಉತ್ತಮವಾಗಿದೆ, ಸರ್ವರಿಂದಲೂ ಸರ್ವ ರೀತಿಯಿಂದ ಸಿಗಲಿದೆ. ವ್ಯವಹಾರ ನಿಮಿತ್ತವಾಗಿ ಬಹುದೂರ ಪ್ರಯಾಣ ಮಾಡಲೇಬೇಕಾದ ಪ್ರಸಂಗ ಬರಲಿದ್ದು, ಯೋಜನೆಗಳು ನಿಮ್ಮ ಜವಾಬ್ದಾರಿಯನ್ನು ಹೆಚ್ಚಿಸಲಿದೆ. ಒತ್ತಡಗಳಿಂದ ಹೊರಬರಲು ಧ್ಯಾನ-ಯೋಗಗಳಿಗೆ ಮೊರೆ ಹೋಗುವುದು ಮೇಲು. ಹಿರಿಯರ ಅಣತಿಯಂತೆ ನಡೆದುಕೊಳ್ಳುವುದು. ಸೋದರನ ಆರೋಗ್ಯದಲ್ಲಿ ತುಸು ವ್ಯತ್ಯಾಸವಾಗಬಹುದು. ಕುಲದೇವತಾ ದರ್ಶನಭಾಗ್ಯ ಒದಗಿ ಬರಲಿದೆ. ಇದನ್ನು ತಪ್ಪಿಸಿಕೊಳ್ಳಬೇಡಿ. ಗುರುಹಿರಿಯರನ್ನು ಗೌರವಿಸಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಬೇರೆಯವರ ವೈಯಕ್ತಿಕ ವಿಚಾರದಲ್ಲಿ ನಿಮ್ಮ ಪ್ರವೇಶ ಬೇಡ. ಅಸ್ತವ್ಯಸ್ತವಾಗಿದ್ದ, ಆರ್ಥಿಕ ಪರಿಸ್ಥಿತಿ ಕ್ರಮೇಣ ಹತೋಟಿಗೆ ಬರಲಿದೆ. ಕುಟುಂಬದಲ್ಲಿ ಮೂಡಿರುವ ಗೊಂದಲಗಳು ಮಧ್ಯವರ್ತಿಗಳಿಂದ ಸರಿಹೋಗಲಿದೆ. ಆದಾಯದಲ್ಲಿ ಸೋರಿಕೆ ಕಂಡುಬರಲಿದೆ. ಲೇವಾದೇವಿ ವ್ಯವಹಾರ ಸದ್ಯಕ್ಕೆ ಬೇಡ. ವಿದ್ಯಾರ್ಥಿಗಳು ಶ್ರಮಪಡದೇ ಉತ್ತಮ ಫಲಿತಾಂಶ ನಿರೀಕ್ಷಿಸಲು ಸಾಧ್ಯವಿಲ್ಲ. ಖಾಸಗಿ ಕಂಪನಿ ಉದ್ಯೋಗಿಗಳಿಗೆ ಅಸ್ಥಿರತೆ. ಆದಾಯದ ಮೂಲ ಹೆಚ್ಚಿಸಿಕೊಳ್ಳದೇ, ಉಳಿತಾಯದ ಬಗ್ಗೆ ಯೋಚಿಸಲು ಹೋಗಬೇಡಿ. ಆರೋಗ್ಯದ ಅಲಕ್ಷೆ ಸುತಾರಾಂ ಸಲ್ಲದು. ಚಾಡಿಮಾತುಗಳನ್ನು ಕೇಳದಿರುವುದು ಉತ್ತಮ. ಹೂವು, ಹಣ್ಣು, ತರಕಾರಿ ವ್ಯಾಪಾರದಲ್ಲಿ ಹೆಚ್ಚಿನ ಲಾಭ. ಗುರು, ಶುಕ್ರ, ಶನಿ, ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಕೆಲವು ಕೆಲಸ ಕಾರ್ಯಗಳಲ್ಲಿ ಅನಿರೀಕ್ಷಿತವಾಗಿ, ವೈಫಲ್ಯ ಕಂಡುಬಂದರೂ ಚಿಂತೆಬೇಡ. ಇಷ್ಟರಲ್ಲೇ ಎಲ್ಲವೂ ಸರಿಹೋಗಲಿದೆ. ಮಕ್ಕಳ ಭವಿಷ್ಯದ ಬಗ್ಗೆ ಚಿಂತೆ ಮಾಡಬೇಡಿ. ಮಹಿಳೆಯರು ತಾವಾಡುವ ಮಾತುಗಳಿಂದ ಕುಟುಂಬದ ಸದಸ್ಯರಲ್ಲಿ ಅಸಮಾಧಾನ ಮೂಡಬಹುದು. ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸ, ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯಾಗಲಿದೆ. ಬೇರೆಯವರಿಗೂ, ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೊದಲು ಅದಕ್ಕೆ ಬೇಕಾದ ಆರ್ಥಿಕ ಮೂಲವನ್ನು ಕಂಡುಕೊಳ್ಳದೇ ಕಾರ್ಯರೂಪಕ್ಕೆ ತರಲು ಹೋಗಬೇಡಿ. ಸತತ ಪರಿಶ್ರಮದಿಂದ ಮಾತ್ರ ಯಶಸ್ಸು ಸಾಧ್ಯ. ಮಿತಿಮೀರುತ್ತಿರುವ ಖರ್ಚು-ವೆಚ್ಚಗಳ ಮೇಲೆ ಹಿಡಿತ ಸಾಧಿಸುವುದು ಮೇಲು. ಭಾನು -ಸೋಮ-ಬುಧ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಆಸ್ತಿ ಖರೀದಿಗೆ ಬಂಧುಗಳಿಂದ ಆರ್ಥಿಕ ನೆರವು ದೊರೆಯಲಿದೆ. ವೈದ್ಯಕೀಯ ವೃತ್ತಿಯಲ್ಲಿರುವವರಿಗೆ ಒತ್ತಡ, ಅವಿವಾಹಿತರಿಗೆ ಕಂಕಣಭಾಗ್ಯ ಇಷ್ಟರಲ್ಲೇ ಕೂಡಿಬರಲಿದೆ. ಸರ್ಕಾರಿ ನೌಕರಿಯಲ್ಲಿರುವ ಮಹಿಳೆಯರಿಗೆ, ಹುದ್ದೆಯಲ್ಲಿ ಪದೋನ್ನತಿಯಾಗಲಿದೆ. ಪದವೀಧರರಿಗೆ, ಅನೇಕ ಅವಕಾಶಗಳು ತಾವಾಗಿಯೇ ಬರಲಿವೆ, ಬದಲಾವಣೆಯೆಂಬುದು ಬದುಕಿನ ಅವಿಭಾಜ್ಯವಾಗಿದ್ದು, ಅದಕ್ಕೆ ಹೊಂದಿಕೊಂಡು ಹೋಗುವುದು ಉತ್ತಮ. ಅನಿರೀಕ್ಷಿತ ಖರ್ಚುಗಳು ಎದುರಾಗಲಿದ್ದು, ಅದನ್ನು ಭರಿಸಲು ಆದಾಯವನ್ನು ಹೆಚ್ಚಿಸಿಕೊಳ್ಳುವುದು ಉತ್ತಮ. ಸಂಶೋಧನಾ ರಂಗದಲ್ಲಿರುವವರಿಗೆ, ಸರ್ಕಾರದಿಂದ ಹೆಚ್ಚಿನ ಅನುದಾನ ಸಿಗಲಿದೆ. ವ್ಯಾಪಾರ ವಹಿವಾಟಿನಲ್ಲಿ ತುಸು ಹೆಚ್ಚಿನ ಎಚ್ಚರದಿಂದಿರುವುದು ಉತ್ತಮ. ಅತಿಯಾದ ಮೋಜು ಮಸ್ತಿ ಒಳ್ಳೆಯದಲ್ಲ. ಸೋಮ, ಬುಧ, ಗುರು, ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಸಾಂಸಾರಿಕ ಗೊಂದಲ ಕಷ್ಟಕೋಟಲೆಗಳಲ್ಲೇ ಅನಾರೋಗ್ಯ ಸಮಸ್ಯೆಯೊಂದಿಗೆ ಜಂಜಾಟದ ಪರಿಸ್ಥಿತಿಯಲ್ಲಿದ್ದ ನಿಮಗೆ ಈ ವಾರ ಕೊಂಚ ಬಿಡುವು, ವೃತ್ತಿಯಲ್ಲಿರುವ ಶ್ರದ್ಧೆ ಕೈಬೀಸಿ ಕರೆಯಲಿದೆ, ಯಾರ ಮೇಲೆ ಎಷ್ಟೇ ಅಸಹನೆ ಇದ್ದರೂ ಅದನ್ನು ತೋರ್ಪಡಿಸದೆ, ಸಹನೆಯಿಂದ ವರ್ತಿಸಿ. ಸರ್ಕಾರಿ ನೌಕರರಿಗೆ ಸಹೋದ್ಯೋಗಿಗಳ ಪಿತೂರಿಯಿಂದಾಗಿ, ಮೇಲಾಧಿಕಾರಿಗಳೊಂದಿಗೆ ವಾಗ್ವಾದ, ಈ ಪ್ರಸಂಗವನ್ನು ಬಹಳ ಸೂಕ್ಷ್ಮವಾಗಿ ಹಾಗೂ ಜಾಣ್ಮೆಯಿಂದ ನಿರ್ವಹಿಸಿರಿ. ಬೇಕು, ಬೇಡವಾದುದ್ದನ್ನೆಲ್ಲಾ ಚಿಂತಿಸುವುದರಿಂದ ಮನಸ್ಸಿನ ನೆಮ್ಮದಿ ಹಾಳಾಗಬಹುದು. ಖರ್ಚುವೆಚ್ಚಗಳ ಬಗ್ಗೆ ನಿಗಾ ಇರಲಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಪ್ರಗತಿ, ಭಾನು-ಸೋಮ-ಬುಧ-ಶುಬದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಬೇರೆಯವರಿಂದ ಎಷ್ಟೇ ಒತ್ತಡ ಬಂದರೂ, ನಿಮ್ಮ ಅನುಭವ ಮತ್ತು ಸಾಮರ್ಥ್ಯಗಳೇ ನಿಮ್ಮ ಉದ್ಯೋಗವನ್ನು ಉಳಿಸುತ್ತವೆ, ಅವ್ಯವಸ್ಥಿತವಾಗಿದ್ದ ಹಣಕಾಸಿನ ವ್ಯವಹಾರವು ಮಿತ್ರರ ನೆರವಿನಿಂದ ಸರಿದಾರಿಗೆ ಬರಲಿದೆ. ಅತ್ಯುತ್ಸಾಹದಿಂದ ಆರಂಭಿಸಿದ್ದ ಉದ್ಯಮದಲ್ಲಿ ಸಾಧಾರಣ ಎನ್ನಬಹುದಾದ ಲಾಭ ಬರಲಿದೆ.ಚಾಡಿಮಾತಿನಿಂದಾಗಿ ಸೋದರರ ನಡುವೆ ಭಿನ್ನಾಭಿಪ್ರಾಯ ಮೂಡಲಿದೆ. ಸಾಧ್ಯವಾದಷ್ಟು ಅಂತಹವರನ್ನು ದೂರವಿಡುವುದು ಕ್ಷೇಮ. ಸರ್ಕಾರದಿಂದಾಗ ಬೇಕಾಗಿರುವ ಕೆಲಸಗಳು ಸದ್ಯದ ಮಟ್ಟಿಗೆ ಆಗುವುದು ಕಷ್ಟ.ಹಾಗೆಂದ ಮಾತ್ರಕ್ಕೆ ನಿರಾಶೆ ಬೇಡ. ತಾಳ್ಮೆಯೇ ಇಲ್ಲಿ ಮುಖ್ಯ. ವ್ಯವಹಾರದಲ್ಲಿ ಸಾಕಷ್ಟು ಚರ್ಚೆನಡೆದು ಕೊನೆ ಹಂತದಲ್ಲಿ ನಿಮ್ಮ ಪಾಲುದಾರಿಕೆ ಉಳಿಯಲಿದೆ. ಹಳೇ ಕಾಯಿಲೆಗಳು ಮತ್ತೆ ಮರುಕಳಿಸುವ ಸಂಭವವಿದೆ. ಮಡದಿ ಮಕ್ಕಳ ಮಿತಿಮೀರಿದ ಖರ್ಚು ನಿಮ್ಮನ್ನು ಕಂಗಾಲಾಗಿಸಬಹುದು. ಕುಲದೇವತಾರಾಧನೆಯನ್ನು ಶ್ರದ್ಧೆಯಿಂದ ಮಾಡಿರಿ. ಬುಧ-ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ನಿಮ್ಮ ಸಾಮರ್ಥ್ಯವನ್ನು ಮೀರಿ ಯಾವುದೇ ಕೆಲಸಗಳನ್ನು ಮತ್ತೊಬ್ಬರ ಒತ್ತಾಯಕ್ಕೆ ಒಳಗಾಗಿ ಮಾಡಬೇಡಿ, ಹಗಲು ಕನಸು ಕಾಣಲು ಹೋಗಬೇಡಿ. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಆಲಸ್ಯ ತೋರದಿರಿ, ಸಂಪ್ರದಾಯದಲ್ಲಿ ಸಾಕಷ್ಟು ಆಸಕ್ತಿ ಮೂಡಲಿದೆ. ಅನುಭವಿಗಳಾದ ಹಿರಿಯರು ಕೊಡುವ ಮಾರ್ಗದರ್ಶನ ವನ್ನು ಉಪೇಕ್ಷಿಸಬೇಡಿ, ಖಾಸಗಿ ಕಂಪನಿ ನೌಕರರಿಗೆ ಸಂಸ್ಥೆಯಲ್ಲಿ ಜವಾಬ್ದಾರಿ ಹೆಚ್ಚಾಗಬಹುದು. ಅದನ್ನು ನಿಭಾಯಿಸಲು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಿ. ಆದಾಯದ ಮೂಲದಲ್ಲಿ ಹೆಚ್ಚಳ, ಅವಿವಾಹಿತರಿಗೆ ಕಂಕಣ ಬಲ, ಯಾರಿಂದಲೇ ಆಗಲಿ ಅತಿಯಾದ ನಿರೀಕ್ಷೆ ಬೇಡ. ಗುರು-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯು.)**

ಉದ್ಯೋಗ ಸ್ಥಳದಲ್ಲಿದ್ದ ಗೊಂದಲಗಳು ವಾದ-ವಿವಾದಗಳು, ಸರ್ಕಾರದಿಂದ ಬರಬೇಕಾಗಿರುವ ಸಕಲ ಸವಲತ್ತುಗಳು ಇಷ್ಟರಲ್ಲೇ ನಿಮ್ಮ ಕೈಸೇರಲಿವೆ. ಹಿಂದೆ ಆರಂಭಿಸಿದ್ದ ಉದ್ಯಮದಲ್ಲಿ ಕೊಂಚ ನಷ್ಟ ಕಂಡುಬರಲಿದ್ದು, ಅದಕ್ಕಾಗಿ ಚಿಂತಿಸಬೇಕಿಲ್ಲ. ಉದ್ಯೋಗದ ನಿಮಿತ್ತ ಹೆಚ್ಚು ಪ್ರಯಾಣ ಮಾಡಬೇಕಾಗಬಹುದು. ವೈದ್ಯಕೀಯ ವೆಚ್ಚವೂ ಕೂಡ ಹೆಚ್ಚಾಗಲಿದೆ. ಕೆಲವರು ಕೊಟ್ಟ ಭರವಸೆಗಳು, ಭರವಸೆಗಳಾಗಿಯೇ ಉಳಿಯಲಿವೆ. ಹೆಂಡತಿಯ ತವರು ಮನೆಯಿಂದ ಸಿಗುವ ನೆರವನ್ನು ಸದುಪಯೋಗ ಪಡಿಸಿಕೊಳ್ಳಿ. ಆರೋಗ್ಯದ ಉಪೇಕ್ಷೆ ಸರ್ವದಾ ಸಲ್ಲದು. ಸೂರ್ಯೋಪಾಸನೆ ವಿಶೇಷವಾಗಿ ಮಾಡಿ. ಸೋಮ, ಮಂಗಳ, ಗುರು, ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಉತ್ಸಾಹಿ ಶಾಲಿಗಳಾದ ನಿಮಗೆ ಅಸಾಧ್ಯವಾದುದು ಯಾವುದೂ ಇಲ್ಲ. ಕ್ರಿಯಾಶೀಲರಾದ ನಿಮಗೆ ಅವಕಾಶಗಳು ತಾವಾಗಿಯೇ ಹುಡುಕಿಕೊಂಡು ಬರಲಿವೆ. ಹಣದ ಹರಿವು ಸಾಧಾರಣವಾಗಿರುವುದರಿಂದ ಹಿತಮಿತವಾಗಿ ವೆಚ್ಚ ಮಾಡುವುದು ಲೇಸು. ಹಿರಿಯರು ಮನೆಯಲ್ಲಿ ಜಾರಿ ಬೀಳದಂತೆ ಎಚ್ಚರವಹಿಸಿ. ಎಂತಹ ಸನ್ನಿವೇಶದಲ್ಲೂ ತಾಳ್ಮೆಯನ್ನು ಕಳೆದುಕೊಳ್ಳಬೇಡಿ, ದೂರದೂರಿನಿಂದ ಬಂಧುಗಳ ಅನಾರೋಗ್ಯ ಸಮಾಚಾರ ಕೇಳಿ ಕಳವಳಗೊಳ್ಳುವಿರಿ. ವೃಥಾ ತಿರುಗಾಟದಿಂದ ಅನಾರೋಗ್ಯ. ಮನೆಕಟ್ಟುವ ಅಥವಾ ಕೊಳ್ಳುವ ವಿಚಾರವನ್ನು ಕೆಲಕಾಲ ಮುಂದೂಡಿ, ಮಗನಿಗೆ ವಿವಾಹ ಯೋಗ ಬರಲಿದೆ. ಬುಧ-ಗುರು-ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ನೀವು ಆರಂಭಿಸಲಿರುವ ಹೊಸ ಯೋಜನೆಗಳಿಗೆ ಬ್ಯಾಂಕ್ ಮೊದಲಾದ ಹಣಕಾಸು ಸಂಸ್ಥೆಗಳಿಂದ ಅಪೇಕ್ಷಿಸಿದಷ್ಟು ಸಾಲ ಸಿಗಲಿದೆ. ಹಾಗೆಂದ ಮಾತ್ರಕ್ಕೆ ಅನವಶ್ಯಕವಾಗಿ ಸಾಲ ಮಾಡಿದಲ್ಲಿ ತೊಂದರೆ ತಪ್ಪಿದ್ದಲ್ಲ. ಹೊಸ ವಾಹನ ಖರೀದಿಸಲು ಸಕಾಲ. ಕೆಲಸ ಕಾರ್ಯಗಳು ಹೆಚ್ಚಾದವೆಂದು ದೇಹವನ್ನು ದಂಡಿಸಬೇಡಿ. ಅನಗತ್ಯ ಕೋಪ, ತಾಪಗಳಿಂದ ಸಂಬಂಧಕ್ಕೆ ಧಕ್ಕೆ, ನಿವೃತ್ತಿಯಂಚಿನಲ್ಲಿರುವವರಿಗೆ ಮತ್ತೊಂದು ತಾತ್ಕಾಲಿಕ ನೌಕರಿ ಸಿಗಲಿದೆ. ತಮ್ಮ ಗಳಿಕೆ ಹಣವನ್ನು ಸರಿಯಾದ ರೀತಿಯಲ್ಲಿ ಹೂಡಿಕೆ ಮಾಡುವುದು ಲೇಸು. ನೆರೆಹೊರೆಯವರೊಂದಿಗೆ ಬಾಂಧವ್ಯ ವೃದ್ಧಿಸಲಿದೆ. ಮಕ್ಕಳ ಉನ್ನತ ಏಳಿಗೆ, ಸಮಾಜದಲ್ಲಿ ಗೌರವ ಹೆಚ್ಚಿಸಲಿದೆ. ಬುಧ-ಶುಕ್ರ ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಆತ್ಮವಿಶ್ವಾಸದಲ್ಲಿ ಹೆಚ್ಚಿನ ನಂಬಿಕೆಯಿಡಿ. ಧೈರ್ಯದಿಂದ ಮುನ್ನಡೆದಲ್ಲಿ ಯಶಸ್ಸು ನಿಮ್ಮ ಪಾಲಿಗೆ ಕಟ್ಟಿಟ್ಟ ಬುತ್ತಿಯಾಗಲಿದೆ. ಕಂಡರಿಯದವರ ಹಣಕಾಸಿನ ವ್ಯವಹಾರದಲ್ಲಿ ಮಧ್ಯಸ್ಥರಾಗಲು ಹೋದಲ್ಲಿ ನೀವೇ ತೊಂದರೆಗೆ ಸಿಕ್ಕಿ ಹಾಕಿಕೊಳ್ಳುವಿರಿ. ರೈತಾಪಿ ಜನರಿಗೆ ಹೊಲಗದ್ದೆಗಳಲ್ಲಿ ಬಿಡುವಿಲ್ಲದ ಕೆಲಸವಾಗಲಿದೆ. ಊಟೋಪಚಾರದ ವಿಷಯದಲ್ಲಿ ಸಾಕಷ್ಟು ಎಚ್ಚರದಿಂದಿರಿ. ಕೌಟುಂಬಿಕ ವಿಚಾರಗಳಲ್ಲಿ ಕಟ್ಟುನಿಟ್ಟಾಗಿರುವುದು ಉತ್ತಮ. ಸ್ನೇಹಿತರ ಅನಾರೋಗ್ಯ ವಿಷಯ ನಿಮ್ಮನ್ನು ಕಂಗೆಡಿಸಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ, 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಅತ್ಯುತ್ಸಾಹದಿಂದ ಆರಂಭಿಸಿದ್ದ ಉದ್ಯಮದಲ್ಲಿ ಕೊಂಚ ಹಿನ್ನಡೆ. ಹಾಗೆಂದ ಮಾತ್ರಕ್ಕೆ ಉದ್ಯಮವನ್ನು ಬದಲಿಸುವ ಹುಚ್ಚು ಸಾಹಸಕ್ಕೆ ಕೈಹಾಬೇಡಿ. ಮಾಧ್ಯಮ ಮಿತ್ರರು ತುಸು ಎಚ್ಚರದಿಂದ ತಮ್ಮ ಕರ್ತವ್ಯವನ್ನು ಮಾಡುವುದು ಉತ್ತಮ. ಸಂಸಾರದಲ್ಲಿ ಸಾಕಷ್ಟು ನೆಮ್ಮದಿ ಕಾಣುವಿರಿ. ಹಿರಿಯರನ್ನು ಗೌರವಿಸುವುದರೊಂದಿಗೆ, ಅವರ ಕೋರಿಕೆಗಳನ್ನು ಪೂರೈಸಲು ಪ್ರಯತ್ನಿಸಿ. ಅಪರಿಚಿತರೊಂದಿಗೆ ಕಾನೂನು ಬಾಹಿರ ವ್ಯವಹಾರಗಳನ್ನು ಮಾಡಲು ಹೋಗಿ ತೊಂದರೆಗೆ ಸಿಕ್ಕಿಕೊಳ್ಳಬಹುದು. ಸಾಧ್ಯವಾದಷ್ಟು ಗುರು ದೇವತಾನುಗ್ರಹ ಸಂಪಾದಿಸಲು ಪ್ರಯತ್ನಿಸಿ. ವಿದ್ಯಾರ್ಥಿಗಳಿಗೆ ದಿನಗಳು ಸಾಧಾರಣ. ಬುಧ-ಗುರು-ಶನಿ-ಶುಭ ದಿನಗಳು.

# ಪ್ರೊ. ಬಿಜಿಎನ್ ಎಂಬ ಮಹಾ ಬೆರಗು...



ಬಿಜಿಎನ್ ನುಡಿ ನಮನ

ನಾನು ಪದವಿ ಓದಲೆಂದು ದಾವಣಗೆರೆಗೆ ಬಂದದ್ದು 1992ರಲ್ಲಿ. ಆಗಷ್ಟೇ ಕೋಮುಗಲಭೆಯಲ್ಲಿ ಮಿಂದೆದ್ದ ದಾವಣಗೆರೆಯಲ್ಲಿ ಓದುವುದು ನನ್ನಪ್ಪ ಅಮ್ಮನಿಗೆ ಇಷ್ಟವಿರಲಿಲ್ಲ. ಆದರೆ ಬದುಕನ್ನು ತಂದೆಯ ನೆರಳಿಲ್ಲದ ಬಯಲಿನಲ್ಲಿ ಕಟ್ಟಿಕೊಳ್ಳಬೇಕೆಂಬ ನನ್ನ ಆಸೆಗೆ ಅವರು ಅಡ್ಡಿ ಮಾಡಲಿಲ್ಲ.

ಒಂದು ಭಾಗದಲ್ಲಿ ಬಿಡಿಟಿ ಇಂಜಿನಿಯರಿಂಗ್ ಕಾಲೇಜ್, ಮತ್ತೊಂದು ಭಾಗದಲ್ಲಿ ಜೆಜೆ ಮೆಡಿಕಲ್ ಕಾಲೇಜ್ ಇದ್ದು ನಡುವೆ ಗಂಭೀರವಾಗಿ ಕೂತಿದ್ದ ಧ.ರಾ.ಮ ವಿಜ್ಞಾನ ಕಾಲೇಜಿನಲ್ಲಿ ಬಿಎಸ್ಸಿ ಗಾಗಿ ಪ್ರವೇಶ ಪಡೆಯುವ ನನ್ನ ಕನಸು ಸುಲಭ ಸಾಧ್ಯವಾಗಿರಲಿಲ್ಲ. ಯಾವ ಶಿಫಾರಸ್ಸು ಮತ್ತು ವಶೀಲಿಗಳಿಗೂ ಒಪ್ಪಿ ಸೀಟು ಕೊಡದ ನಿಷ್ಠೂರಿ ಪ್ರಾಂಶುಪಾಲರಾದ ಪ್ರೊ. ಬಿ. ಜಿ. ನಾಗರಾಜ್ ರವರನ್ನ ಭೇಟಿ ಮಾಡಲೂ ನನಗೆ ಅಳುಕು. ಆಗ ನೆರವಿಗೆ ಬಂದವರು ಅದೇ ಕಾಲೇಜಿನ ಪ್ರಾಣಿ ಶಾಸ್ತ್ರ ಪ್ರಾಧ್ಯಾಪಕ ಜಿ. ಹೆಚ್. ಶಂಕರಪ್ಪನವರು. ಅವರೊಂದಿಗೆ ಛೇಂಬರ್‌ನ ಒಳಹೊಕ್ಕ ನನ್ನ ಸ್ವಾಗತಿಸಿದ್ದು ಸಿಗರೇಟಿನ ಘಾಟು ಹೊಗೆ ಮತ್ತು ಬಿಜಿಎನ್ ರ ನಗೆ!!

ಕಡಕ್ ಆಸಾಮಿ ಎಂದೇ ಹೆಸರಾಗಿದ್ದ ಬಿಜಿಎನ್ ಸದಾ ನಗು ಮೊಗದವರು. ಅವರು ಗಣಿತದ ಪ್ರಾಧ್ಯಾಪಕರು ಮತ್ತು ನಮ್ಮ ಧ.ರಾ.ಮ ಕಾಲೇಜಿಗೆ ಸುದೀರ್ಘ ಅವಧಿಗೆ ಪ್ರಾಂಶುಪಾಲರಾಗಿ ದ್ದವರು. ಖಚಿತ ನಿಲುವಿನ, ಮಾನವೀಯ ಅಂತಃಕರಣದ, ಅಪಾರ ಓದಿನ ಮಹಾನ್ ವಾಗ್ಮಿ ಈ ವಾಮನ ಮೂರ್ತಿ. ನಮ್ಮ ದಾವಣಗೆರೆ ಸೀಮೆಯ ಬಹುತೇಕ ಕಡೆ ಅವರ ಭಾಷಣಗಳು ಬಹು ಜನಪ್ರಿಯ.

Mathematical derivation, successive differentiation, ಬೇಂದ್ರೆಯವರ ಗಂಗಾವತರಣ ಹೀಗೆ ಎಲ್ಲವನ್ನೂ ಪಠ್ಯದ ನೆರವಿಲ್ಲದಂತೆ ವಿವರಿಸುವ ಅಪಾರ ಸ್ಮರಣೆ ಅವರದು. ಅವರ ಪಾಠವೇ ವಿಜ್ಞಾನ ಓದುತ್ತಿದ್ದ ನಮಗೆಲ್ಲಾ ಸಾಹಿತ್ಯ ಪ್ರೀತಿ ಮೂಡಿಸಿದ್ದು!! ಹಾಗೆ ಸಾಹಿತ್ಯ ಕಲೆ ಬಗ್ಗೆ ಪ್ರೀತಿ ಮೂಡಿದ್ದ ನನ್ನಂತಹ ಹಲವರನ್ನು ಅವರು ಕಾಳಜಿಯಿಂದ ಪೊರೆದಿದ್ದರು. ಹಾಗೆ ಅವರ ಅಂತಃಕರಣ ಉಂಡ ನೂರಾರು ಜನರಲ್ಲಿ ಕವಿ ಬಿ.ಎನ್. ಮಲ್ಲೇಶ್, ಕಲಾವಿದ ನಾ. ರೇವನ್. . . ಪ್ರಮುಖರು.

ವಿದ್ಯಾರ್ಥಿಗಳು ಸಂಘಟನೆಯ ಹೆಸರಿನಲ್ಲಿ ರಾಜಕೀಯ ಮಾಡಿ, ಅವರ ವಿದ್ಯಾಭ್ಯಾಸ ಹಾಳು ಮಾಡಿಕೊಳ್ತಾರೆ ಎಂದು ವಿದ್ಯಾರ್ಥಿ ಸಂಘವನ್ನೇ ವಿಸರ್ಜಿಸಿದ್ದ ಅವರ ಮನಸ್ಸು ಒಲಿಸಿ, ಮತ್ತೆ ವಿದ್ಯಾರ್ಥಿ ಸಂಘ ಪ್ರಾರಂಭಿಸುವಲ್ಲಿ ನನ್ನ ಸೀನಿಯರ್ ಬ್ಯಾಚ್ ನ ಗೆಳೆಯರು ಯಶಸ್ವಿಯಾಗಿದ್ದರು. ಆಗ ಆರಂಭ ವಾದ ರಂಜನಾ ಹೆಸರಿನ ಸಾಂಸ್ಕೃತಿಕ ಸಂಭ್ರಮ, ವಿದ್ಯಾರ್ಥಿ ಸಂಘದ ಚಟುವಟಿಕೆಗಳೂ ಬಿಜಿಎನ್ ರವರು ನೀಡಿದ್ದ ವಿವೇಕಯುತ ಸ್ವಾಯತ್ತತೆಯಂತೇ ನಡೆಯುತ್ತಿದ್ದವು.

ತತ್ವ ಬದ್ಧ ರಾಜಕಾರಣವನ್ನು ಬೆಂಬಲಿಸುತ್ತಿದ್ದ ಬಿಜಿಎನ್ ಹಾಕಿಕೊಟ್ಟ ಮಾರ್ಗದಿಂದಾಗಿ ವಿದ್ಯಾರ್ಥಿ ಸಂಘದ ಚುನಾವಣೆ ಯಾವುದೇ ಆಮಿಷ, ಅಬ್ಬರಗಳಿಲ್ಲದೇ ನ್ಯಾಯಯುತವಾಗಿ ನಡೆಯುತ್ತಿತ್ತು. ಹಾಗಾಗಿಯೇ ಜೇಬಿನಲ್ಲಿ ಹತ್ತು ರೂಪಾಯಿ ಇಲ್ಲದ, ಹಿಂಬಾಲಕರಿಲ್ಲದ ನನ್ನಂತಹ ನಾನು ವಿದ್ಯಾರ್ಥಿ ಸಂಘದ ನಾಯಕನಾಗಿ ಚುನಾಯಿತನಾಗಿದ್ದೆ!!

ಹಣವಂತ ವಿದ್ಯಾರ್ಥಿಗಳು ಟ್ಯೂಷನ್ ಸೇರಿ, ಕಾಲೇಜಿನ ಕ್ಲಾಸ್ ಗಳಿಗೆ ಹಾಜರಾಗುತ್ತಿರಲಿಲ್ಲ. ಹಾಜರಾತಿಯ ಕೊರತೆಯಿಂದ ಪ್ರಾಧ್ಯಾಪಕರು ತರಗತಿ ತೆಗೆದುಕೊಳ್ಳುವುದೇ ದುಸ್ತರವಾಗಿದ್ದ ಆ ಹೊತ್ತು ಬಿಜಿಎನ್ ತರಗತಿಯ ಹಾಜರಾತಿಯನ್ನು ಕಡ್ಡಾಯಗೊಳಿಸಿ ಸುತ್ತೋಲೆ ಹೊರಡಿಸಿದ್ದರು. ಗ್ರಾಮೀಣ ಭಾಗದಿಂದ ಬರುತ್ತಿದ್ದ ಬಡ ವಿದ್ಯಾರ್ಥಿಗಳು ಇತ್ತ ಟ್ಯೂಷನ್ ಸೇರಲಾಗದೇ, ಕಾಲೇಜಿನಲ್ಲಿ ತರಗತಿಗಳೂ ನಡೆಯದೇ ಕಂಗಾಲಾಗಿದ್ದರಿಂದ ವಿದ್ಯಾರ್ಥಿ ಸಂಘದ ನಾಯಕನಾಗಿ ನಾನು ಪ್ರಾಚಾರ್ಯರ ಸುತ್ತೋಲೆ ಬೆಂಬಲಿಸಿ, ಹಣವಂತ ವಿದ್ಯಾರ್ಥಿಗಳ ಮತ್ತು ಟ್ಯೂಷನ್ ಕೋರ ಅಧ್ಯಾಪಕರ ವಿರೋಧ ಕಟ್ಟಿಕೊಂಡಿದ್ದೆ!

ನನ್ನನ್ನು ವಿದ್ಯಾರ್ಥಿ ಸಂಘದ ನಾಯಕ ಸ್ಥಾನದಿಂದ ಇಳಿಸಲು ಜನಾಭಿಪ್ರಾಯ ರೂಪಿಸಿ, ಪಿಕೆಟಿಂಗ್ ಮಾಡುತ್ತಿದ್ದವರ ಮೀಟಿಂಗ್ ಕರೆದಿದ್ದರು ಬಿಜಿಎನ್. ಬೇಸರದಿಂದ ನಾನೇ ರಾಜೀನಾಮೆ ಕೊಡಲು ಮುಂದಾಗಿದ್ದೆ. ಆಗ ಬಿಜಿಎನ್ ರಾಜೀನಾಮೆಯನ್ನು ಅಂಗೀಕರಿಸಿ, ಸಂಘವನ್ನು ವಿಸರ್ಜಿಸುವುದಾಗಿ ಹೇಳಿದರು. ಆ ಗುಟುರಿಗೇ ಎಲ್ಲರ ಬುಡದಲ್ಲಿ ನೀರು ಹರಿದು, ನನ್ನ ಮೇಲಿನ ವಿರೋಧವೇ ಕೊಚ್ಚಿ ಹೋಗಿತ್ತು!!

ಅವರು ವಿದ್ಯಾರ್ಥಿಗಳನ್ನು ಕಾಲೇಜಿನಲ್ಲಿದ್ದಾಗ ಮಾತ್ರವಲ್ಲ, ನಂತರವೂ ಸದಾ ತಂದೆಯಂತೆ ಪ್ರೋತ್ಸಾಹಿಸುತ್ತಿದ್ದರು ಮತ್ತು ಆತ್ಮವಿಶ್ವಾಸ ತುಂಬುತ್ತಿದ್ದರು. ಇದಕ್ಕೆ ಒಂದು ನಿದರ್ಶನವನ್ನು ನನ್ನ ಬದುಕಿನಿಂದಲೇ ಕೊಡಬಹುದು. 1995 ರಲ್ಲಿ ಅಂತಿಮ ಬಿಎಸ್ಸಿ ಪದವಿಯ ಪರೀಕ್ಷೆ ಬರೆದ ನಾನು ಮುಂದಿನ ಸ್ನಾತಕೋತ್ತರ ವಿದ್ಯಾಭ್ಯಾಸ ಅಥವಾ ಬಿ. ಎಡ್. ತರಬೇತಿ ಎಂಬ ಬಗ್ಗೆ ಯೋಚಿಸುತ್ತಿದ್ದೆ. ಆದರೆ ಫಲಿತಾಂಶ ವ್ಯತಿರಿಕ್ತವಾಗಿತ್ತು. ನಾನು ಅಂತಿಮ ಪದವಿಯ ಪರೀಕ್ಷೆಯಲ್ಲಿ ಕೆಮಿಸ್ಟ್ರಿ ವಿಷಯ ಒಂದರಲ್ಲಿ ಅನುತ್ತೀರ್ಣನಾಗಿದ್ದೆ. ನಾನು ಆ ವರೆಗೆ ಕಂಡ ಕನಸುಗಳು ನುಚ್ಚುನೂರಾಗಿ ಯಾರನ್ನೂ ಭೇಟಿಯಾಗದೇ, ಎದುರಿಸಲಾಗದೇ ಅಜ್ಞಾತ ವಾಸಕ್ಕಾಗಿ ನನ್ನ ತಾಯಿಯ ತವರು ಗುಂಜಿಗನೂರು ಸೇರಿದ್ದೆ. ಅದೊಂದು ದಿನ ಸಾಣೇಹಳ್ಳಿಯ ನಾಟಕೋತ್ಸವಕ್ಕೆ ಹೊರಟ ಬಿಜಿಎನ್ ಚಿಕ್ಕಜಾಜೂರು ಹತ್ತಿರದಲ್ಲಿ ರೈಲ್ವೇ ಹಳಿಯ ಬಳಿ ಬರುತ್ತಿದ್ದ ನನ್ನನ್ನು ದೂರದಿಂದಲೇ ಗುರುತಿಸಿ, ಕಾರು ನಿಲ್ಲಿಸಿ ಕಾಯ್ದು ಮಾತನಾಡಿಸಿದ್ದರು. ಅವರ ಸಲಹೆ ಮತ್ತು ಮಾರ್ಗದರ್ಶನದಂತೆ ನಾನು ಆ ವಿಷಯದ ಪೂರಕ ಪರೀಕ್ಷೆ ಬರೆದು ಉತ್ತೀರ್ಣನಾಗಿ, ಈಗಿನ ಸರ್ಕಾರಿ ಕೆಲಸಕ್ಕೆ ಸೇರಿಯೂ ವಿದ್ಯಾಭ್ಯಾಸ ಮುಂದುವರೆಸಿ ನನ್ನ ಆಸಕ್ತಿಯ ಕನ್ನಡ ಸಾಹಿತ್ಯದಲ್ಲಿ ಎಂ.ಎ., ಮಾಡಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ದಿಂದ ಪಿಹೆಚ್‌ಡಿ ಪದವಿಯನ್ನೂ ಪಡೆದೆ.

ನಾನು ಅಂತಿಮ ವರ್ಷ ಪದವಿಗಾಗಿ ಓದುತ್ತಿದ್ದ 1994 ರಲ್ಲಿ ಕುವೆಂಪು ತೀರಿ ಹೋದರು. ಅವರ ಸ್ಮರಣೆಗಾಗಿ 1994 ರ ಡಿಸೆಂಬರ್ 29 ರಂದು (ಕುವೆಂಪು ಜನ್ಮದಿನ) ಕುವೆಂಪು ಸಂಜೆ ಎಂಬ ಅಂತರ್ ಕಾಲೇಜು ಸ್ಪರ್ಧೆ ಮತ್ತು ಕಾರ್ಯಕ್ರಮ ಆಯೋಜಿಸಿದ್ದ ಬಿಜಿಎನ್ ನಮಗೆಲ್ಲಾ ನಿರಂಕುಶ ಮತಿಗಳಾಗುವ, ಸಾಂಸ್ಕೃತಿಕ ಜವಾಬ್ದಾರಿ ಹೊರುವ ದೀಕ್ಷೆಯನ್ನೇ ನೀಡಿದ್ದರು.

ಅಂದಿನಿಂದ ಇಂದಿನವರೆಗೆ ಅವರ ಗುರುವಾಕ್ಕಿನಂತೆ ಸಾಂಸ್ಕೃತಿಕ ವಲಯದಲ್ಲಿ ಉತ್ತರದಾಯಿತ್ವ ಹೊಂದಿರುವ ದೊಡ್ಡ ಶಿಷ್ಯ ಪಡೆಯೇ ಬಿಜಿಎನ್ ರ ಆಶಯವನ್ನು ಸಾಕಾರಗೊಳಿಸಲು ಉನ್ಮುಖವಾಗಿದೆ. ಅವರು ಬೆರಳಿಟ್ಟು ತೋರಿದ ದಾರಿ ಮುಂದಿದೆ, ಹಿಂದೆ ಅಭಯ ನೀಡಿ ಗುರಿ ತೋರಿದ್ದ ಗುರುವಿನ ಛಾಯೆಯಿದೆ. ಮುಂದೆ ಅಡಿಯಿಡಬೇಕಾದುದು ಜೀವನ ಧರ್ಮ. ಅದುವೇ ಗುರು ಕಾರುಣ್ಯಕ್ಕೆ ನೀಡುವ ಶಿಷ್ಯ ಕಾಣಿಕೆ.



**- ಡಾ. ಆನಂದ್ ಋಗ್ವೇದಿ**
ದಾವಣಗೆರೆ.

## ಸಿಇಟಿ ಅಂಕ ಮಾನದಂಡ

**(1ನೇ ಪುಟದಿಂದ)** ಮಾಡುತ್ತೇವೆ ಎಂದು ಅವರು ತಿಳಿಸಿದರು.

ಪಿಯುಸಿ ನಂತರ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಸೀಟ್ ಪಡೆಯಲು ಕನಿಷ್ಠ ಅಂಕ ಬೇಕು. ಅದಕ್ಕಾಗಿ ಸಿಇಟಿ ಪರೀಕ್ಷೆ ಮಾನದಂಡವಾಗಲಿದೆ. ಸಿಇಟಿ ಮೂಲಕ ಬರುವ ಅಂಕದ ಆಧಾರದ ಮೇಲೆ ಮೆಡಿಕಲ್, ಡೆಂಟಲ್ ಹಾಗೂ ಎಂಜಿನಿಯರಿಂಗ್ ಸೀಟ್ ಹಂಚಿಕೆ ಮಾಡಲಾಗುವುದು ಎಂದರು.

## 13,800 ಸೋಂಕಿತರು ಪತ್ತೆ


**(1ನೇ ಪುಟದಿಂದ)** ಇದೇ ದಿನ 25,346 ಜನ ಗುಣಮುಖರಾಗಿದ್ದು, ರಾಜ್ಯದಲ್ಲಿ ಈಗ 2.68 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ 2,686 ಸೋಂಕಿತರು ಕಂಡು ಬಂದಿದ್ದು, 206 ಜನ ಸಾವನ್ನಪ್ಪಿದ್ದಾರೆ. ನಗರದಲ್ಲೀಗ 1.24 ಲಕ್ಷ ಸಕ್ರಿಯ ಸೋಂಕಿತರಿದ್ದಾರೆ.

## 14 ರವರೆಗೆ ಲಾಕ್‌ಡೌನ್

**(1ನೇ ಪುಟದಿಂದ)** ರಶೀದಿಯಲ್ಲಿ ನಮೂದಿತ ವಿಳಾಸದ ಅಂಗಡಿ ಮತ್ತು ಗೋದಾಮುಗಳಲ್ಲಿ ಸರಕು ಇಳಿಸಲು ಮತ್ತು ತೆಗೆದುಕೊಂಡು ಹೋಗಲು ಮಾತ್ರ ದಿನ ಪೂರ್ತಿ ಅವಕಾಶ ನೀಡಲಾಗಿದೆ. ಉಳಿದಂತೆ ಈ ಹಿಂದಿನ ಮಾರ್ಗಸೂಚಿಗಳೇ ಅನ್ವಯಿಸಲಿವೆ.

# ಗಿಡಮರಗಳ ಹಾಗೆ ಪರೋಪಕಾರಿಯಾಗು ಮಾನವ...



ಒಮ್ಮೆ ಒಬ್ಬ ರಾಜನಿಗೆ ತಾನು ಸಾವಿರಾರು ವರ್ಷ ಬದುಕಬೇಕೆಂದು ಆಸೆಯಾಯಿತು. ಅದಕ್ಕೆ ಋಷಿಮುನಿಗಳನ್ನು ಸಂಪರ್ಕಿಸಿದ. ಅವರು ಉತ್ತರ ಹಿಮಾಲಯದಲ್ಲಿ ಒಬ್ಬ ಸನ್ಯಾಸಿ ಇರುವರು. ಅವರು ಹಿಮಾಲಯದಲ್ಲಿರುವ ಅಮರತ್ವದ ರಸ ತಯಾರಿಸುವ ಗಿಡದ ಬಗ್ಗೆ ತಿಳಿಸುತ್ತಾರೆ ಎಂದು ಹೇಳುತ್ತಾರೆ. ರಾಜ ನೋಡಿಯೇ ಬಿಡಬೇಕೆಂದು ಹೊರಡುತ್ತಾನೆ. ಅಲ್ಲಿ ತಪಸ್ಸಿಗೆ ಕುಳಿತಿರುವ ಸನ್ಯಾಸಿಯ ಹತ್ತಿರ ತನ್ನ ಬಯಕೆ ಹೇಳುತ್ತಾನೆ. ಆಗ ಆ ಸನ್ಯಾಸಿ ನಕ್ಕು "ರಾಜ ಈ ಔಷಧಿಯನ್ನು ಹುಡುಕಿಕೊಂಡು ಬಹಳ ಮಂದಿ ಬಂದಿದ್ದಾರೆ ಹಾಗೂ ನಾನು ದಾರಿಯನ್ನೂ ತೋರಿಸಿದ್ದೇನೆ. ಅವರಿಗೆ ಉಪಯೋಗಿಸುವ ರೀತಿ ತಿಳಿಸಿದಂತೆ ನಿನಗೂ ತಿಳಿಸುತ್ತೇನೆ" ಎಂದನು. ರಾಜನಿಗೆ ತುಂಬಾ ಖುಷಿಯಾಗಿ "ದಯವಿಟ್ಟು ಆ ಗಿಡಮೂಲಿಕೆ ರಸ ತೋರಿಸಿ. ನೀವು ಹೇಳಿದ ರೀತಿಯಲ್ಲೇ ತೆಗೆದುಕೊಳ್ಳುವೆ" ಎಂದನು. ಸನ್ಯಾಸಿ ತೋರಿಸಿದ ಗಿಡಮೂಲಿಕೆ ಕಿತ್ತು ತರುತ್ತಾನೆ. ಸನ್ಯಾಸಿ ಅದರಿಂದ ರಸ ತಯಾರಿಸಿ "ಇಲ್ಲಿಂದ ಸ್ವಲ್ಪ ಮುಂದೆ ಹೋದರೆ ಅಲ್ಲಿ ಒಂದು ಕಾಡು ಸಿಗುತ್ತದೆ. ಅಲ್ಲಿ ಒಬ್ಬ ಮುದುಕ ಗಿಡಗಳಿಗೆ ನೀರು ಹಾಕುತ್ತಿರುತ್ತಾನೆ. ಅವನು ಈ ಔಷಧವನ್ನು ಯಾವ ರೀತಿ ಉಪಯೋಗಿಸಬೇಕು ಎಂದು ತಿಳಿಸುತ್ತಾನೆ" ಎಂದು ಹೇಳಿ ಕಣ್ಣು ಮುಚ್ಚಿ ಧ್ಯಾನಸ್ಥನಾಗುತ್ತಾನೆ.

ರಾಜ ಕಾಡಿನ ಕಡೆ ಹೊರಡುತ್ತಾನೆ. ಔಷಧವನ್ನು ಕುಡಿದು ಸಾವಿರಾರು ವರ್ಷ ಬದುಕಬೇಕು ಎಂದು ಖುಷಿಯಿಂದ ಬೇಗ ಬೇಗ ಹೆಜ್ಜೆ ಹಾಕಿ ಕಾಡು ತಲುಪಿದ. ಅಲ್ಲಿ ಒಬ್ಬ ಬೆನ್ನು ಬಾಗಿದ, ಹಲ್ಲುಗಳು ಉದುರಿದ, ಚರ್ಮವೆಲ್ಲಾ ಸುಕ್ಕುಗಟ್ಟಿದ ಹಣ್ಣು ಹಣ್ಣು ಮುದುಕ ಗಿಡಗಳಿಗೆ ನೀರುಣಿಸುತ್ತಿದ್ದನು. ರಾಜ ಹತ್ತಿರ ಹೋಗುತ್ತಿದ್ದಂತೆಯೇ ಆ ಮುದುಕು 'ಬಾರಪ್ಪಾ ಬಾ... ನೀನೂ ಸಾವಿರಾರು ವರ್ಷ ಬದುಕುವ ಆಸೆಯಿಂದ ಔಷಧಿ ತರೋಕೆ ಹೋಗಿದ್ದಿಯಾ?" ಎಂದು ಕೇಳಿದನು. ರಾಜನು ಆಶ್ಚರ್ಯದಿಂದ "ನಿಮಗೆ ಹೇಗೆ ಗೊತ್ತಾಯಿತು? ಇದನ್ನು ತೆಗೆದುಕೊಳ್ಳುವ ಬಗೆ ಹೇಗೆ? ನೀವು ಒಬ್ಬಂಟಿಯಾಗಿ ಇಲ್ಲೇನು ಮಾಡುತ್ತಿರುವಿರಿ?" ಎಂದು ಕೇಳಿದನು. ಆ ಮುದುಕನು ಜೋರಾಗಿ ನಗುತ್ತಾ "ನಿನ್ನಂಥವರು ಇಲ್ಲಿಗೆ ಹೀಗೆ ಸಾವಿರಾರು ಜನರು ಬಂದು ಹೋಗಿದ್ದಾರೆ". ಅದಕ್ಕೆ ಆಶ್ಚರ್ಯಚಕಿತನಾದ ರಾಜನು "ಹೌದೇ? ಎಲ್ಲರೂ ಔಷಧಿ ತೆಗೆದುಕೊಂಡು ಸಾವಿರ ವರ್ಷ ಬಾಳುತ್ತಿರುವರೇ? ಈ ಔಷಧಿ ಅಷ್ಟು ಪರಿಣಾಮಕಾರಿಯೇ? ಇದನ್ನು ತೆಗೆದುಕೊಳ್ಳುವ ರೀತಿ ಹೇಗೆ?" ಎಂದನು. ಆಗ ಮುದುಕನು "ಅಯ್ಯೋ.... ಹುಚ್ಚಪ್ಪಾ ನಿನ್ನ ಹಾಗೆಯೇ ಬಹಳ ಜನ ಬಂದು ಔಷಧಿ ಇಸ್ಕೋತಿದಾರೆ. ಆದರೆ ಯಾರೂ ತಗೋತಿಲ್ಲ. ಇಲ್ನೋಡು ನೂರಾರು ವರ್ಷಗಳ ಕೆಳಗೆ ನಾನೂ ನಿನ್ನ ಹಾಗೆಯೇ ಸಾವಿರಾರು ವರ್ಷ ಬದುಕಬೇಕೆಂಬ ಆಸೆಯಿಂದ ಆ ಔಷಧಿ ಸೇವಿಸಿದೆ ಹಾಗೂ ಬದುಕಿಯೇ ಇದ್ದೇನೆ ನೋಡು. ನನ್ನ ಕಣ್ಣ ಮುಂದೆಯೇ ಹೆಂಡತಿ, ಮಕ್ಕಳು, ಮೊಮ್ಮಕ್ಕಳು, ಗೆಳೆಯರು, ಬಂಧು-ಬಾಂಧವರು ಎಲ್ಲಾ ತೀರಿಕೊಂಜರು. ನನ್ನ ಕೈಯ್ಯಲ್ಲಿ ದುಡಿಯಲು ಶಕ್ತಿಯಿಲ್ಲ. ರೋಗ ರುಜಿನಗಳು ಬಾಧಿಸುತ್ತಿವೆ. ಯಾಕಾಗಿ ಬದುಕಿರಬೇಕು, ಯಾರಿಗಾಗಿ ಬಾಳಬೇಕು?. ನನ್ನ ಈ ದುರವಸ್ಥೆ ನೋಡಿ ಯಾರೂ ಊರಿನಲ್ಲಿ ಹತ್ತಿರ ಸೇರಿಸುತ್ತಿಲ್ಲ. ಅದಕ್ಕೆ ಬದುಕಲೂ ಆಗದೆ, ಸಾಯಲೂ ಆಗದೇ ನಿಮ್ಮಂಥವರಿಗೆ ಉಪದೇಶ ಹೇಳುತ್ತಾ ಕಾಲ ತಳ್ಳುತ್ತಿದ್ದೇನೆ. ಸಾವಿರಾರು ವರ್ಷ ಬದುಕುವ ಆಸೆ ಬಿಟ್ಟುಬಿಡು. ಇರುವಷ್ಟು ದಿನ ಈ ಗಿಡಮರಗಳ ಹಾಗೆ ಪರೋಪಕಾರಿಯಾಗಿ ಜೀವನ ಮಾಡು" ಎನ್ನುತ್ತಾನೆ.

ರಾಜನು ಆ ಮುದುಕನ ದೀನಸ್ಥಿತಿ ನೋಡಿ ಹಿಂದೆ ಮುಂದೆ ಯೋಚಿಸದೇ ಕೈಯಲ್ಲಿರುವ ಔಷಧಿಯನ್ನು ಗಿಡಗಳ ಬುಡಕ್ಕೆ ಚೆಲ್ಲುತ್ತಾನೆ. 'ನನ್ನ ಕಣ್ಣು ತೆರೆಸಿದಿರಿ. ತಾತ.... ಹೌದು ಈ ಔಷಧಿ ಈ ಗಿಡಗಳಿಗೇ ಸೇರಬೇಕು. ಇವು ಬದುಕಿದ್ದರೆ ಮನುಷ್ಯರು ಉಳಿಯುತ್ತಾರೆ. ನಾವು ಬದುಕಿದರೆ ಯಾರಿಗೂ ಬೇಡ... ಆದರೆ ಗಿಡಮರಗಳು ಇರಬೇಕು' ಎಂದು ನಮಸ್ಕರಿಸಿ ತನ್ನ ರಾಜ್ಯಕ್ಕೆ ಹಿಂದಿರುಗಿ ತನ್ನ ಉಸಿರಿರುವವರೆಗೂ ಉತ್ತಮವಾಗಿ ರಾಜ್ಯಭಾರ ಮಾಡುತ್ತಾನೆ.

ಅದಕ್ಕೆ ನಾವು ಬದುಕುವುದಕ್ಕೆ ಗಿಡಮರಗಳನ್ನು ಬದುಕಿಸಬೇಕು. ಅವು ನಮಗೆ ಆಮ್ಲಜನಕ ನೀಡುತ್ತವೆ. ಒಂದು ಗಿಡ ನೂರಾರು ಜನಕ್ಕೆ ಜೀವನ ನೀಡುತ್ತದೆ.

**- ಮಮತ ನಾಗರಾಜ್**
ಪಾರಂಪರಿಕ ವೈದ್ಯರು, ದಾವಣಗೆರೆ.
mamathahodigere@gmail.com

## ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ

ಪ್ರಕೃತಿಯ ಮಡಿಲಲ್ಲಿ
ಈ ಜಗವೇ ಸುಂದರ
ದುಷ್ಟ, ಕ್ರೂರಿ ಮಾನವನ
ದುಬಾರಿ ಬಯಕೆಗಳಿಗೆ
ಬದುಕಾಗಿದೆ ಇಂದು ನಶ್ವರ

ದುರಾಸೆಯ ಬಿರುಗಾಳಿಗೆ ಸಿಕ್ಕಿ
ನಲುಗುತಿಹ ಹುಲು ಜೀವವೇ
ಇನ್ನಾದರೂ ತಿದ್ದಿ ನಡೆ ನಿನ್ನ
ತಪ್ಪುಗಳ, ಫಲವಿಲ್ಲ ನಂತರ
ಅದೆಷ್ಟು ಅತ್ತರೂ ಬಿಕ್ಕಿ ಬಿಕ್ಕಿ

ಅಹಂಕಾರದ ಅಮಲು
ಬಿಡದು ನೆಮ್ಮದಿಯಿಂದಿರಲು
ನಿನ್ನ ಕ್ರೌರ್ಯ ಮುಟ್ಟುತ್ತಿದೆ
ಮುಗಿಲು ಪ್ರತಿ ಹೆಜ್ಜೆಗೂ
ಮೂಡುತ್ತಿದೆ ದಿಗಿಲು

ಕೋಟಿ ಕೋಟಿ ಹಣವಿದ್ದರೂ
ಕಾಯಲಾರದು ನಿನ್ನ ಜೀವ
ಉಸಿರಾಡಲು ಎದುರಾಗಿದೆ
ಸ್ವಚ್ಛ ತಂಗಾಳಿಯ ಅಭಾವ

ನಮ್ಮ ಪರಿಸರದ ಸಂರಕ್ಷಣೆ
ಪ್ರತಿಯೊಬ್ಬ ನಾಗರಿಕನ ಹೊಣೆ
ಅರಿತು ಬದುಕದಿರೆ ಮನುಜ
ನಿನ್ನ ವಿನಾಶವು ಬಲು ಸಹಜ

ತಾನೆ ಹೆಣೆದ ಬಲೆಯಲ್ಲಿ
ಜೇಡನ ಸಾವು ಬರೆದಂತೆ
ನಿನ್ನ ಪಾಪದ ಕೂಪದಲಿ
ನಿನ್ನ ಕೊನೆಯು ಇಹುದಂತೆ

**- ಶ್ರೀಮತಿ ಸುನಿತಾ ಪ್ರಕಾಶ್**

## ಪರಿಸರ ರಕ್ಷಣೆ -ನಮ್ಮೆಲ್ಲರ ಹೊಣೆ

ಅದುವೇ ಸೊಗಸು, ಹಚ್ಚ ಹಸಿರಿನ ಪರಿಸರ
ದಟ್ಟ ಕಾನನದ ಸೌಂದರ್ಯ ವೇ ನಯನ ಮನೋಹರ
ತರಗೆಲೆಗಳ ಮೇಲಿನ ಮುತ್ತಿನಂತಹ ಇಬ್ಬನಿ
ಸೂರ್ಯ ರಶ್ಮಿಯ ಸ್ಪರ್ಶದಿಂದ ಕಂಗೊಳಿಸುವೆ ನೀ

ವಿಧವಿಧವಾದ ಗಿಡಮರಗಳ ವೈಯ್ಯಾರ
ಎಲ್ಲೆಲ್ಲಿ ಕಣ್ಣಾಯಿಸಿದರೂ ಹಸಿರಿನ ಹೊದಿಕೆಯ ಶಿಖರ
ನೀನಾಗಿರುವೆ ಪ್ರತಿ ಜೀವಸಂಕುಲಗಳ ವಾಸಸ್ಥಾನ
ಪರಿಶುದ್ಧ ಗಾಳಿಯ ಪಸರಿಸಿ ಸಂರಕ್ಷಿಸಿಕೊಳ್ಳುವೆ ನಿನ್ನ ಸಂಸ್ಥಾನ

ಭೂಮಿಯ ಎಲ್ಲಾ ಜೀವಿಗಳ ಅವಲಂಬನೆ ನಿನ್ನ ಮೇಲೆ
ಇದ ತಿಳಿಯದ ಅವಿವೇಕಿ ಗಳಿಂದ ನಿನ್ನ ಕಗ್ಗೊಲೆ
ಒಮ್ಮೆ ನೀನು ಮುನಿದರೆ, ಕ್ಲಿಷ್ಟಕರ ಈ ಜೀವನ
ಪರಿಸರದ ರಕ್ಷಣೆಗಾಗಿ ಅಗತ್ಯವಿದೆ ವನಮಹೋತ್ಸವ ಗಳ ಸಮ್ಮೇಳನ

ಗಿಡ- ನೆಡಿ, ಗಿಡ-ನೆಡಿ ಉತ್ತಮ ಆರೋಗ್ಯ ಕ್ಕಾಗಿ ಗಿಡ-ನೆಡಿ
ಅವಶ್ಯಕತೆ ಯಿದೆ 'ಪರಿಸರ ಮಾಲಿನ್ಯ' ಕುರಿತಾದ ಕೈಪಿಡಿ
ಉಳಿಸಿ-ಬೆಳೆಸಿ, ಅರಿಯಿರಿ ಪರಿಸರದ ಪ್ರಾಮುಖ್ಯತೆ
ವಾಹನ ಬಳಕೆಗೆ ಹಾಕಿ ಕಡಿವಾಣ, ನೀಡಿರಿ ಪರಿಶುದ್ಧ ಗಾಳಿಗೆ ಆದ್ಯತೆ

ಸರಿಯಾಗಿದೆ, ಆ ಭಗವಂತನ ಲೆಕ್ಕಾಚಾರ
ಜಾಗೃತಿಯಿಂದ ಸಲುಹಿದರೆ ಸ್ನೇಹಜೀವಿ ನಮ್ಮ ಪರಿಸರ
'ಆರೋಗ್ಯವೇ ಭಾಗ್ಯ' ಎಂಬ ನಾಣ್ಣುಡಿಯನ್ನು ಅರಿಯೋಣ
'ಜೀವನ'ವೆಂಬ ಚದುರಂಗದಾಟದಲ್ಲಿ ನಿರೋಗಿಗಳಾಗಿ ಬದುಕೋಣ

**- ಡಾ|| ದೀಪಶ್ರೀ ಪ್ರಮೋದ್ ಗುಜ್ಜರ್,** ದಾವಣಗೆರೆ

# ವಿಶ್ವ ಪರಿಸರ ದಿನಾಚರಣೆ

## ರಕ್ಷಿಸೋಣ ಪ್ರಕೃತಿ

ಪ್ರಕೃತಿ ನಿಯಮ ಪಾಲಿಸಲು ಇರುವುದು ಸುಕೃತಿ
ವಿಕೃತಗೊಳಿಸ ಹೊರಟರೆ ಕಡೆಯಿಲ್ಲದ ಭೀತಿ

ಹಿತಮಿತದಿ ಬಳಸಬೇಕು ಪ್ರಕೃತಿಯನ್ನು
ಸತತ ಪೋಷಿಸಿ ರಕ್ಷಿಸಿದರೆ ಒಳಿತು ಇನ್ನು
ಅತ್ತಿತ್ತ ಬಿಸಾಡದೆ ವಿಷ ಮಾಡೊ ಕಸವನು
ನಿತ್ಯ ಪಾಲಿಸಬೇಕು ಸ್ವಚ್ಛತೆಯನ್ನು

ಕೆಡವದೆ ಗಿಡಮರಗಳ ಹಸಿರು ಬೆಳೆಸುತ
ಬಿಡದೆ ನೆಟ್ಟ ಸಸಿಗಳಿಗೆ ನೀರೆರೆಯುತ
ದೊಡ್ಡ ಬೆಟ್ಟ ಗುಡ್ಡಗಳನು ಕಡಿಯದೆ ಬಿಡುತ
ಅಡ್ಡನಿಂತು ಕುಡಿಯುವವರ ಶಿಕ್ಷಿಸುತ್ತ

ಶಿಕ್ಷಿಸಿದರೆ ಪ್ರಕೃತಿ ನಾವು ಉಳಿಯುವುದುಂಟೆ
ಭಕ್ಷಿಸಿದರೆ ಭೂತಾಯಿ ಬಿರಿದು ಉಳಿಸುವರುಂಟೆ
ರಕ್ಷಣೆಯಿಲ್ಲದ ರೋಗದಬ್ಬರ ಸಾಲದಾಯಿತೆ
ರಕ್ಷಿಸಿ ಪ್ರಕೃತಿಯ ಉಳಿಯಲು ಬಾರದಾಯಿತೆ

ಗಾಳಿ, ನೀರು ಸ್ವಚ್ಛವಾಗಿರೆ ಆರೋಗ್ಯ ಭಾಗ್ಯ
ಬಾಳಿ ಬದುಕೊ ಜೀವಿಗಳಿಗೆ ಸೌಭಾಗ್ಯ
ನಳನಳಿಸುವ ಪ್ರಕೃತಿ ಕೃಪೆಲಿ ಬಾಳಿ ಬದುಕುವ
ಸರಳ ನಿಯಮ ಪಾಲಿಸುತ ರಕ್ಷಣೆ ಮಾಡುವ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

## ಪರೀಕ್ಷೆಗಳು...

ನಿಂತು ಹೋಗಿವೆ ಜ್ಞಾನದ ಪರೀಕ್ಷೆಗಳು
ಎಲ್ಲಿ ನೋಡಿದರೂ ಬರಿ ಕೋವಿಡ್ ಪರೀಕ್ಷೆಗಳು
ಯಾರದೋ ತಪ್ಪಿಗೆ ಇನ್ನಾರಿಗೋ ಶಿಕ್ಷೆಗಳು
ಕರಗಿ ಹೋಗಿವೆ ಎಷ್ಟೋ ಕನಸುಗಳು

ನಿಂತು ಹೋದರೆ ಹೀಗೆಯೇ ಜ್ಞಾನ
ಜಗವೆಲ್ಲ ಆವರಿಸುವುದು ಅಜ್ಞಾನ
ಯಾರು ಆಲಿಸುವರು ಮಕ್ಕಳ ಆರ್ತನಾದವನ್ನ
ಬಲಪಡಿಸಬೇಕಿದೆ ನಮ್ಮ ಜ್ಞಾನ ತಂತ್ರಜ್ಞಾನವನ್ನ

ಮಕ್ಕಳ ಜ್ಞಾನಕ್ಕೆ ಬಿದ್ದಿದೆ ಬೇಡಿ, ಅವರ ಜೀವನಕ್ಕೆ
ಬರೆಯುವುದು ಹೇಗೆ ಮುನ್ನುಡಿ ಹುಡುಕಿದರೂ
ಸಿಗುತ್ತಿಲ್ಲ ಪರಿಹಾರಕ್ಕೆ ಕೈಪಿಡಿ ನಮ್ಮನ್ನೇ ನಾವೇ
ಅವಲೋಕಿಸಿಕೊಳ್ಳಬೇಕಿದೆ ಹಿಡಿದು ಕೈಗನ್ನಡಿ...

**- ಬಸವರಾಜ್ ಕರುವಿನ**

## ಹಸಿರ ಸಿರಿ - ಉಸಿರ ವರ

ನನ್ನಂತರಂಗದಲ್ಲಿ
ಹುದುಗಿಹವು ನೋವುಗಳು
ಇದನಾರ ಬಳಿ ಹೇಳಲಿ??
ಬರುತಿರುವ ವರುಷದಲಿ, ಆತಂಕದ ಸುಳಿ ಇರಲು
ನನ್ನುಸಿರ ಹಸಿರ ಸಿರಿ ಬಡವಾಯಿತೇ?

ಕಾಡುಮೇಡುಗಳಲ್ಲಿ
ನೂರಾರು ಪ್ರಾಣಿಗಳಿರಲು
ಎಷ್ಟೊಂದು ಸ್ವಚ್ಛಂದ ಬದುಕಲದುವು..
ಆನೆ ಸಿಂಹಗಳೆಲ್ಲ ಕೂಡಿ ಹಾಡಿ ನಲಿದು
ವಿಶ್ವದೊಳು ತುಂಬಿತ್ತು,
ವನಸಿರಿಯ ಚೆಲುವು.

ಹೀಗಿದ್ದ ನನಗೆ ಈಗ್ಯಾಕೆ ಈ ಶಿಕ್ಷೆ ಮನುಜ ನೀ
ಮಾಡಿದ್ದು ಎಷ್ಟು ಸರಿ ?
ಕಾಡನ್ನು ಕಡಿದಾಯ್ತು ,ನಾಡನ್ನು ಕಟ್ಟಾಯ್ತು
ನಗರೀಕರಣದಿ ಕೆಡಿಸಿದ್ದೆ ನನ್ನ ಈ ಪರಿ!

ನಾನಿಲ್ಲದಿರೆ ನೀನೆಂತು ಬಾಳುವೆ ಹಸಿರ ಸಿರಿಗೆ
ಕೊಡಲಿಯೇಟು ಕೊಟ್ಟು ಹೇಗೆ ನಗುವೆ?
ನನ್ನ ನಾ ಉಳಿಸಿಕೊಳುವೆ
ನೀ ತೋಡಿದ ಹಳ್ಳದಿ ನೀನೇ ಬೀಳುತ್ತಿರುವೆ.

ಕಾಣದ ಕ್ರಿಮಿ ಗೆದ್ದು ಜಗವ, ವಾಹನಗಳ ಸದ್ದಡಗಿಸಿ,
ಲಾಕ್ ಡೌನ್ ನ ಬಂಧಿಯಾಗಿ
ಸ್ವಚ್ಛ ಮಾಡುತ್ತಿವೆ ನನ್ನ ಒಡಲಾಳವ,
ನುಚ್ಚುನೂರಾಗಿಸಿದೆ ವಿಷಕಾರುವ ಕಾರ್ಖಾನೆಗಳ
ನೂರು ಕನಸುಗಳ.

ಹಸಿರನುಳಿಸಿ, ನನ್ನ ಬೆಳೆಸಿ,
ಬನ್ನಿ ನನ್ನ ಬಳಿಗೆ ಪ್ರೀತಿ ಬಯಸಿ ,
ಮಳೆ ಕೊಡುವೆನು, ಇಳೆ ಬೆಳಗುವೆನು
ಜತನವಿರಿಸಿ ನನ್ನ ಹರಸಿ.

ಹೇ ಮನುಜ ಕಾಡು ಬೆಳೆಸು ನಾಡು ಉಳಿಸು,
ಜೊತೆಗೆ ನಿನ್ನ ನೀನು ಉಳಿಸು, ಪ್ರಕೃತಿಯ
ನಿಯಮವಿದು ತಲೆಬಾಗು ಎಂದಿಗೂ.
ಅರಿತು ನಡೆದರೆ ನೀನು
ಗೆದ್ದಂತೆ ಜಗವ,
ಪಡೆವೆ ನಿರಾತಂಕದಿ ಉಸಿರಾಡುವ ವರವ..!

**- ಮಂಜುಳಾ ಪ್ರಸಾದ್,**
ಸಹಶಿಕ್ಷಕಿ, ಕೆಪಿಎಸ್ ತ್ಯಾವಣಿಗೆ, ಚನ್ನಗಿರಿ ತಾಲ್ಲೂಕು

## ಲಸಿಕೆ ಜಾಗೃತಿಗೆ ಪುನೀತ್ ರಾಯಭಾರಿ

**(1ನೇ ಪುಟದಿಂದ)** ಅಭಿಯಾನ ಆರಂಭಿಸಿದ್ದರೂ ಲಸಿಕೆ ತೆಗೆದುಕೊಳ್ಳಲು ಬಹಳಷ್ಟು ಮಂದಿ ಹಿಂಜರಿದಿದ್ದು, ಅಂತಹವರನ್ನು ಪ್ರೇರೇಪಿಸುವ ಸಲುವಾಗಿ ಜಾಹೀರಾತು ಮೂಲಕ ಜಾಗೃತಿ ಮೂಡಿಸಲು ಮುಂದಾಗಿದ್ದು, ಕನ್ನಡದ ರಾಯಭಾರಿಯಾಗಿ ಪುನೀತ್ ರಾಜಕುಮಾರ್ ಆಯ್ಕೆಯಾಗಿದ್ದಾರೆ.

ಪುನೀತ್ ರಾಜಕುಮಾರ್ ಈಗಾಗಲೇ ಕೊರೊನಾ ಲಸಿಕೆ ಪಡೆದಿರುವುದಲ್ಲದೆ, ಕೊರೊನಾ ದೇಣಿಗೆ ಯಾಗಿ 50 ಲಕ್ಷ ರೂಪಾಯಿ ನೀಡಿರುವುದಲ್ಲದೆ ಕೊರೊನಾದಿಂದ ಸಂಕಷ್ಟಕ್ಕೆ ಸಿಲುಕಿರುವ ವರಿಗೆ ನೆರವು ನೀಡಿದ್ದಾರೆ, ಪುನೀತ್ ರಾಜ್ಯ ಸರ್ಕಾರದ ಹಲವು ಯೋಜನೆಗಳ ರಾಯಭಾರಿ ಹಾಗೂ ಖಾಸಗಿ ಕಂಪನಿಗಳ ಜಾಹೀ ರಾತುಗಳಿಗೆ ಬ್ರಾಂಡ್ ಅಂಬಾಸಿಡರ್ ಆಗಿದ್ದು, ಈಗ ಕೊರೊನಾ ಲಸಿಕೆ ಜಾಹೀರಾತಿಗೆ ರಾಯಭಾರಿ ಯಾಗುವ ಮೂಲಕ ಲಸಿಕೆ ಅಭಿಯಾನಕ್ಕೆ ಕೈ ಜೋಡಿಸಿದ್ದಾರೆ.

## 529 ಪಾಸಿಟಿವ್

**(1ನೇ ಪುಟದಿಂದ)** 60 ವರ್ಷದ ಮಹಿಳೆ, ಕೂಡ್ಲಿಗಿ ತಾಲ್ಲೂಕು ಹಿರೇಕುಂಬಳಗುಂಟೆಯ 70 ವರ್ಷದ ಪುರುಷ ಕೋವಿಡ್ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

ಜಿಲ್ಲೆಯಲ್ಲಿ 4138 ಸಕ್ರಿಯ ಪ್ರಕರಣಗಳಿವೆ. ಇಲ್ಲಿಯವರೆಗೆ 385 ಜನರು ಮೃತಪಟ್ಟಿದ್ದಾರೆ.

**5 ಬ್ಲಾ ಫಂಗಸ್ ಪ್ರಕರಣ:** ಜಿಲ್ಲೆಯಲ್ಲಿ ಶನಿವಾರ ಐದು ಬ್ಲಾಕ್ ಫಂಗಸ್ ಪ್ರಕರಣಗಳು ವರದಿಯಾಗಿದ್ದು, ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆಯಲ್ಲಿ ನಾಲ್ವರು ಹಾಗೂ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಒಬ್ಬರು ಚಿಕಿತ್ಸೆ ಪಡೆಯುತ್ತಿದ್ದಾರೆ. ಈವರಗೆ 48 ಜನರಲ್ಲಿ ಬ್ಲಾಕ್ ಫಂಗಸ್ ಕಾಯಿಲೆ ಕಾಣಿಸಿಕೊಂಡಿತ್ತು.

# ರೈತ-ಕಾರ್ಮಿಕ ಸಂಘಟನೆ ಪ್ರತಿಭಟನೆ ನೂತನ ಕೃಷಿ ಕಾಯಿದೆಗಳಿಗೆ ಆಕ್ರೋಶ



ದಾವಣಗೆರೆ, ಜೂ.5- ನೂತನ ಕೃಷಿ ಕಾಯಿದೆಗಳ ವಿರುದ್ಧ ನಗರದಲ್ಲಿಂದು ರೈತ ಹಾಗೂ ಕಾರ್ಮಿಕ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತ ಪಡಿಸಿದವು. ಕೃಷಿ ಹಾಗೂ ಕಾರ್ಮಿಕರಿಗೆ ಮಾರಕ ವಾಗಿರುವ ಈ ಕಾಯ್ದೆಗಳ ಹಿಂಪಡೆಗೆ ಆಗ್ರಹಿಸಿದವು.

**ಆರ್‌ಕೆಎಸ್ ಪ್ರತಿಭಟನೆ:** ರೈತ-ಕೃಷಿ ಕಾರ್ಮಿಕರ ಸಂಘಟನೆ (ಆರ್‌ಕೆಎಸ್) ವತಿಯಿಂದ ಕಾರ್ಪೊರೇಟ್ 'ಕಂಪನಿಗಳನ್ನು ಓಡಿಸಿ, ಕೃಷಿಯನ್ನು ಉಳಿಸಿ' ಎಂಬ ಮರುಪ್ರತಿಜ್ಞೆಯೊಂದಿಗೆ ಸಂಪೂರ್ಣ ಕ್ರಾಂತಿ ದಿವಸದ ಭಾಗವಾಗಿ ನೂತನ ಕೃಷಿ ಕಾಯಿದೆಗಳನ್ನು ವಿರೋಧಿಸಿ ಪ್ರತಿಭಟಿಸಲಾಯಿತು.

ಕಳೆದ ವರ್ಷ 2021ರ ಜೂನ್ 5ರಂದು ಬಿಜೆಪಿಯ ಮೋದಿ ಸರ್ಕಾರವು ಕೃಷಿಯ, ರೈತರ ಹಾಗೂ ದೇಶದ ಜನಸಾಮಾನ್ಯರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಹಠಾತ್ತಾಗಿ ಮೂರು ಸುಗ್ರೀವಾಜ್ಞೆಗಳನ್ನು ತಂದಿತು. ಈ ಸುಗ್ರೀವಾಜ್ಞೆಗಳಿಗೆ ನಂತರದಲ್ಲಿ ಮೂರು ಕರಾಳ ಕೃಷಿ ಕಾಯ್ದೆಗಳ ರೂಪ ಕೊಡಲಾಯಿತು. ಈ ಕರಾಳ ಕಾಯ್ದೆಗಳನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ರಾಜ್ಯಾಧ್ಯಕ್ಷ ಡಾ. ಟಿ.ಎಸ್. ಸುನಿತ್ ಕುಮಾರ್, ರಾಜ್ಯ ಉಪಾಧ್ಯಕ್ಷ ಎಂ. ಶಶಿಧರ್, ಜಿಲ್ಲಾ ಸಂಚಾಲಕ ಮಧು ತೊಗಲೇರಿ, ತಿಪ್ಪೇಸ್ವಾಮಿ, ಪುಷ್ಪ ಇತರರು ಭಾಗವಹಿಸಿದ್ದರು.

**ಕೃಷಿ ಕಾಯ್ದೆಗಳ ಪ್ರತಿ ದಹಿಸಿದ ರೈತ ಸಂಘಟನೆ:** ಕೃಷಿಕರು ಹಾಗೂ ಕಾರ್ಮಿಕರಿಗೆ ಮಾರಕವಾಗಿರುವ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಾಮೂಹಿಕ ನಾಯಕತ್ವದ ವತಿಯಿಂದ ನಗರದ ಸಂಸದರ ಸಂಪರ್ಕ ಕಚೇರಿ ಎದುರು ಪಿ.ಬಿ. ರಸ್ತೆಯಲ್ಲಿ ಕೃಷಿ ಕಾಯ್ದೆಗಳ ಪ್ರತಿಗಳ ದಹಿಸಲಾಯಿತು.

ಸರ್ಕಾರ ಜಾರಿಗೆ ತಂದಿರುವ ನೂತನ ಕೃಷಿ, ವಿದ್ಯುತ್, ಎಪಿಎಂಸಿ ಕಾಯ್ದೆಗಳು ರೈತ ಹಾಗೂ ಕಾರ್ಮಿಕರನ್ನು ಸಂಕಷ್ಟಕ್ಕೆ ಸಿಲುಕಿಸಲಿವೆ. ಕಾರ್ಪೊರೇಟ್ ಕಂಪನಿಗಳ ಪರವಾದ ಈ ಕಾಯ್ದೆಗಳನ್ನು ಹಿಂಪಡೆಯಬೇಕು. ಇಂದಿನ ದಿನಮಾನಗಳಲ್ಲಿ ರೈತರು ಬೆಳೆದ ಬೆಳೆಗಳಿಗೆ ಬೆಲೆ ಇಲ್ಲದಂತಾಗಿದೆ. ಅನ್ನದಾತನ ಸಂಕಷ್ಟಕ್ಕೆ ಕೇಳದ ಸ್ಥಿತಿಯಲ್ಲಿ ನಮ್ಮನ್ನು ಆಳುವ ಸರ್ಕಾರಗಳು ಇಲ್ಲದಂತಾಗಿದೆ. ರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ. ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಮನ ಹರಿಸಬೇಕು ಎಂದು ಒತ್ತಾಯಿಸಲಾಯಿತು.

### ಆರ್‌ಕೆಎಸ್ ನಿಂದ ಕೃಷಿ ಕಾಯಿದೆಗಳ ಪ್ರತಿಗಳ ದಹನ

ಈ ಸಂದರ್ಭದಲ್ಲಿ ಸಂಘಟನೆ ಜಿಲ್ಲಾಧ್ಯಕ್ಷ ಹೊನ್ನೂರು ರಾಜಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೋಶಾಲೆ ಬಸವರಾಜ್, ಜಿಲ್ಲಾ ಸಂಚಾಲಕ ದೊಡ್ಡಘಟ್ಟ ರಾಜು, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ತೊಗಲೇರಿ ಮಂಜು, ತಾಲ್ಲೂಕು ಉಪಾಧ್ಯಕ್ಷ ಬಣಕಾರ್ ಮಲ್ಲಿಕಾರ್ಜುನಪ್ಪ, ಜಿಲ್ಲಾ ರೈತ ಮುಖಂಡ ಹೊನ್ನೂರು ಮಂಜುನಾಥ, ಪುಟಗನಾಳ್ ನಾಗಣ್ಣ, ದೊಡ್ಡಘಟ್ಟ ಮಂಜು ಸೇರಿದಂತೆ ಇತರರು ಭಾಗವಹಿಸಿದ್ದರು.

## ಭವಿಷ್ಯ ನಿಧಿ: 2ನೇ ಬಾರಿ ಮುಂಗಡಕ್ಕೆ ಅವಕಾಶ

ದಾವಣಗೆರೆ, ಜೂ.5- ಪ್ರಸ್ತುತ ಕೋವಿಡ್ 2ನೇ ಅಲೆಯ ಪರಿಸ್ಥಿತಿಯಲ್ಲಿ ಭವಿಷ್ಯ ನಿಧಿ ಸದಸ್ಯರಿಗೆ 2ನೇ ಬಾರಿ ಮುಂಗಡ ಹಣವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಭವಿಷ್ಯ ನಿಧಿ ಸಂಸ್ಥೆಯು ಜೂ.1 ರಿಂದ ಇಸಿಆರ್ ಸಲ್ಲಿಸಲು ಸದಸ್ಯರ ಆಧಾರ್ ಅನ್ನು ಕಡ್ಡಾಯವಾಗಿ ಯುಎಎನ್ ಸಂಖ್ಯೆಯೊಂದಿಗೆ ಲಿಂಕ್ ಮಾಡಲು ಆದೇಶಿಸಲಾಗಿದ್ದು, ಎಲ್ಲಾ ಉದ್ಯೋಗದಾತರು ಜೂ.1 ರಿಂದ ಇಸಿಆರ್ ಫೈಲ್ ಮಾಡಲು ಭವಿಷ್ಯ ನಿಧಿ ಸದಸ್ಯರ ಆಧಾರ್ ಅನ್ನು ಯುಎಎನ್ ಸಂಖ್ಯೆಯೊಂದಿಗೆ ಜೋಡಿಸುವುದು ಕಡ್ಡಾಯವಾಗಿರುತ್ತದೆ ಎಂದು ಭವಿಷ್ಯ ನಿಧಿ ಆಯುಕ್ತರು ತಿಳಿಸಿದ್ದಾರೆ.

# ಉಳ್ಳವರು ಊಳುವವರನ್ನು ಹೂಳುವ ಪದ್ಧತಿಯೇ ನೂತನ ಕೃಷಿ ಕಾಯಿದೆ



ದಾವಣಗೆರೆ, ಜೂ.5- ಕೃಷಿಕರು ಹಾಗೂ ಕಾರ್ಮಿಕರಿಗೆ ಮಾರಕವಾಗಿರುವ 5 ಕೃಷಿ ಕಾಯಿದೆಗಳನ್ನು ಕೈ ಬಿಡುವಂತೆ ಆಗ್ರಹಿಸಿ ಅಖಿಲ ಭಾರತ ಕಿಸಾನ್ ಹೋರಾಟ ಸಮಿತಿ, ಸಂಯುಕ್ತ ಹೋರಾಟ ಸಮಿತಿಯಿಂದ ನಗರದಲ್ಲಿಂದು ಪ್ರತಿಭಟನೆ ನಡೆಸಲಾಯಿತು.

ನಗರದ ಹೊರವಲಯ ಆವರಗೆರೆ ಗ್ರಾಮದಲ್ಲಿನ ಹುತಾತ್ಮರಾದ ಸುರೇಶಪ್ಪ, ಶೇಖರಪ್ಪ, ಪಂಪಾಪತಿ ಸಮಾಧಿ ಬಳಿ ಕೃಷಿ ಕಾಯಿದೆಗಳ ಪ್ರತಿಗಳನ್ನು ದಹನ ಮಾಡುವ ಮೂಲಕ ಆಕ್ರೋಶ ವ್ಯಕ್ತಪಡಿಸಲಾಯಿತು.

ಇದೇ ವೇಳೆ ಮಾತನಾಡಿದ ಅಖಿಲ ಭಾರತ ಕಿಸಾನ್ ಸಭಾದ ಜಿಲ್ಲಾಧ್ಯಕ್ಷ ಆವರಗೆರೆ ಉಮೇಶ್, ಕೃಷಿ ಕಾಯಿದೆಗಳನ್ನು ವಿರೋಧಿಸಿ ಜಿಲ್ಲೆಯ ಶಾಸಕರು, ಸಂಸದರು, ಜಿಲ್ಲಾಡಳಿತ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಬೇಕಿತ್ತು. ಆದರೆ ಕೊರೊನಾ ಹಿನ್ನೆಲೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದೇವೆ. ಇದು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ಕರೆಗಂಟೆಯಾಗಿದ್ದು, ಈ ಕೂಡಲೇ ಕೃಷಿ ಕಾಯಿದೆಗಳನ್ನು ಹಿಂಪಡೆಯಬೇಕೆಂದು ಆಗ್ರಹಿಸಿದರು.

ಸಬ್ಕಾ ಸಾಥ್ ಸಬ್ಕಾ ವಿಕಾಸ್ ಎನ್ನುವ ಮಾತಿನ ಮೇಲೆ ಕೇಂದ್ರದಲ್ಲಿ ಆಡಳಿತಕ್ಕೆ ಬಂದ ಮೋದಿ ಸರ್ಕಾರ ರಾಷ್ಟ್ರೀಕೃತ ಕಂಪನಿಗಳನ್ನು ಖಾಸಗೀಕರಣ ಮಾಡಿದ್ದಲ್ಲದೆ, ಈ ದೇಶದ ದುಡಿಯುವ ವರ್ಗದ ಬೆನ್ನ ಮೇಲೆ ಖಾರ ಅರೆಯುವ ಕೆಲಸ ಮಾಡಿದೆ. ಅಲ್ಲದೆ ರೈತರು ಮತ್ತು ಕೃಷಿ ಕಾರ್ಮಿಕರನ್ನು ಹಂತ ಹಂತವಾಗಿ ತುಳಿಯುವ ಹುನ್ನಾರವನ್ನು ಈ ಕೃಷಿ ಕಾಯಿದೆ ಒಳಗೊಂಡಿದೆ. ಇವು ನಿಜಕ್ಕೂ ರೈತರು ಮತ್ತು ಕೃಷಿ ಕಾರ್ಮಿಕರಿಗೆ ಮಾರಕ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಈ ಕೃಷಿ ಕಾಯಿದೆಗಳು ಉಳ್ಳವರು ಸೇರಿ ಊಳುವವರನ್ನು ಹೂಳುವ ಪರಿಸ್ಥಿತಿ ಬಂದಿದೆ. ಯಾವುದೇ ಹಂತದಲ್ಲೂ ಕೃಷಿ ಕಾರ್ಮಿಕ ಅಭಿವೃದ್ಧಿಯಲ್ಲಿ ಸಾಗದೆ ಹಂತ ಹಂತವಾಗಿ ಮೂಲ ಗುಂಪುಗಳ ಮೂಲೆಗುಂಪಾಗಲಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ರೈತ ಮುಖಂಡ ಹೊನ್ನೂರು ಮುನಿಯಪ್ಪ ಮಾತನಾಡಿ ಕೃಷಿ ಕಾಯ್ದೆ, ಬೀಜ ಕಾಯ್ದೆ, ಅಗತ್ಯ ವಸ್ತುಗಳ ಕಾಯ್ದೆ, ವಿದ್ಯುತ್ ಕಾಯ್ದೆ, ನೀರು ಕಾಯ್ದೆ ಸೇರಿದಂತೆ ರೈತರಿಗೆ, ಕಾರ್ಮಿಕರಿಗೆ ಅನುಕೂಲ ವಾಗುವ ಎಲ್ಲ ಕಾಯ್ದೆಗಳನ್ನು ತಿದ್ದುಪಡಿ ಮಾಡುವ ಮೂಲಕ ಕೇಂದ್ರ ಸರ್ಕಾರ ಈ ವರ್ಗಕ್ಕೆ ಮೋಸ ಮಾಡುತ್ತಿದೆ. ಬಂಡವಾಳ ಶಾಹಿಗಳ ಪರವಾಗಿ ಈ ಕಾಯ್ದೆಗಳನ್ನು ಜಾರಿಗೆ ತರುತ್ತಿದೆ ಎಂದು ಆಕ್ಷೇಪಿಸಿದರು.

### ಎಐಕೆಎಸ್ ನಿಂದ ಕೃಷಿ ಕಾಯಿದೆಗಳ ಪ್ರತಿಗಳ ದಹನ

ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಉತ್ತಮ ಬೆಲೆಗೆ ಕೊಡುವುದಾಗಿ ಹೇಳಿದ್ದ ಕೇಂದ್ರ ಸರ್ಕಾರ ಇದೀಗ ಮೈ ಮರೆತು ಕೂತಿದೆ. ವರ್ತಕರು ರೈತರ ಬೆಳೆಗಳಿಗೆ ಬಾಯಿಗೆ ಬಂದಂತೆ ಕೇಳುತ್ತಿದ್ದಾರೆ. ಎಪಿಎಂಸಿಯಲ್ಲಿ ಕೊಳ್ಳುತ್ತಿದ್ದ ಜನರೇ ಇಲ್ಲದಂತಾಗಿದೆ. ಕೇವಲ ಆಶ್ವಾಸನೆಗಳ ಮೇಲೆ ಕೇಂದ್ರ ಸರ್ಕಾರ ನಡೆಯುತ್ತಿದ್ದು, ರೈತರು ಮತ್ತು ಕಾರ್ಮಿಕರ ಪರವಾದ ಕಾನೂನುಗಳನ್ನು ತರುವಲ್ಲಿ ಕೇಂದ್ರ ಸರ್ಕಾರ ಸತ್ತು ಹೋಗಿದೆ. ಕೊರೊನಾ ಸೋಂಕು ಬಂದು ಲಸಿಕೆ ಸಿಗದಂತಾಗಿ ಆಡಳಿತ ಮತ್ತು ವಿಪಕ್ಷಗಳು ಪರಸ್ಪರ ಕೆಸರೆರಚಾಟ ಮಾಡುತ್ತಿವೆ ಎಂದು ಕಿಡಿಕಾರಿದರು.

ಸುಗ್ಗಿಯಿಂದ ಮತ್ತೊಂದು ಸುಗ್ಗಿ ಬರುವವರೆಗೂ ರೈತರು ಬೆಳೆದ ಬೆಳೆಗೆ ಒಂದೇ ಬೆಲೆ ಇರುವಂತೆ ಇಲ್ಲವೇ ವೈಜ್ಞಾನಿಕ ಬೆಲೆ ನಿಗದಿ ಮಾಡುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸತೀಶ್ ಅರವಿಂದ್, ಆವರಗೆರೆ ಚಂದ್ರು, ಪಿ.ಕೆ. ಲಿಂಗರಾಜ್, ಐರಣಿ ಚಂದ್ರು, ಬಾನಪ್ಪ, ಬಿ. ದುಗ್ಗಪ್ಪ, ರಂಗನಾಥ್, ತಿಪ್ಪೇಸ್ವಾಮಿ, ಪರಮೇಶ್ವರಪ್ಪ ಇತರರು ಇದ್ದರು.

## 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡಲು ಒತ್ತಾಯ

ದಾವಣಗೆರೆ, ಜೂ.5- 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುತ್ತೇವೆ ಎಂದು ಹೇಳಿದ ರಾಜ್ಯ ಸರ್ಕಾರ ಕೇವಲ ಒಂದು ದಿನ ಮಾತ್ರ ಲಸಿಕೆ ನೀಡಿ ಸುಮ್ಮನಾಗಿದೆ. 18 ವರ್ಷ ಮೇಲ್ಪಟ್ಟವರು ಲಸಿಕೆ ಪಡೆಯಲು ನೋಂದಣಿ ಮಾಡಿ ಲಸಿಕೆ ಪಡೆಯಲು ಸಮಯವನ್ನು ಪಡೆದರೂ, ಏಕಾಏಕಿ ಅವರಿಗೆಲ್ಲಾ ನಿಮಗೆ ಲಸಿಕೆ ದೊರೆಯುವುದಿಲ್ಲ, ಮೊಬೈಲ್ ಸಂದೇಶ ಬಂದಿದೆ ಎಂದು ಅನೇಕ ಯುವಕರು ಈಗಾಗಲೇ ಪ್ರಾಣ ಕಳೆದುಕೊಂಡಿರುತ್ತಾರೆ. ಇದರ ಜೊತೆ ಸರ್ಕಾರ ಹಾಗೂ ಅರೆ ಸರ್ಕಾರಿ ಸೇವೆಯಲ್ಲಿ ಇರುವವರು, ವಾರಿಯರ್ಸ್‌ಗಳಿಗೂ ಸಹ ಲಸಿಕೆ ದೊರೆತಿಲ್ಲ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿ ರದ್ದಾಗಿದ್ದವರಿಗೆ ತ್ವರಿತವಾಗಿ ದಾವಣಗೆರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆದ್ಯತೆ ಮೇರೆಗೆ 18 ವರ್ಷದಿಂದ 44 ವರ್ಷದವರಿಗೆ ಲಸಿಕೆ ನೀಡಬೇಕೆಂದು ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಮನವಿ ಮಾಡಿದ್ದಾರೆ.

## ವಿಕಲಚೇತನರಿಗೆ ಲಸಿಕಾ ಅಭಿಯಾನ

ದಾವಣಗೆರೆ, ಜೂ.5- ಜಿಲ್ಲೆಯಲ್ಲಿರುವ ಮಾನಸಿಕ ಅಸ್ವಸ್ಥರು ಮತ್ತು ವಿಕಲಚೇತನರು ಲಸಿಕೆ ಪಡೆಯುವ ಬಗ್ಗೆ ಅರಿವು ಮೂಡಿಸುವ ಅಭಿಯಾನವನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ನಗರದಲ್ಲಿ ನಡೆಸಲಾಯಿತು.

ಜಿಲ್ಲೆಯಲ್ಲಿ ಒಟ್ಟು 18,047 ನೋಂದಾಯಿತ ಅಂಗವಿಕಲರಿದ್ದು, ಉಚ್ಛ ನ್ಯಾಯಾಲಯದ ನಿರ್ದೇಶನದಂತೆ 18 ವರ್ಷ ಮೇಲ್ಪಟ್ಟ ಜಿಲ್ಲೆಯ ಎಲ್ಲಾ ಅಂಗವಿಕಲರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಬೇಕಾಗಿರುತ್ತದೆ. ಪ್ರಾಧಿಕಾರವು ವಿಕಲಚೇತನರ ಪಟ್ಟಿಯನ್ನು ಸಿದ್ಧಪಡಿಸಿ, ಅಂತಹ ವ್ಯಕ್ತಿಗಳಿಗೆ ಜಿಲ್ಲಾ ಕೇಂದ್ರವಷ್ಟೇ ಅಲ್ಲದೇ ಗ್ರಾಮೀಣ ಭಾಗದಲ್ಲಿಯೂ ಸಹ ಲಸಿಕೆ ಲಭ್ಯವಾಗುವಂತೆ ಕ್ರಮ ತೆಗೆದುಕೊಳ್ಳಲಾಗಿದೆ.

ಇದೇ ದಿನಾಂಕ 2 ರಿಂದ ವಿಶೇಷವಾಗಿ ಅಂಗವಿಕಲರಿಗೆ ಲಸಿಕೆ ನೀಡುವ ಅಭಿಯಾನ ಪ್ರಾರಂಭಿಸಿದ್ದು, ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷೆ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಬಿ. ಗೀತಾ ಮತ್ತು ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ತಿಳಿಸಿದ್ದಾರೆ.

## ಹೊನ್ನಾಳಿ : ಕೃಷಿ ಪ್ರಶಸ್ತಿಗೆ ಅರ್ಜಿ

ಹೊನ್ನಾಳಿ, ಜೂ.5- ಕೃಷಿ ಇಲಾಖೆಯು 'ಕೃಷಿ ಪಂಡಿತ ಪ್ರಶಸ್ತಿ', ಆತ್ಮ ಯೋಜನೆಯ ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟದ 'ಶ್ರೇಷ್ಠ ಕೃಷಿಕ ಪ್ರಶಸ್ತಿ' ಮತ್ತು ಜಿಲ್ಲಾ ಮಟ್ಟದ 'ಆಸಕ್ತ ರೈತ ಗುಂಪು ಪ್ರಶಸ್ತಿ' ಗೆ ರೈತರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಜಿಗಳನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸಲು ಜುಲೈ 20 ಕೊನೆ ದಿನವಾಗಿರುತ್ತದೆ. ಹೊನ್ನಾಳಿ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು/ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಲು ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

## ಕನ್ನಡ ಸುಂದರ ಭಾಷೆ ಎಂಬುದನ್ನು ಪ್ರಪಂಚಕ್ಕೆ ಗೂಗಲ್ಲೇ ತಿಳಿಸುವಂತಾಗಲಿ

**ಮಾನ್ಯರೇ,**

ತಿಳಿದೋ ತಿಳಿಯದೆಯೋ WHAT IS THE UGLIEST LANGUAGE IN INDIA ? ಎಂಬ ಪ್ರಶ್ನೆ ರಚಿಸಿ KANNADA ಎಂಬ ಉತ್ತರ ಸೇರ್ಪಡೆ ಮಾಡಿದ ತಪ್ಪಿಗೆ ಅದೇ ಗೂಗಲ್

WHAT IS THE BEAUTIFUL, MARVELOUS & ATTRACTIVE LANGUAGE IN THE WORLD ?

ಎಂಬ ಪ್ರಶ್ನೆ ರಚಿಸಿ ಕನ್ನಡ ಎಂಬುದನ್ನು ಉತ್ತರವಾಗಿ ಸೇರ್ಪಡೆ ಮಾಡಲು ಒತ್ತಾಯಿಸುವ ಮೂಲಕ ಕನ್ನಡಿಗರಾದ ನಾವು ಕನ್ನಡ ಭಾಷೆಯ ಪ್ರಾಚೀನತೆ, ಮೌಲ್ಯ, ಸೌಂದರ್ಯ, ಘನತೆ ಮತ್ತು ಮಹತ್ವವನ್ನು ಎತ್ತಿ ಹಿಡಿಯಲು ಹಾಗೂ ಇಡೀ ಪ್ರಪಂಚವೇ ಕನ್ನಡ ಭಾಷೆಯ ಸೊಗಡನ್ನು ಅರಿಯುವ ಕಡೆ ಮುಖ ಮಾಡುವಂತೆ ಇದನ್ನೇ ಒಂದು ಅವಕಾಶವನ್ನಾಗಿ ಬಳಸಿಕೊಂಡು ಆನ್ ಲೈನ್ ಮೂಲಕ ಸೌಮ್ಯ ಆಗ್ರಹಕ್ಕೆ ಮುಂದಾಗಬೇಕು.

**- ಗಂಗಾಧರ ಬಿ ಎಲ್ ನಿಟ್ಟೂರ್, ದಾವಣಗೆರೆ**

## ಅಮೆಜಾನ್ ನಿಷೇಧಿಸಬೇಕು

**ಮಾನ್ಯರೇ,**

ಒಳ ಉಡುಪುಗಳ ಮೇಲೆ ಕನ್ನಡ ಧ್ವಜದ ಬಣ್ಣ ಮತ್ತು ರಾಜ್ಯ ಲಾಂಛನವನ್ನು ಮುದ್ರಿಸಿ ತನ್ನ ಇ ಕಾಮರ್ಸ್ ವ್ಯವಹಾರದ ಜಾಹೀರಾತು ಪ್ರಕಟಿಸಿರುವ ಅಮೆಜಾನ್ ಸಂಸ್ಥೆಯನ್ನು ಕರ್ನಾಟಕದಲ್ಲಿ ನಿಷೇಧಿಸಬೇಕು.

ಕನ್ನಡಿಗರ ಭಾವನೆಗಳಿಗೆ ಧಕ್ಕೆ ತರುವ ಇಂತಹ ಪಿತೂರಿಗಳಿಂದ ಅಮೆಜಾನ್ ಸಂಸ್ಥೆಯ ಮಾನಸಿಕ ವಿಕೃತಿ ಅನಾವರಣಗೊಂಡಿದ್ದು, ಈ ಕೂಡಲೇ ಗೃಹ ಇಲಾಖೆ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ಭವಿಷ್ಯದಲ್ಲಿ ಈ ರೀತಿ ಆಗದಂತೆ ಎಚ್ಚರಿಸಬೇಕಾಗಿದೆ.

**- ಎಲ್.ಜಿ.ಮಧುಕುಮಾರ್, ಬಸವಾಪಟ್ಟಣ**

## 'ಸಿ' ಶ್ರೇಣಿಯ ದೇವಸ್ಥಾನದ ಅರ್ಚಕರು, ಸಿಬ್ಬಂದಿಗಳ ಸಂಕಷ್ಟಕ್ಕೆ ನೆರವು

# ತಾಲ್ಲೂಕು ಆಡಳಿತದಿಂದ ಆಹಾರ ಕಿಟ್ ವಿತರಣೆ



ದಾವಣಗೆರೆ, ಜೂ.5- ತಾಲ್ಲೂಕಿನ 'ಸಿ' ಶ್ರೇಣಿಯ ದೇವಸ್ಥಾನದ ಅರ್ಚಕರುಗಳಿಗೆ ಮತ್ತು ಅಲ್ಲಿನ ಸಿಬ್ಬಂದಿಗಳಿಗೆ ನಗರದ ತಾಲ್ಲೂಕು ಆಡಳಿತದಿಂದ ಆಹಾರದ ಕಿಟ್‌ಗಳನ್ನು ವಿತರಿಸಿ, ಸಂಕಷ್ಟಕ್ಕೆ ನೆರವಾಗಿದೆ.

ತಾಲ್ಲೂಕು ಕಚೇರಿಯಲ್ಲಿ ಇಂದು ತಹಸೀಲ್ದಾರ್ ಗಿರೀಶ್ ಅವರು ತಾಲ್ಲೂಕಿನ ಸಿ ಶ್ರೇಣಿಯ 65 ದೇವಸ್ಥಾನಗಳ ಸುಮಾರು 65 ಮಂದಿ ಅರ್ಚಕರು ಮತ್ತು 18 ಮಂದಿ ಕೆಲಸಗಾರರು ಸೇರಿ ಒಟ್ಟು 83 ಮಂದಿಗೆ ಕಿಟ್ ವಿತರಿಸಿದರು.

ಕೊರೊನಾ ಸೋಂಕು ನಿಯಂತ್ರಣ ದೃಷ್ಟಿಯಿಂದ ಲಾಕ್‌ಡೌನ್ ಜಾರಿ ಹಿನ್ನೆಲೆಯಲ್ಲಿ ದೇವಸ್ಥಾನಗಳಿಗೆ ಬರುವ ಭಕ್ತರ ಸಂಖ್ಯೆ ಕ್ಷೀಣಿಸಿದ ಪರಿಣಾಮ ಜೀವನೋಪಾಯಕ್ಕೆ ಸಂಕಷ್ಟವುಂಟಾಗಿದ್ದು, ಸರ್ಕಾರದಿಂದ ನೆರವು ನೀಡುವಂತೆ ತಾಲ್ಲೂಕು ವ್ಯಾಪ್ತಿಯ ದೇವಸ್ಥಾನಗಳ ಅರ್ಚಕರು ಜಿಲ್ಲಾ ಮತ್ತು ತಾಲ್ಲೂಕು ಆಡಳಿತದ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿದ್ದರು. ಮನವಿಗೆ ಸ್ಪಂದಿಸಿದ ಸರ್ಕಾರವು ಸಿ ಶ್ರೇಣಿಯ ದೇವಸ್ಥಾನಗಳ ಅರ್ಚಕರು ಮತ್ತು ಕೆಲಸಗಾರರಿಗೆ ಆಹಾರದ ಕಿಟ್ ನೀಡುವಂತೆ ಮೊನ್ನೆ ಆದೇಶಿಸಿತ್ತು. ಅಕ್ಕಿ, ಗೋಧಿ ಹಿಟ್ಟು, ಅವಲಕ್ಕಿ, ಅಡುಗೆ ಎಣ್ಣೆ, ಖಾರದ ಪುಡಿ, ಸಾಂಬಾರ್ ಪುಡಿ, ಕಾಫಿ ಪುಡಿ ಸೇರಿದಂತೆ ದಿನಬಳಕೆಯ ದಿನಸಿ ಸಾಮಗ್ರಿಗಳುಳ್ಳ ಆಹಾರದ ಕಿಟ್ ಗಳನ್ನು ಇಂದು ವಿತರಿಸಲಾಗಿದೆ ಎಂದು ತಹಸೀಲ್ದಾರ್ ಗಿರೀಶ್ ಮಾಹಿತಿ ನೀಡಿದರು.

ಸರ್ಕಾರದಿಂದ ಅರ್ಚಕರಿಗೆ 3 ಸಾವಿರ ಸಹಾಯ ಧನದ ವ್ಯವಸ್ಥೆ ಸಹ ಮಾಡಲಾಗಿದ್ದು, ತಾಲ್ಲೂಕಿನ ಅರ್ಚಕರುಗಳ ಬಳಿ ಬ್ಯಾಂಕ್ ಖಾತೆ ವಿವರ ಪಡೆದಿದ್ದು, 2-3 ದಿನಗಳಲ್ಲಿ ತಲಾ 3 ಸಾವಿರ ರೂ. ಅರ್ಚಕರುಗಳ ಖಾತೆಗೆ ಜಮೆಯಾಗಲಿದೆ ಎಂದು ತಿಳಿಸಿದರು.

## ಅಸಂಘಟಿತ ವಲಯಕ್ಕೆ ಸಹಾಯ ಧನ ನೀಡಿರುವುದು ಶ್ಲಾಘನೀಯ : ಎಸ್‌ವಿಆರ್



ಜಗಳೂರು, ಜೂ.5- ಅರ್ಚಕರಿಗೆ 3,000 ರೂ. ಸಹಾಯ ಧನ ನೀಡುವ ಸರ್ಕಾರದ ಘೋಷಣೆ ಶ್ಲಾಘನೀಯ. ಅರ್ಚಕರು ಇದರ ಸದುಯೋಗಪಡೆದುಕೊಳ್ಳಬೇಕು ಎಂದು ಶಾಸಕರು ಹಾಗೂ ಎಸ್ಟಿ ಅಭಿವೃದ್ಧಿ ನಿಗಮದ ಅಧ್ಯಕ್ಷಎಸ್.ವಿ.ರಾಮಚಂದ್ರಕರೆ ನೀಡಿದರು.

ಪಟ್ಟಣದ ತಾಲ್ಲೂಕು ಕಛೇರಿಯಲ್ಲಿ ಶನಿವಾರ ತಾಲ್ಲೂಕಿನ 55 ಅರ್ಚಕರಿಗೆ ಫುಡ್‌ಕಿಟ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ಲಾಕ್ ಡೌನ್ ನಿಂದ ದೇವಸ್ಥಾನಗಳಲ್ಲಿ ಸೇವೆ ಸಲ್ಲಿಸುವ ಅರ್ಚಕರ ಕುಟುಂಬದ ಜೀವನ ಸ್ಥಿತಿ ಕಷ್ಟಕರವಾಗಿದೆ. ಮುಖ್ಯ ಮಂತ್ರಿ ಯಡ್ಯೂರಪ್ಪನವರು 3000 ರೂ. ಸಹಾಯಧನ ಘೋಷಿಸಿದ್ದಾರೆ. ಅಸಂಘಟಿತ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವಂತಹ ಕುಟುಂಬಗಳನ್ನು ಪರಿಗಣಿಸಿ ನೆರವು ನೀಡಲಾಗಿದೆ. ಸರ್ಕಾರ ತಮ್ಮ ಖಾತೆಗಳಿಗೆ ನೇರವಾಗಿ ಹಣ ಹಾಕಲಿದ್ದು, ಸೇವಾಸಿಂಧು ಮೂಲಕ ಅರ್ಜಿ ಹಾಕಿ ಸೌಲಭ್ಯ ಪಡೆಯುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಭಾರ ತಹಶೀಲ್ದಾರ್ ಗಿರೀಶ್ ಬಾಬು, ಸಹಾಯಕ ನೋಡಲ್ ಅಧಿಕಾರಿ ಮಹೇಶ್, ಆರ್.ಐ. ಕುಬೇರನಾಯ್ಕ್, ಸೇರಿದಂತೆ ವಿವಿಧ ದೇವಸ್ಥಾನಗಳ ಅರ್ಚಕರು ಹಾಜರಿದ್ದರು.

## ಅನುದಾನರಹಿತ ಶಿಕ್ಷಕರಿಗೆ ಸಹಾಯಧನ: ಸರ್ಕಾರಕ್ಕೆ ಅಭಿನಂದನೆ

ದಾವಣಗೆರೆ, ಜೂ.5- ಕೊರೊನಾ ಲಾಕ್‌ಡೌನ್ ಸಂಕಷ್ಟದಲ್ಲಿರುವ ರಾಜ್ಯದ ಅನುದಾನ ರಹಿತ ಶಿಕ್ಷಕರಿಗೆ 5,000 ರೂ. ಸಹಾಯಧನವನ್ನು ಘೋಷಿಸಿರುವ ಸರ್ಕಾರಕ್ಕೆ ಜಿಲ್ಲಾ ಶಾಶ್ವತ ಅನುದಾನರಹಿತ ಶಾಲಾ ಆಡಳಿತ ಮಂಡಳಿಗಳ ಸಂಘವು ಅಭಿನಂದನೆ ಸಲ್ಲಿಸಿದೆ.



ಕೊನೆಗೂ ಶಿಕ್ಷಕರ ನೆರವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳಿಗೆ, ಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರನ್ನು ಸಂಘದ ಅಧ್ಯಕ್ಷ ತ್ಯಾವಣಿಗೆ ವೀರಭದ್ರಸ್ವಾಮಿ, ಕಂದನಕೋವಿ ಪ್ರಕಾಶ್, ಹೆಚ್.ಜಿ. ಪ್ರಕಾಶ್, ದಿನೇಶ್, ಮಂಜುನಾಥಸ್ವಾಮಿ, ನಾಗರಾಜಯ್ಯ, ವೀರೇಶ್ ಬಿರಾದಾರ್, ಶಿವಕುಮಾರ್, ಬಸವರಾಜಪ್ಪ, ಚೇತನ್ ಇನ್ನಿತರರು ಅಭಿನಂದಿಸಿದ್ದಾರೆ.

## ಕೊಟ್ಟೂರು: ಜಿಲ್ಲಾಧಿಕಾರಿ ಭೇಟಿ ಪರಿಶೀಲನೆ



ಕೊಟ್ಟೂರು, ಜೂ. 5 - ಬಳ್ಳಾರಿ ಜಿಲ್ಲಾಧಿಕಾರಿಗಳಾದ ಪವನ್ ಕುಮಾರ್ ಮಲ ಪಾಟಿ ಇವರು ಇಂದು ಕೊಟ್ಟೂರಿನ ತಾಲ್ಲೂಕು ಕಛೇರಿಗೆ ಭೇಟಿ ನೀಡಿ ನಂತರ ಗುರುವಾರ ಸುರಿದ ಭಾರೀ ಮಳೆಯಿಂದ ಪಟ್ಟಣದ ಹ್ಯಾಳ್ಯಾ ರಸ್ತೆಯಲ್ಲಿರುವ ಅಂಬೇಡ್ಕರ್ ನಗರದ ಮನೆಗಳಿಗೆ ನೀರು ನುಗ್ಗಿ ಹಾನಿಯಾಗಿರುವುದರ ಬಗ್ಗೆ ಮಾಹಿತಿ ಪಡೆದರು.

ತಹಶೀಲ್ದಾರ್ ಜಿ. ಅನಿಲ್‌ಕುಮಾರ್ ಅವರಿಂದ ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು ಚರಂಡಿಯನ್ನು ಕೂಡಲೇ ಸ್ವಚ್ಛಗೊಳಿಸುವುದರ ಜೊತೆಗೆ ಇನ್ನೂ ಚರಂಡಿಯ ಕಾಲುವೆಯನ್ನು ಅಗಲ ಮಾಡುವಂತೆ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಟಿ.ಎಸ್. ಗಿರೀಶ್, ಸಿಪಿಐ ದೊಡ್ಡಣ್ಣ, ಪಿ.ಎಸ್.ಐ ನಾಗಪ್ಪ, ಕಂದಾಯ ನಿರೀಕ್ಷಕ ಹಾಲಸ್ವಾಮಿ, ಗ್ರಾಮ ಲೆಕ್ಕಿಗರಾದ ಕೊಟ್ರೇಶ್, ರಮೇಶ್, ಸೌಭಾಗ್ಯ ಇದ್ದರು.

## ಕಾಂಗ್ರೆಸ್‌ನಿಂದ ದಿನಸಿ ಕಿಟ್ ವಿತರಣೆ



ದಾವಣಗೆರೆ, ಜೂ.5 - ನಗರದ ಚಿತ್ರಮಂದಿರದ ನೌಕರ ವರ್ಗದವರಿಗೆ ಜಿಲ್ಲಾ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ದಿನಸಿ ಕಿಟ್‌ಗಳನ್ನು ನೀಡಲಾಯಿತು. ಮುಖಂಡರುಗಳಾದ ಎ.ನಾಗರಾಜ, ಎಲ್.ಹೆಚ್.ಸಾಗರ್, ಪ್ರಕಾಶ್, ಸುಹೀಲ್ ಆರ್.ರಾಕೇಶ್, ಗೀತಾಂಜಲಿ ಚಿತ್ರಮಂದಿರದ ಸೂಪರ್ ವೈಸರ್ ಚಂದ್ರು ಉಪಸ್ಥಿತರಿದ್ದರು.

## ಬ್ಯಾಂಕುಗಳ ಸಿಬ್ಬಂದಿಗೆ ಲಸಿಕೆ



ದಾವಣಗೆರೆ, ಜೂ.5- ಜಿಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳ ಒಕ್ಕೂಟ ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಸಹಯೋಗದಲ್ಲಿ ನಗರದ ದಾವಣಗೆರೆ-ಹರಿಹರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಸಮುದಾಯ ಭವನದಲ್ಲಿ ಬ್ಯಾಂಕುಗಳ ಸಿಬ್ಬಂದಿಗೆ ಕೋವಿಡ್ ಲಸಿಕೆ ಹಾಕಲಾಯಿತು.

ಸಂಸದ ಜಿ.ಎಂ. ಸಿದ್ದೇಶ್ವರ ಅವರು ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಜವಳಿ ವರ್ತಕ ಬಿ.ಸಿ. ಉಮಾಪತಿ, ಬಿಜೆಪಿ ಮುಖಂಡ ದೇವರಮನಿ ಶಿವಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಸಲ್ಲಿಸಿದ ಮನವಿ ಮೇರೆಗೆ ಒಕ್ಕೂಟದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕ ಎಸ್.ಎ.ರವೀಂದ್ರನಾಥ್ ಅವರುಗಳ ಶಿಫಾರಸ್ಸಿನ ಮೇರೆಗೆ ಆರ್.ಸಿ.ಹೆಚ್. ಅಧಿಕಾರಿ ಡಾ.ಮೀನಾಕ್ಷಿ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮವನ್ನು ನಡೆಸಲಾಯಿತು ಎಂದು ದಾವಣಗೆರೆ-ಹರಿಹರ ಅರ್ಬನ್ ಕೋ-ಅಪರೇಟಿವ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ತಿಳಿಸಿದ್ದಾರೆ.

## ರಾಣೇಬೆನ್ನೂರು : ಸಾಲ ಮರುಪಾವತಿಗೆ ಒತ್ತಾಯಿಸದಂತೆ ಮನವಿ

ರಾಣೇಬೆನ್ನೂರು, ಜೂ.5- ಕೊರೊನಾ ಸಂಕಷ್ಟ ಕಾಲದಲ್ಲಿ ಮೈಕ್ರೋ ಫೈನಾನ್ಸ್‌ಗಳು ಸಾಲ ಮರುಪಾವತಿಗೆ ಒತ್ತಾಯಿಸದಂತೆ ತಾಲ್ಲೂಕು ಸ್ತ್ರೀಶಕ್ತಿ ಹಾಗೂ ಸ್ವ-ಸಹಾಯ ಸಂಘಗಳ ಹಿತರಕ್ಷಣಾ ಸಮಿತಿ ಅಧ್ಯಕ್ಷ ರವೀಂದ್ರಗೌಡ ಎಫ್. ಪಾಟೀಲ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ತಹಶೀಲ್ದಾರ್ ಹಾಗೂ ಡಿವೈಎಸ್‌ಪಿ ಅವರಿಗೆ ತಹಶೀಲ್ದಾರ್ ಮುಖಾಂತರ ಮನವಿ ಸಲ್ಲಿಸಿದ್ದಾರೆ.

ಮೈಕ್ರೋ ಫೈನಾನ್ಸ್‌ಗಳಿಗೆ ಹಾಗೂ ಕಿರುಸಾಲ ವಿತರಣಾ ಹಣಕಾಸು ಸಂಸ್ಥೆಗಳಿಗೆ ಆಗಸ್ಟ್ 30 ರವರೆಗೆ ಸಾಲ ವಸೂಲಾತಿಗೆ ಹೋಗದಂತೆ ಕಟ್ಟುನಿಟ್ಟಿನ ಆದೇಶ ಮಾಡುವಂತೆ ಕೋರಿದ್ದಾರೆ. ಸರ್ಕಾರ ಜುಲೈ 30 ರವರೆಗೆ ಸಾಲ ವಸೂಲಾತಿಗೆ ನಿರ್ಬಂಧ ಹೇರಿದೆ. ಆದರೆ ಮುಂಗಾರು ಬಿತ್ತನೆಯ ಈ ಸಂದರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಸಣ್ಣ ಸಣ್ಣ ರೈತರಿಗೆ ಹಣಕಾಸಿನ ಅಡಚಣೆ, ಲಾಕ್‌ಡೌನ್ ಹೊಡೆತಗಳು, ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳುವಂತೆ ಅವರು ಕೇಳಿಕೊಂಡಿದ್ದಾರೆ.

## ಕೂಡ್ಲಿಗಿ : ವಿಶ್ವ ಪರಿಸರ ದಿನಾಚರಣೆ



ಕೂಡ್ಲಿಗಿ, ಜೂ.5- ತಾಲ್ಲೂಕಿನ ಜಮ್ಮೋಬನಹಳ್ಳಿ ಗ್ರಾಮದ ಅರುಣ್ ಬಳಗದವರಿಂದ ಗ್ರಾಮದ ಶಾಲಾ ಆವರಣ ಹಾಗೂ ಗ್ರಾಮ ಪಂಚಾಯ್ತಿ ಆವರಣದಲ್ಲಿ ಸಸಿಗಳನ್ನು ನೆಡುವುದರ ಮೂಲಕ ವಿಶ್ವ ಪರಿಸರ ದಿನವನ್ನು ಆಚರಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ಸದಸ್ಯ ಗೌಡರ ಓಬಯ್ಯ, ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಬಸವರಾಜ್, ಗೊಂಚಿಗರ್ ನಾಗರಾಜ್ , ವಿಆರ್‌ಡಬ್ಲ್ಯೂ ಕಾಮಯ್ಯ, ಕೆ.ಟಿ. ಮಂಜಣ್ಣ, ಶರಣಪ್ಪ, ಅರುಣಕುಮಾರ್ ಚಿಂತಲ್, ತ್ರಿನೇತ್ರ, ಅಜ್ಜಯ್ಯ, ಮೌನೇಶ ಇನ್ನಿತರರಿದ್ದರು.

ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
Civil
ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್ VCS
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399

COVID - 19 AGAINST ITEM ALL ARE AVAILABLE WHOLESALE ONLY
1) 3Ply Surgical-@1.80
2) N95,KN95,Venus,3M orginal Masks@ Rs.8 to above
3) PPE KITS @140
4) OXIMETER Rs.450 to 900
5) VAPORIZER Rs.125 to 180
6) GOGGLES &FACE SHILD@ Rs.13 to 90
7) OXYGEN CONCERNTION@ 52k to 125k
8) OXYGEN MASKS@ 95 to
9) LATEX GLOVES @ 500 to
6361791759 - PETER, 8553449292 - RICHU

# ಖಾತೆಗೆ ಬಂದ ಲಕ್ಷ್ಮಿ ಕೈಗೆ ಸಿಗಲಿಲ್ಲ !

**ಮೇಯರ್-ಉಪಮೇಯರ್ ಸೇರಿ 50 ಸದಸ್ಯರ ಖಾತೆಗೆ ಲಕ್ಷಗಟ್ಟಲೆ ಹಣ ಜಮಾ, ನಂತರ ವಾಪಾಸ್**



ದಾವಣಗೆರೆ, ಜೂ.5- ದಾವಣಗೆರೆ ಮೇಯರ್-ಉಪ ಮೇಯರ್ ಸೇರಿದಂತೆ 50 ಮಂದಿ ಆಡಳಿತ-ವಿಪಕ್ಷಗಳ ಸದಸ್ಯರಿಗೆ ಲಕ್ಷಗಟ್ಟಲೇ ಲಕ್ಷ್ಮಿ ಕಟಾಕ್ಷ ಒಲಿದು, ಕೊನೆಗೆ ಕೈ ತಪ್ಪಿದ ಪ್ರಸಂಗ ತಡವಾಗಿ ಬೆಳಕಿಗೆ ಬಂದಿದೆ.

ನಗರ ಪಾಲಿಕೆ ಮೇಯರ್, ಉಪ ಮೇಯರ್ ಹಾಗೂ ಆಡಳಿತ-ವಿಪಕ್ಷ ಸದಸ್ಯರು, ನಾಮ ನಿರ್ದೇಶಿತ ಸದಸ್ಯರು ಸೇರಿದಂತೆ ಒಟ್ಟು 50 ಜನರ ಬ್ಯಾಂಕ್ ಖಾತೆಗಳಿಗೆ ತಲಾ 6 ಲಕ್ಷದಿಂದ 16 ಲಕ್ಷ ದಿಢೀರನೆ ಜಮೆಯಾಗಿ, ಪುನಃ ಅದು ಖಾತೆಯಿಂದ ಬ್ಯಾಂಕ್‌ಗೆ ವಾಪಾಸ್ಸಾದ ಘಟನೆ ಜರುಗಿದೆ.

ಪಾಲಿಕೆಯಿಂದ ಬರೀ ಗೌರವ ಧನ ಮಾತ್ರ ಬರುವ ಹಿನ್ನೆಲೆಯಲ್ಲಿ ಏಕಾಏಕಿ ಲಕ್ಷಾಂತರ ಜಮಾ ಆಗಿದ್ದರಿಂದ ಕೆಲವರು ಅದನ್ನು ಯಾರ ಬಳಿಯೂ ಹೇಳಿರಲಿಲ್ಲ, ಮತ್ತೆ ಕೆಲವರು ಒಂದಿಷ್ಟು ಹಣವನ್ನೂ ಡ್ರಾ ಮಾಡಿಕೊಂಡಿದ್ದರು.

**ಸೊನ್ನೆಯಲ್ಲಿ ಎಡವಟ್ಟು:** ಕೆಲ ಸದಸ್ಯರು ಪಾಲಿಕೆ ಆಯುಕ್ತರು, ಮುಖ್ಯ ಲೆಕ್ಕಾಧಿಕಾರಿಗೆ ಸಂಪರ್ಕಿಸಿ, ತಮ್ಮ ಖಾತೆಗೆ 6 ಲಕ್ಷ ಜಮಾ ಆಗಿರು ವುದರ ಬಗ್ಗೆ ವಿಚಾರಿಸಿದ್ದಾರೆ. ಅಷ್ಟರಲ್ಲಿ ಮೇಯರ್, ಉಪ ಮೇಯರ್, ಸದಸ್ಯರ ಖಾತೆಗಳಿಗೆ ಹಣ ಕಳಿಸಿದ್ದ ಬ್ಯಾಂಕ್‌ನ ಸಿಬ್ಬಂದಿ ಹಣ ಕಳಿಸುವ ವೇಳೆ ಆದ ತಾಂತ್ರಿಕ ಸಮಸ್ಯೆಯಿಂದಾಗಿ ಗೌರವ ಧನ ನೀಡಬೇಕಾದ ಹಣದ ಜೊತೆಗೆ ಎಲ್ಲಾ 50 ಜನರ ಗೌರವ ಧನದ ಮೊತ್ತದ ಜೊತೆಗೆ 2 ಡಿಜಿಟ್ ಸೊನ್ನೆಗಳು ಹೆಚ್ಚು ಸೇರಿಕೊಂಡಿದ್ದರಿಂದ ಬ್ಯಾಂಕ್‌ನಿಂದ ನೇರವಾಗಿ ಸದಸ್ಯರ ಖಾತೆಗೆ ಸುಮಾರು 3 ಕೋಟಿಗೂ ಅಧಿಕ ಹಣ ಜಮಾ ಆಗಿದೆ.

ಹಣ ಕಳಿಸಿದ ನಂತರ ಬ್ಯಾಂಕ್ ಸಿಬ್ಬಂದಿಗೂ ಲೆಕ್ಕದಲ್ಲಿ ವ್ಯತ್ಯಾಸವಾಗಿದ್ದು, ಮೇಯರ್‌ಗೆ 16 ಸಾವಿರ, ಉಪ ಮೇಯರ್ ಸುಮಾರು 10 ಸಾವಿರ, ಸದಸ್ಯರಿಗೆ ತಲಾ 6 ಸಾವಿರ ಗೌರವ ಧನ ನೀಡಬೇಕಾಗಿತ್ತು. ಆದರೆ ಸೊನ್ನೆಯಲ್ಲಾದ ಎಡವಟ್ಟಿನಿಂದ ಮೇಯರ್‌ಗೆ 16 ಲಕ್ಷ, ಉಪ ಮೇಯರ್‌ಗೆ ಸುಮಾರು 10 ಲಕ್ಷ, ಆಡಳಿತ-ವಿಪಕ್ಷ ಹಾಗೂ ನಾಮ ನಿರ್ದೇಶಿತ ಸದಸ್ಯರು ಸೇರಿದಂತೆ ಒಟ್ಟು 50 ಸದಸ್ಯರಿಗೂ ಸುಮಾರು 3 ಕೋಟಿಗೂ ಅಧಿಕ ಹಣ ಜಮಾ ಆಗಿರುವುದು ಗಮನಕ್ಕೆ ಬಂದಿದೆ. ತಕ್ಷಣವೇ ಎಚ್ಚೆತ್ತ ಬ್ಯಾಂಕ್‌ನವರು ಅನೇಕರ ಖಾತೆಯಲ್ಲಿದ್ದ ಹಣ ಬ್ಲಾಕ್ ಮಾಡಿದ್ದಾರೆ.

ಪಾಲಿಕೆ ಮುಖ್ಯ ಲೆಕ್ಕಾಧಿಕಾರಿ ಪ್ರಶಾಂತ ನಾಯಕ, ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಜೊತೆಗೆ ಬ್ಯಾಂಕ್‌ನ ಅಧಿಕಾರಿಗಳು ಫೋನ್ ಮಾಡಿ, ತಾಂತ್ರಿಕ ದೋಷದಿಂದಾದ ಪ್ರಮಾದವನ್ನು ಗಮನಕ್ಕೆ ತಂದಿದ್ದಾರೆ.

ತಕ್ಷಣವೇ ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ, ಮುಖ್ಯ ಲೆಕ್ಕಾಧಿಕಾರಿ ಪ್ರಶಾಂತ ನಾಯಕ ಸಂಬಂಧಿಸಿದ ಸದಸ್ಯರಿಗೆ ಕರೆ ಮಾಡಿ, ಡ್ರಾ ಮಾಡಿಕೊಂಡ ಹಣವನ್ನು ತಕ್ಷಣವೇ ಬ್ಯಾಂಕ್‌ಗೆ ಜಮಾ ಮಾಡುವಂತೆ ಮನವಿ ಮಾಡಿದ್ದಾರೆ. ಅಧಿಕಾರಿಗಳ ಮನವಿಗೆ ಸ್ಪಂದಿಸಿದ ಸದಸ್ಯರು ತಕ್ಷಣವೇ ತಮ್ಮ ಖಾತೆಗೆ ಡ್ರಾ ಮಾಡಿಕೊಂಡಷ್ಟು ಹಣ ಜಮಾ ಮಾಡಿದ್ದಾರೆ. ಖಾತೆಗೆ ಹಣ ಜಮಾ ಆಗುತ್ತಿದ್ದಂತೆ ಅಷ್ಟೂ ಹಣವನ್ನು ಬ್ಯಾಂಕ್ ಹಿಂಪಡೆದು, ಮೇಯರ್‌ಗೆ 16 ಸಾವಿರ, ಉಪ ಮೇಯರ್‌ಗೆ 10 ಸಾವಿರ, ಇತರೆ 48 ಸದಸ್ಯರಿಗೆ ತಲಾ 6 ಸಾವಿರ ಗೌರವ ಧನವನ್ನು ಜಮೆಗೆ ಕ್ರಮಕೈಗೊಳ್ಳಲಾಗಿದೆ.

# 2025ರ ಒಳಗೆ ಪೆಟ್ರೋಲ್‌ನಲ್ಲಿ ಶೇ.20ರ ಎಥೆನಾಲ್

ನವದೆಹಲಿ, ಜೂ. 5 – ಪೆಟ್ರೋಲ್‌ನಲ್ಲಿ ಶೇ.20ರ ಎಥೆನಾಲ್ ಬಳಸಲು 2025ರ ಒಳಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಈ ಹಿಂದೆ 2030ರ ಒಳಗೆ ಈ ಗುರಿ ತಲುಪಲು ಉದ್ದೇಶಿಸಲಾಗಿತ್ತು. ಕಬ್ಬು, ಕೃಷಿ ಕೊಳೆ ಹಾಗೂ ಹಾಳಾದ ಧಾನ್ಯಗಳಿಂದ ಎಥೆನಾಲ್ ಉತ್ಪಾದಿಸಲಾಗುತ್ತದೆ. ಎಥೆನಾಲ್ ಅನ್ನು ಪೆಟ್ರೋಲ್‌ನಲ್ಲಿ ಬೆರೆಸುವುದರಿಂದ ಆಮದು ಕಡಿಮೆಯಾಗುವ ಜೊತೆಗೆ, ರೈತರಿಗೆ ಪರ್ಯಾಯ ಆದಾಯ ಸಿಕ್ಕಂತಾಗುತ್ತದೆ.

ಎಥೆನಾಲ್ ಬೆರೆಸುವ ಮಾರ್ಗಸೂಚಿ ಕುರಿತು ಹೇಳಿಕೆ ನೀಡಿರುವ ಮೋದಿ, ಶೇ.20ರ ಎಥೆನಾಲ್ ಬೆರೆಸುವ ಗುರಿಯನ್ನು 2030 ರಿಂದ 2025ಕ್ಕೆ ಹಿಂದೆ ಸರಿಸಲಾಗಿದೆ ಎಂದು ಹೇಳಿದ್ದಾರೆ.

2022ರ ವೇಳೆಗೆ ಶೇ.10 ಹಾಗೂ 2030ರ ವೇಳೆಗೆ ಶೇ.20ರಷ್ಟು ಎಥೆನಾಲ್ ಬೆರೆಸುವ ಗುರಿ ಸರ್ಕಾರದ್ದಾಗಿತ್ತು. ಪ್ರಸಕ್ತ ಶೇ.8.5ರಷ್ಟು ಎಥೆನಾಲ್ ಅನ್ನು ಬೆರೆಸಲಾಗುತ್ತಿದೆ.

ಕಳೆದ ವರ್ಷ ತೈಲ ಕಂಪನಿಗಳು ಎಥೆನಾಲ್ ಖರೀದಿಗಾಗಿ 21 ಸಾವಿರ ಕೋಟಿ ರೂ.ಗಳನ್ನು ನೀಡಿದ್ದವು.

# ಮಿಯಾವಾಕಿ ಪದ್ಧತಿಯಲ್ಲಿ ಅರಣ್ಯೀಕರಣ

## ಡಿಸಿಎಂ ಲೇಔಟ್‌ನ ಉದ್ಯಾನವನದಲ್ಲಿ ಸಸಿ ನೆಟ್ಟು ಚಾಲನೆ ನೀಡಿದ ಸಂಸದ ಸಿದ್ದೇಶ್ವರ



ದಾವಣಗೆರೆ, ಜೂ.5- ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ನಗರದ 25ನೇ ವಾರ್ಡಿನ ಡಿಸಿಎಂ ಲೇಔಟ್‌ನಲ್ಲಿ ನಗರ ಅರಣ್ಯೀಕರಣ ಕಾರ್ಯಕ್ಕೆ ಸಂಸದ ಜಿ.ಎಂ. ಸಿದ್ದೇಶ್ವರ ಇಂದು ಚಾಲನೆ ನೀಡಿದರು.

ಶ್ರೀ ಬನಶಂಕರಿ ದೇವಿ ದೇವಸ್ಥಾನದ ಪಕ್ಕದಲ್ಲಿರುವ ಶ್ರೀ ಸ್ವಾಮಿ ವಿವೇಕಾನಂದ ಉದ್ಯಾನವನದಲ್ಲಿ ಜಪಾನಿನ ಪರಿಸರ ತಜ್ಞ ಮಿಯಾ ವಾಕಿ ಪದ್ಧತಿಯಲ್ಲಿ ಮಹಾ ನಗರದ 13 ಪಾರ್ಕ್‌ಗಳಲ್ಲಿ ಸಸಿ ನೆಟ್ಟು, ಆರೈಕೆ ಮಾಡುವ ಸಂಕಲ್ಪದೊಂದಿಗೆ ಕೆಲವು ಹಣ್ಣು, ಹೂವಿನ ಸಸಿಗಳನ್ನು ನೆಟ್ಟರು. ಸುಮಾರು 300ಕ್ಕೂ ಹೆಚ್ಚು ಸಸಿ ನೆಟ್ಟು, ನಗರ ಅರಣ್ಯೀಕರಣ, ನಗರ ಕಾನನ ಮಾಡುವ ಪಾಲಿಕೆ ಸಂಕಲ್ಪ, ಗುರಿ ಬಗ್ಗೆ ಸಿದ್ದೇಶ್ವರ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಪತ್ರಕರ್ತರೊಂದಿಗೆ ಮಾತನಾಡಿದ ನಗರಪಾಲಿಕೆ ಮಹಾಪೌರರಾದ ಎಸ್.ಟಿ. ವೀರೇಶ್, ಇತ್ತೀಚೆಗೆ ಮಂಗಳೂರಿನ ಶ್ರೀ ರಾಮಕೃಷ್ಣಾಶ್ರಮಕ್ಕೆ ನಾನು ಸೇರಿದಂತೆ ಪಾಲಿಕೆ ಸದಸ್ಯರು, ಅಧಿಕಾರಿಗಳ ತಂಡವು ಭೇಟಿ ನೀಡಿದ್ದ ವೇಳೆ ಅಲ್ಲಿ ಮಿಯಾವಾಕಿ ಪದ್ಧತಿಯಲ್ಲಿ ನಗರ ಅರಣ್ಯ ಪ್ರದೇಶ ಪರಿಕಲ್ಪನೆ. ದಟ್ಟ ಕಾಡಿನ ವಾತಾವರಣ ಮನ ಸೆಳೆಯಿತು ಎಂದು ಹೇಳಿದರು.

ಕಡಿಮೆ ಜಾಗದಲ್ಲಿ ದಟ್ಟ ಕಾನನದ ವಾತಾವರಣ ನಿರ್ಮಿಸುವ ಮೂಲಕ ಹಸಿರು ಹೆಚ್ಚಿಸುವ, ಶುದ್ಧ ಉಸಿರು ಕಲ್ಪಿಸುವ ಯೋಜನೆಯನ್ನು ನಮ್ಮ ಪಾಲಿಕೆ ವ್ಯಾಪ್ತಿಯಲ್ಲೂ ಅಳವಡಿಸಿಕೊಳ್ಳಲು ಸದಸ್ಯರು, ಅಧಿಕಾರಿಗಳೊಂದಿಗೆ ಚರ್ಚಿಸಿ, ಅದನ್ನು ತಾವು ಪ್ರತಿನಿಧಿಸುವ 25ನೇ ವಾರ್ಡ್‌ನಿಂದಲೇ ಆರಂಭಿಸುತ್ತಿದ್ದೇವೆ ಎಂದು ಮೇಯರ್ ತಿಳಿಸಿದರು.

ನೇರಳೆ, ಪೇರಲ ಹೀಗೆ ವಿವಿಧ ಜಾತಿಯ ಹಣ್ಣಿನ ಗಿಡಗಳು, ಹೂವಿನ ಗಿಡಗಳು ಸೇರಿದಂತೆ ನೂರಾರು ಜಾತಿಯ ಸಸಿಗಳನ್ನು ಇಂದಿನಿಂದ ನೆಡಲು ಶುರು ಮಾಡಿದ್ದೇವೆ. 2-3 ದಿನಗಳಲ್ಲೇ ಸಸಿ ನೆಡುವ ಕಾರ್ಯ ಪೂರ್ಣವಾಗಲಿದೆ. ಸಂಸದರ ನೇತೃತ್ವದಲ್ಲಿ ನಡೆದ ಇಂದಿನ ವಿಶ್ವ ಪರಿಸರ ದಿನಾಚರಣೆಗೆ ಸರಿಯಾಗಿ ಮುಂದಿನ ವರ್ಷದ ಹೊತ್ತಿಗೆ ಈ ಸಸಿಗಳೆಲ್ಲಾ ಹತ್ತಾರು ಅಡಿಗಳಷ್ಟು ಬೆಳೆದು, ದಟ್ಟ ಕಾಡಿನ ವಾತಾವರಣ ಕಲ್ಪಿಸಲಿವೆ ಎಂದರು.

### 13 ಉದ್ಯಾನವನಗಳಲ್ಲಿ ಅರಣ್ಯೀಕರಣಕ್ಕೆ ಒತ್ತು : ಮೇಯರ್

ಡಿಸಿಎಂ ಲೇಔಟ್‌ನಲ್ಲಿರುವ ಶ್ರೀ ಬನಶಂಕರಿ ದೇವಸ್ಥಾನ ಪಕ್ಕದಲ್ಲಿನ ಉದ್ಯಾನವನದಲ್ಲೇ ಕಡಿಮೆ ಜಾಗದಲ್ಲಿ ಮಿಯಾ ವಾಕಿ ಪದ್ಧತಿಯಲ್ಲಿ ನಗರ ಅರಣ್ಯೀಕರಣ ಮಾಡಲಾಗುತ್ತಿದೆ. ಸುಮಾರು 300ಕ್ಕೂ ಹೆಚ್ಚು ಸಸಿಗಳನ್ನು ನಿರ್ದಿಷ್ಟ ಅಂತರದಲ್ಲಿ ನೆಟ್ಟು, ಒಂದು ವರ್ಷದ ಕಾಲ ಅವುಗಳಿಗೆ ನೀರುಣಿಸಿ, ಆರೈಕೆ ಮಾಡಲಾಗುವುದು. ನಂತರ ಅವು ಬೆಳೆಯುತ್ತಿದ್ದಂತೆ, ವರ್ಷದ ನಂತರ ಅವುಗಳಿಗೆ ನೀರುಣಿಸುವ ಅಗತ್ಯವೇ ಇಲ್ಲ. ದಟ್ಟ ಅರಣ್ಯದಂತಹ ವಾತಾವರಣದಿಂದಾಗಿ ಅಲ್ಲಿ ಬಿದ್ದ ಎಲೆ, ತಂಪು ವಾತಾವರಣದಿಂದಲೇ ಗಿಡಗಳು ಬೆಳೆಯುತ್ತವೆ. ಅಂತೆಯೇ ಮೊದಲ ಹಂತದಲ್ಲಿ ನಗರದ ಸುಮಾರು 13 ಉದ್ಯಾನವನಗಳಲ್ಲಿ ಮಿಯಾ ವಾಕಿ ಪದ್ಧತಿಯಲ್ಲಿ ನಗರ ಅರಣ್ಯೀಕರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಹಂತ ಹಂತವಾಗಿ ಪಾಲಿಕೆ ಜಾಗಗಳಲ್ಲಿ, ಸರ್ಕಾರಿ ಜಾಗಗಳಲ್ಲಿ ಮಿಯಾ ವಾಕಿ ಪದ್ಧತಿಯಲ್ಲಿ ನಗರ ಕಾನನ ನಿರ್ಮಾಣ ಮಾಡುವ ಆಲೋಚನೆ ಇದೆ.

ಪಾಲಿಕೆಯ ನಗರ ಸುಧಾರಣೆ ಮತ್ತು ಯೋಜನಾ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಡಿ.ಎಸ್. ಉಮಾ ಪ್ರಕಾಶ್ ಮಾತನಾಡಿ, ಜಪಾನ್‌ನ ಪರಿಸರ ತಜ್ಞ ಮಿಯಾ ವಾಕಿ ತೋರಿಸಿದ ಪದ್ಧತಿಯಲ್ಲಿ ಪಾಲಿಕೆ ನಗರ ಅರಣ್ಯೀಕರಣಕ್ಕೆ ಒತ್ತು ನೀಡಿದೆ. ಇದರಿಂದಾಗಿ ಪ್ರಕೃತಿಯಲ್ಲಿ ಅಳಿಲು, ಗುಬ್ಬಿಗಳು, ಪಾರಿವಾಳ, ರತ್ನ ಪಕ್ಷಿ ಹೀಗೆ ನಾನಾ ಪಕ್ಷಿಗಳಿಗೆ ಹಣ್ಣು-ಹಂಪಲು ಸಿಗಲಿದೆ. ನೂರಾರು ಬಗೆಯ ಹೂವುಗಳಿಂದ ಜೇನುಗಳ ಸಂತತಿ ವೃದ್ಧಿಗೂ ಸಹಕಾರಿಯಾಗಲಿದೆ. ಜೇನು ಹುಳುಗಳು ಪ್ರಕೃತಿಯ ಸಮತೋಲನಕ್ಕೆ ತಮ್ಮದೇ ಕೊಡುಗೆ ನೀಡುತ್ತವೆ. ರಾಜ್ಯಕ್ಕೆ ಮಾದರಿಯಾಗುವಂತಹ ಕೆಲಸ ಪಾಲಿಕೆ ಮಾಡುತ್ತಿದೆ ಎಂದರು.

ಜನ ಪ್ರತಿನಿಧಿಗಳು, ಅಧಿಕಾರಿಗಳು, ಸ್ಥಳೀಯ ನಿವಾಸಿಗಳು, ಹಿರಿಯ ನಾಗರಿಕರು, ಮಹಿಳೆಯರು, ಮಾಧ್ಯಮ ಪ್ರತಿನಿಧಿಗಳು ಸಹ ನಗರ ಅರಣ್ಯೀಕರಣ ಕಾರ್ಯಕ್ಕೆ ಶುಭ ಕೋರಿ, ಒಂದೊಂದು ಸಸಿ ನೆಡುವ ಮುಖೇನ ಪರಿಸರ ಸಂರಕ್ಷಣೆಯ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ, ಮುಖಂಡರಾದ ವಕೀಲ ಎ.ವೈ. ಪ್ರಕಾಶ, ರಮೇಶ ಬಸಪ್ಪ, ಡಿಸಿಎಂ ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಚನ್ನಬಸಪ್ಪ, ಸಾಂಬಾಜಿ, ವಿಜಯಕುಮಾರ್, ಚಂದ್ರು, ಸುಮಾ, ಎ.ಪಿ. ಗಗನ್ ದೀಪ್ ಇತರರು ಇದ್ದರು.

## 8 ರಂದು ನಗರಕ್ಕೆ ಕೃಷಿ ಸಚಿವ ಬಿ.ಸಿ.ಪಾಟೀಲ್

ದಾವಣಗೆರೆ, ಜೂ.5- ರಾಜ್ಯ ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರು ಇದೇ ದಿನಾಂಕ 8 ರ ಮಂಗಳವಾರ ನಗರಕ್ಕೆ ಆಗಮಿಸಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ನಗರಕ್ಕೆ ಆಗಮಿಸುವ ಸಚಿವರು, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆ ನಡೆಸುವರು. ಮುಂಗಾರು ಪ್ರಾರಂಭವಾಗುವ ಹಿನ್ನೆಲೆಯಲ್ಲಿ ರೈತರಿಗೆ ಅನುಕೂಲವಾಗುವಂತೆ ಜಿಲ್ಲೆಯಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳ ಲಭ್ಯತೆ ಹಾಗೂ ಪೂರ್ವ ಸಿದ್ಧತೆ ಕುರಿತು, ಜಿಲ್ಲೆಯ ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು ಹಾಗೂ ಕೃಷಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸುವರು. ಅಂದು ಮಧ್ಯಾಹ್ನ 12 ಗಂಟೆಗೆ ಚಿತ್ರದುರ್ಗಕ್ಕೆ ಪ್ರಯಾಣ ಬೆಳೆಸುವರು.

## ಕೋವ್ಯಾಕ್ಸಿನ್‌ಗೆ ಬ್ರೆಜಿಲ್ ಅನುಮತಿ

ಹೈದರಾಬಾದ್, ಜೂ. 5 –ಭಾರತ್ ಬಯೋಟೆಕ್ ಉತ್ಪಾದಿಸುವ ಕೋವ್ಯಾಕ್ಸಿನ್ ಲಸಿಕೆಗೆ ಬ್ರೆಜಿಲ್ ಒಪ್ಪಿಗೆ ನೀಡಿದೆ.

ಬ್ರೆಜಿಲ್‌ನ ಆರೋಗ್ಯ ಸಂಸ್ಥೆಯಾದ ಅವಿಸಾ, ಈ ಹಿಂದೆ ಕೋವ್ಯಾಕ್ಸಿನ್ ಲಸಿಕೆ ಆಮದಿಗೆ ಅನುಮತಿ ನಿರಾಕರಿಸಿತ್ತು. ಈ ಲಸಿಕೆ ಉತ್ತಮ ಉತ್ಪಾದನಾ ಪದ್ಧತಿಗಳಿಗೆ ಅನುಗುಣವಾಗಿಲ್ಲ ಎಂದು ಹೇಳಲಾಗಿತ್ತು. ನಂತರದಲ್ಲಿ ಕೋವ್ಯಾಕ್ಸಿನ್ ಹಾಗೂ ರಷ್ಯಾದ ಸ್ಪುಟ್ನಿಕ್ ವಿ ಲಸಿಕೆಗಳ ಆಮದಿಗೆ ಒಪ್ಪಿಗೆ ನೀಡಲಾಗಿದೆ. ಆರಂಭವದಲ್ಲಿ 40 ಲಕ್ಷ ಕೋವ್ಯಾಕ್ಸಿನ್ ಲಸಿಕೆ ಪಡೆಯುವ ಉದ್ದೇಶ ಬ್ರೆಜಿಲ್‌ನದ್ದಾಗಿದೆ.

## ಟಿ20 ಪಂದ್ಯಾವಳಿ ಯುಎಇಗೆ ಪ್ರಸ್ತಾಪ

ನವದೆಹಲಿ ಜೂ. 5 – ಈ ವರ್ಷ ಅಕ್ಟೋಬರ್ - ನವೆಂಬರ್‌ನಲ್ಲಿ ನಡೆಯಬೇಕಿರುವ ಟಿ20 ಕ್ರಿಕೆಟ್ ಪಂದ್ಯಾವಳಿಯನ್ನು ಯುಎಇ ಹಾಗೂ ಓಮನ್‌ಗೆ ಸ್ಥಳಾಂತರಿಸಲಾಗಿದೆ ಎಂದು ಐ.ಸಿ.ಸಿ.ಗೆ ಭಾರತೀಯ ಕ್ರಿಕೆಟ್ ಮಂಡಳಿಯಾದ ಬಿ.ಸಿ.ಸಿ.ಐ. ತಿಳಿಸಿದೆ.

ಕೊರೊನಾ ಹಿನ್ನೆಲೆಯಲ್ಲಿ ಪಂದ್ಯಾವಳಿಯನ್ನು ದೇಶದಿಂದ ಹೊರಕ್ಕೆ ವರ್ಗಾಯಿಸಲಾಗುತ್ತಿದೆ. ಅಬು ಧಾಬಿ, ದುಬೈ ಹಾಗೂ ಶಾರ್ಜಾ ನಂತರ ಮಸ್ಕಟ್‌ಗಳನ್ನು ಪರ್ಯಾಯ ಆಯ್ಕೆಯಾಗಿ ಬಿಸಿಸಿಐ ಪರಿಗಣಿಸಿದೆ.

# ಬೀಜಕ್ಕಾಗಿ ಕೃಷಿ ಕೇಂದ್ರಕ್ಕೆ ರೈತರು



ಹರಿಹರ,ಜೂ.5- ಕಳೆದ ಮೂರ್ನಾಲ್ಕು ದಿನಗಳಿಂದ ತಾಲ್ಲೂಕಿನಲ್ಲಿ ಸುರಿದ ಮುಂಗಾರು ಮಳೆಯಿಂದಾಗಿ ರೈತರ ಮುಖದಲ್ಲಿ ಮಂದಹಾಸ ಮೂಡಿದ್ದು, ಬಿತ್ತನೆ ಬೀಜಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಕೃಷಿ ಸಂಪರ್ಕ ಕೇಂದ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಗ್ರಾಮೀಣ ಪ್ರದೇಶದಿಂದ ಆಗಮಿಸಿದ್ದರು.

ಕೃಷಿ ಇಲಾಖೆ ಅಧಿಕಾರಿ ವಿ.ಪಿ. ಗೋವರ್ಧನ್ ಮಾತನಾಡಿ, ಸರ್ಕಾರ ಕಳೆದ ಬಾರಿ ಒಬ್ಬ ರೈತರಿಗೆ ಎಕರೆಗೆ 4 ಕೆ.ಜಿ. ಬೀಜಗಳನ್ನು ವಿತರಣೆ ಮಾಡುವುದಕ್ಕೆ ಅವಕಾಶ ನೀಡಿತ್ತು. ಆದರೆ ಈ ಬಾರಿ ಎಕರೆಗೆ 8 ಕೆ.ಜಿ. ಬಿತ್ತನೆ ಬೀಜಗಳನ್ನು ನೀಡುವುದಕ್ಕೆ ಅವಕಾಶ ನೀಡಿದ್ದು, ಗರಿಷ್ಠ 5 ಎಕರೆ ಜಮೀನುಗಳಿಗೆ ಆಗುವಷ್ಟು ಬಿತ್ತನೆ ಬೀಜಗಳನ್ನು ನೀಡಲಾಗುತ್ತದೆ.

ರೈತರಿಗೆ ಯಾವುದೇ ರೀತಿಯ ತೊಂದರೆ ಬರದಂತೆ ನಮ್ಮಲ್ಲಿ ಮೆಕ್ಕೆಜೋಳ ಸಿ.ಪಿ. 818, ಸಿ.ಪಿ. 228, ಸಿ.ಪಿ. 201, ಕಾವೇರಿ 22, ಕೆ. 55, ಎನ್.ಕೆ. 62-40, ಎನ್.ಕೆ. 30, ಪ್ರೋ ಲೈನ್ 105, ಪ್ರೋ ಲೈನ್ 333, ತೊಗರಿ ಟಿ.ಎಸ್.3 ಆರ್. ಅಲಸಂದಿ, ಡಿ.ಸಿ. 15, ಜೋಳ ಹೈಬ್ರೀಡ್ ಜೆ.ಕೆ.ಎಸ್.ಹೆಚ್. 22, ಸೇರಿದಂತೆ ಇತರೆ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗುತ್ತಿದೆ.

ಅಂತರ ಬೆಳೆಗಳನ್ನು ಬೆಳೆಯಲು ತೊಗರಿಗೆ ಪ್ರೋತ್ಸಾಹ ನೀಡುತ್ತಿದ್ದು, ತೊಗರಿ ಬೀಜಗಳನ್ನು ನೀಡುತ್ತಿದ್ದು ಹೊಟೆಗನಹಳ್ಳಿ, ಭಾನುವಳ್ಳಿ, ಬೆಳ್ಳೂಡಿ ಗ್ರಾಮದ ರೈತರಿಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಇದರ ಜೊತೆಗೆ ಉಳಿದ ಯಾವುದೇ ಗ್ರಾಮದ ರೈತರು ಆಸಕ್ತಿಯನ್ನು ತೋರಿಸಿ ಬಂದರೆ ಅವರಿಗೂ ನೀಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹುಣಸಿಕಟ್ಟಿ ಎಂ.ಎಂ. ಯೋಗೇಶ್ ಗೌಡ, ಪ್ರಸಾದ್ ಇನ್ನಿತರರು ಹಾಜರಿದ್ದರು.

# ಜಿಲ್ಲೆಯಲ್ಲಿ 7.8 ಮಿ.ಮೀ. ಸರಾಸರಿ ಮಳೆ

ದಾವಣಗೆರೆ, ಜೂ.5- ಜಿಲ್ಲೆಯಲ್ಲಿ ಜೂ.4 ರಂದು 7.8 ಮಿ.ಮೀ. ಸರಾಸರಿ ಮಳೆಯಾಗಿದೆ. ಒಟ್ಟಾರೆ 1 ಲಕ್ಷ ರೂ. ಅಂದಾಜು ನಷ್ಟ ಸಂಭವಿಸಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ 4.34 ಮಿ.ಮೀ ವಾಸ್ತವ ಮಳೆಯಾಗಿದೆ. ದಾವಣಗೆರೆ - 7.45 ಮಿ.ಮೀ, ಹರಿಹರ - 5.90 ಮಿ.ಮೀ, ಹೊನ್ನಾಳಿ - 2.40 ಮಿ.ಮೀ ಹಾಗೂ ಜಗಳೂರು ತಾಲ್ಲೂಕಿನಲ್ಲಿ 15.50 ಮಿ.ಮೀ ವಾಸ್ತವ ಮಳೆಯಾಗಿದೆ.

ಹರಿಹರ ಹಾಗೂ ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ ತಲಾ ಒಂದು ಪಕ್ಕಾ ಮನೆ ಭಾಗಶಃ ಹಾನಿಯಾಗಿದ್ದು, ಒಟ್ಟು 01 ಲಕ್ಷ ರೂ. ಅಂದಾಜು ನಷ್ಟ ಸಂಭವಿಸಿದೆ.

ಸರ್ಕಾರದ ಮಾರ್ಗಸೂಚಿ ಅನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.


॥ ಶ್ರೀ ಹೇಮರಡ್ಡಿ ಮಲ್ಲಮ್ಮ ಕೃಪೆ॥

**96ನೇ ಹುಟ್ಟುಹಬ್ಬದ ಶುಭಾಶಯಗಳು**



**ಶ್ರೀ ಆರ್. ರುದ್ರಯ್ಯನವರು**

ಜಿಲ್ಲಾ ಬಿ.ಜೆ.ಪಿ., ಮಾಜಿ ಅಧ್ಯಕ್ಷರು, ಚಿತ್ರದುರ್ಗ.
ಮಾಜಿ ಗೌ॥ ಸಲಹೆಗಾರರು
ಎಸ್.ಜೆ.ಎಂ. ವಿದ್ಯಾಪೀಠ, ಚಿತ್ರದುರ್ಗ.
ನಿವೃತ್ತ ವಿದ್ಯಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರೀತಿಯ ಅಪ್ಪ... ಇಂದು 96ನೇ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ನೀವು, ಶತಮಾನೋತ್ಸವ ಆಚರಿಸುವಂತಾಗಲೀ ಎಂದು ಹಾರೈಸುವ...

✧ ಶ್ರೀ ಆರ್. ಚಂದ್ರಮೌಳಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್
✧ ಶ್ರೀಮತಿ ಸುಧಾ ಬಿ.ವಿ., ಸಹಾಯಕ ಕೃಷಿ ನಿರ್ದೇಶಕರು
✧ ಶ್ರೀಮತಿ ಅನಂತಮ್ಮ ಬಿ.ವಿ. ವೀರಭದ್ರಪ್ಪ, ದಾವಣಗೆರೆ.
✧ ಶ್ರೀ ಪ್ರಮುಖ್, ಶ್ರೀಮತಿ ಪೂಜಿತಾ, ಶ್ರೀ ಪ್ರತೀಕ್, ಯು.ಎಸ್.ಎ.
✧ ಮಕ್ಕಳು ✧ ಸೊಸೆಯಂದಿರು ✧ ಅಳಿಯಂದಿರು ✧ ಮೊಮ್ಮಕ್ಕಳು ✧ ಮರಿಮೊಮ್ಮಕ್ಕಳು
✧ ಬಂಧು-ಮಿತ್ರರು ✧ ಅಸಂಖ್ಯಾತ ಶಿಷ್ಯ ವೃಂದ ✧ ಸಮಸ್ತ ಗನ್ನಾಯಕನಹಳ್ಳಿ ಗ್ರಾಮಸ್ಥರು ಹಾಗೂ ಆರ್. ಆರ್. ಕುಟುಂಬ ವರ್ಗ.


## ರಾಜ್ಯದಲ್ಲಿ ಮುಂಗಾರು ಮತ್ತಷ್ಟು ವ್ಯಾಪಕ

ಬೆಂಗಳೂರು, ಜೂ. 5 – ರಾಜ್ಯದಲ್ಲಿ ಮುಂಗಾರು ಮತ್ತಷ್ಟು ವ್ಯಾಪಕವಾಗಿ ಹರಡಿದ್ದು, ರಾಜ್ಯದ ಒಳನಾಡಿನಲ್ಲಿ ವ್ಯಾಪಕ ಮಳೆಯಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಉತ್ತರ ಒಳನಾಡು ಸೇರಿದಂತೆ ರಾಜ್ಯದ ಹಲವೆಡೆ ವ್ಯಾಪಕ ಮಳೆಯಾಗುತ್ತಿದೆ. ಕರಾವಳಿ ಸೇರಿದಂತೆ ಹಲವೆಡೆ ಕಟ್ಟೆಚ್ಚರ ವಹಿಸಲಾಗಿದೆ ಎಂದು ವಿಕೋಪ ನಿರ್ವಹಣಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮುಂದಿನ 48 ಗಂಟೆಗಳಲ್ಲಿ ರಾಜ್ಯದ ಹಲವೆಡೆ ಧಾರಾಕಾರ ಮಳೆಯಾಗಲಿದೆ ಎಂದವರು ಹೇಳಿದ್ದಾರೆ.

## ಉಪರಾಷ್ಟ್ರಪತಿ, ಆರ್.ಎಸ್.ಎಸ್. ಮುಖಂಡರ ಟ್ವಿಟ್ಟರ್ ಖಾತೆ ಮಾನ್ಯತೆ ವಾಪಸ್

ನವದೆಹಲಿ, ಜೂ. 5 – ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ಆರ್.ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಆರ್.ಎಸ್.ಎಸ್.ನ ಉನ್ನತ ಪದಾಧಿಕಾರಿಗಳಿಗೆ ನೀಡಲಾಗಿದ್ದ ಅಧಿಕೃತ ಟ್ವಿಟ್ಟರ್ ಖಾತೆಯ ಮಾನ್ಯತೆಯನ್ನು ಸಾಮಾಜಿಕ ಜಾಲತಾಣ ವಾಪಸ್ ಪಡೆದಿದೆ. ವಿವಾದದ ನಂತರ ಮತ್ತೆ ಬಹುತೇಕರ ಖಾತೆಗಳ ಮಾನ್ಯತೆಯನ್ನು ವಾಪಸ್ ನೀಡಿದೆ.

ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರ ವೈಯಕ್ತಿಕ ಖಾತೆಯ ಮಾನ್ಯತೆಯನ್ನೂ ವಾಪಸ್ ಪಡೆಯಲಾಗಿತ್ತು. ಆಕ್ಷೇಪಣೆಯ ನಂತರ ಬ್ಲೂ ಟಿಕ್ ಮಾನ್ಯತೆಯನ್ನು ನೀಡಲಾಗಿದೆ. ಆರ್.ಎಸ್.ಎಸ್.ನ ಹಲವಾರು ಮುಖಂಡರ ಮಾನ್ಯತೆಯನ್ನೂ ವಾಪಸ್ ನೀಡಲಾಗಿದೆ. ಟ್ವಿಟ್ಟರ್ ಖಾತೆಗಳು ನಿಷ್ಕ್ರಿಯವಾಗಿರುವ ಕಾರಣ ಮಾನ್ಯತೆ ವಾಪಸ್ ಪಡೆದಿರುವುದಾಗಿ ಕಂಪನಿ ಹೇಳಿದೆ. ಆದರೆ, ಸಾಕಷ್ಟು ಖಾತೆಗಳು ನಿಷ್ಕ್ರಿಯವಾಗಿದ್ದರೂ ಮಾನ್ಯತೆ ವಾಪಸ್ ಪಡೆದಿಲ್ಲ ಎಂದು ಆಕ್ಷೇಪಣೆಗಳು ವ್ಯಕ್ತವಾಗಿವೆ.


**ಭಾವಪೂರ್ಣ ಶ್ರದ್ಧಾಂಜಲಿ**



ನನ್ನ ಸಹೋದರಿ

**ಶ್ರೀಮತಿ ಎಸ್. ಜಿ. ವಿನೋದ**

(ಶ್ರೀ ಎಸ್.ಜಿ. ಜಗದೀಶ್, ನಿವೃತ್ತ ಪೋಲೀಸ್ ಅಧಿಕಾರಿ ಇವರ ಧರ್ಮಪತ್ನಿ)

ಇವರು ದಿನಾಂಕ 05.06.2021ರಂದು ಅಕಾಲಿಕವಾಗಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ರುದ್ರಮುನಿ ಜಗಲೂರು, ಮಾಲೀಕರು
ಮತ್ತು ಕುಟುಂಬ ವರ್ಗದವರು
ಹಾಗು ಸಿಬ್ಬಂದಿ ವರ್ಗ

**ಜಗಲೂರು ರೈಸ್ ಮಿಲ್**
ಭಾರತ್ ಕಾಲೋನಿ, ದಾವಣಗೆರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte